ಡಿಸೆಂಬರ್ 22, 2024
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

1964
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಅಪ್ರಾಪಳನ್ನು ಮದುವೆ ಮಾಡಿಕೊಡಲು ನಿರಾಕರಿಸಿದ ತಾಯಿ-ಮಗನನ್ನು

# ಬರ್ಬರವಾಗಿ ಕೊಚ್ಚಿ ಹಾಕಿದ ಪಾಗಲ್ ಪ್ರೇಮಿ!






## ಇಂಡಿಯಾ ಒಕ್ಕೂಟಕ್ಕೆ ಕೇಜ್ರಿವಾಲ್ ಗುನ್ನಾ!

## ಟೆಕ್ಕಿಯ ಆತ್ಮಹತ್ಯೆಗೆ ಕಾರಣರಾದವರು ಅರೆಸ್ಟ್






## ಪತಿಯ ಅನೈತಿಕ ಸಂಬಂಧಕ್ಕೆ ಪತ್ನಿ ಬಲಿ!

## ಗಂಡನ ಕೊಂದು ಶವವನ್ನು ಎರಡು ತುಂಡು ಮಾಡಿದ ಪತ್ನಿ!



**ಕೇಂದ್ರದಲ್ಲಿ ಭಾರೀ ದೊಡ್ಡ ರಾಜಕೀಯ ಬದಲಾವಣೆ ಆಗಿ ಹೋಗುತ್ತದೆ ಎಂದು ನಂಬಿದ್ದವರಿಗೆ ಈಗ ನಿರಾಸೆಯಾಗಿದೆ. ಕಾರಣ ಪ್ರಧಾನಿ ನರೇಂದ್ರ ಮೋದಿಗೆ ಟಕ್ಕರ್ ಕೊಡಲು ಹುಟ್ಟಿಕೊಂಡ ಇಂಡಿಯಾ ಒಕ್ಕೂಟದಲ್ಲಿ ಒಗ್ಗಟ್ಟು ಮಾಯವಾಗಿದ್ದು, ಸಂದರ್ಭಕ್ಕೆ ತಕ್ಕಂತೆ ರಾಜಕೀಯ ನಡೆ ಅನುಸರಿಸುತ್ತಿರುವ ಸಹ ಪಕ್ಷಗಳು ಒಂದೊಂದಾಗಿ ಕಳಚಿಕೊಳ್ಳುವ ಲಕ್ಷಣಗಳು ಕಾಣಿಸುತ್ತಿವೆ. ಕೇವಲ ಲೋಕಸಭಾ ಚುನಾವಣೆಗಷ್ಟೆ ಸೀಮಿತವಾಗಿದ್ದ ಒಗ್ಗಟ್ಟಿನ ಹೋರಾಟ ವಿಧಾನಸಭಾ ಚುನಾವಣೆ ವೇಳೆ ಮೂಲೆ ಸೇರಿದ್ದು ಒಕ್ಕೂಟದ ಸಹ ಪಕ್ಷಗಳೇ ಎದುರಾಳಿಗಳಾಗುತ್ತಿದ್ದಾರೆ. ಇದನ್ನೆಲ್ಲ ಗಮನಿಸಿದರೆ ಇಂಡಿಯಾ ಒಕ್ಕೂಟ ಒಟ್ಟಾಗಿ ಉಳಿಯುವುದು ಅನುಮಾನವೇ...**




# ಇಂಡಿಯಾ ಒಕ್ಕೂಟಕ್ಕೆ ಕೇಜ್ರಿವಾಲ್ ಗುನ್ನಾ!

## ದೆಹಲಿ ವಿಧಾನಸಭಾ ಚುನಾವಣೆಗಾಗಿ ಐಎನ್‌ಡಿಐಎ ಮೈತ್ರಿ ಮುರಿದ ಆಮ್ ಆದ್ಮಿ ಪಾರ್ಟಿ



✍ಬಿ.ಎಂ. ಲವಕುಮಾರ್

ಸ್ವಾರ್ಥ, ಅಧಿಕಾರ ಲಾಲಸೆಯೇ ತುಂಬಿಕೊಂಡಿರುವ ರಾಜಕೀಯದಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಸಿದ್ಧಾಂತಗಳನ್ನು ಬದಲಾಯಿಸಿ ರಾಜಕೀಯ ಮಾಡುವುದು ರಾಜಕೀಯ ಪಕ್ಷಕ್ಕೆ ಮತ್ತು ನಾಯಕರಿಗೆ ಕಷ್ಟವೇನಲ್ಲ. ಹಾಗೆಯೇ ಚುನಾವಣೆಯಿಂದ ಚುನಾವಣೆಗೆ ತಮ್ಮ ನಿಲುವುಗಳನ್ನು ಕಿತ್ತು ಎಸೆಯುವುದರಲ್ಲಿಯೂ ನಾಯಕರು ಹಿಂದೆ ಬಿದ್ದಿಲ್ಲ. ಹೀಗಾಗಿ ದೇಶದಲ್ಲಿ ರಾಜಕೀಯ ಪಕ್ಷಗಳ ಮೈತ್ರಿ ಗಟ್ಟಿಯಾಗಿ ಉಳಿಯುತ್ತಿಲ್ಲ. ಇದೀಗ ಪ್ರಧಾನಿ ನರೇಂದ್ರಮೋದಿಯನ್ನು ಕಟ್ಟಿಹಾಕಬೇಕೆಂದು ಹುಟ್ಟಿಕೊಂಡ ಕಾಂಗ್ರೆಸ್ ನೇತೃತ್ವದ ಐಎನ್‌ಡಿಐಎ ಪರಿಸ್ಥಿತಿಯೂ ಭಿನ್ನವಾಗಿಲ್ಲ.

ಲೋಕಸಭಾ ಚುನಾವಣೆ ಕಳೆಯುತ್ತಿದ್ದಂತೆಯೇ ಮೈತ್ರಿ ಕಳಚಿಕೊಳ್ಳಲಾರಂಭಿಸಿದ್ದು, ಇಂಡಿಯಾದೊಳಗೆ ತಳಮಳ ಶುರುವಾಗಿದೆ. ಪ್ರಾದೇಶಿಕ ಪಕ್ಷಗಳು ತಮ್ಮ ಬುಡಗಟ್ಟಿ ಮಾಡಿಕೊಳ್ಳುವ ತವಕದಲ್ಲಿವೆ. ಮುಂದೆ ಬರುವ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಜತೆಗೆ ಹೋದರೆ ತಮಗೆ ಉಳಿಗಾಲವಿಲ್ಲ ಎಂಬ ನಿರ್ಧಾರಕ್ಕೆ ಬಂದಿವೆ. ಹೀಗಾಗಿ ಮೈತ್ರಿ ಮಾಡಿಕೊಂಡು ಒಟ್ಟಾಗಿ ಚುನಾವಣೆಗೆ ಹೋಗಲು ಹಿಂದೇಟು ಹಾಕುತ್ತಿವೆ. ಈ ಪೈಕಿ ಎಎಪಿ ಕಾಂಗ್ರೆಸ್ ಜತೆಗೆ ವಿಧಾನಸಭಾ ಚುನಾವಣೆಯನ್ನು ಎದುರಿಸಲು ಸುತರಾಂ ಒಪ್ಪುತ್ತಿಲ್ಲ. ಹೀಗಾಗಿ ಮುಂಬರುವ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಇಂಡಿಯಾ ಒಕ್ಕೂಟದ ಮಿತ್ರ ಪಕ್ಷಗಳಾಗಿರುವ ಕಾಂಗ್ರೆಸ್ ಮತ್ತು ಎಎಪಿ ಎದುರಾಳಿಗಳಾಗಿ ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಈ ಬೆಳವಣಿಗೆ ಸದ್ಯ ಇಂಡಿಯಾ ಒಕ್ಕೂಟದ ನಾಯಕರ ಆತಂಕಕ್ಕೆ ಕಾರಣವಾಗಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಹೆಚ್ಚು ದಿನ ನಡೆಯಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಸರ್ವಾಧಿಕಾರಕ್ಕೆ ಅಂತ್ಯ ಹಾಡಿದೆ. ಇನ್ನು ಮುಂದೆ ಜೆಡಿಯುನ ನಿತೀಶ್‌ಕುಮಾರ್ ಹಾಗೂ ಟಿಡಿಪಿಯ ಚಂದ್ರಬಾಬುನಾಯ್ಡು ಹೇಳಿದಂತೆ ಕೇಳಿಕೊಂಡು ಆಡಳಿತ ನಡೆಸಬೇಕು, ಎನ್‌ಡಿಎ ಹೆಚ್ಚು ದಿನ ಅಧಿಕಾರದಲ್ಲಿ ಉಳಿಯಲ್ಲ ಎಂದೆಲ್ಲ ಬಡಬಡಾಯಿಸಿದ ಇಂಡಿಯಾ ಒಕ್ಕೂಟದ ನಾಯಕರು ಇದೀಗ ನಮ್ಮೊಳಗೆ ಎಲ್ಲವೂ ಸರಿಯಿಲ್ಲ ಎಂಬ ಸಂದೇಶವನ್ನು ಸಾರುತ್ತಿದ್ದು, ಇದು ಹೀಗೆಯೇ ಮುಂದುವರೆದರೆ ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ದುರ್ಬಲವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗೆಯೇ ಎನ್‌ಡಿಎ ನತ್ತ ಕೆಲವು ಪಕ್ಷಗಳು ಮುಖ ಮಾಡಿದರೂ ಅಚ್ಚರಿಯಿಲ್ಲ.



ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಪಕ್ಷಗಳಿಂದ ರಚನೆಯಾಗಿರುವ ಇಂಡಿಯಾ ಒಕ್ಕೂಟದಲ್ಲಿ ಪ್ರಾದೇಶಿಕ ಪಕ್ಷಗಳ ಸಂಖ್ಯೆ ಜಾಸ್ತಿಯಿದೆ. ಅದರಲ್ಲೂ ಎಎಪಿ, ಟಿಎಂಸಿ ಮತ್ತು ಎಸ್‌ಪಿ ಪಕ್ಷಗಳು ಪ್ರಾಬಲ್ಯ ಹೊಂದಿವೆ. ಎಎಪಿ ದೆಹಲಿಯಿಂದ ಆಚೆಗೂ ವಿಸ್ತರಿಸಿದ್ದು, ಈಗಾಗಲೇ ದೆಹಲಿ ಮತ್ತು ಪಂಜಾಬ್‌ನಲ್ಲಿ ಆಡಳಿತ ನಡೆಸುತ್ತಿದೆ. ಹೀಗಾಗಿ ಅದು ತನ್ನದೇ ಪ್ರಾಬಲ್ಯದಲ್ಲಿ ವಿಧಾನಸಭಾ ಚುನಾವಣೆಯನ್ನು ಗೆಲ್ಲುವ ಸಾಮರ್ಥ್ಯ ಹೊಂದಿದೆ. ಅಷ್ಟೇ ಅಲ್ಲದೆ ಕಾಂಗ್ರೆಸ್‌ನೊಂದಿಗೆ ಹೋರಾಡಿಕೊಂಡೇ ಅಧಿಕಾರ ಪಡೆದುಕೊಂಡಿದೆ. ಮುಂದೆಯೂ ಅದನ್ನೇ ಮಾಡಬೇಕಿದೆ. ಅಲ್ಲಿ ಇಂಡಿಯಾ ಒಕ್ಕೂಟದಲ್ಲಿದ್ದೇವೆ ಎಂಬ ಕಾರಣಕ್ಕೆ ಕಾಂಗ್ರೆಸ್ ಜತೆಗೆ ಹೋದರೆ ಅದರ ಪರಿಣಾಮಗಳು ಪಕ್ಷದ ಮೇಲೆ ಬೀಳಲಿದೆ. ಮುಂದೆ ರಾಜ್ಯದಲ್ಲಿ ಗಟ್ಟಿಯಾಗಿ ನೆಲೆಯೂರಲು ಕಷ್ಟವಾಗಲಿದೆ. ಒಂದು ವೇಳೆ ಕಾಂಗ್ರೆಸ್ ಜತೆಗೆ ಹೋದರೆ ಒಂದಷ್ಟು ಸ್ಥಾನಗಳನ್ನು ಬಿಟ್ಟುಕೊಡಬೇಕಾಗಿ ಬರಬಹುದು ಈ ವೇಳೆ ಪಕ್ಷದೊಳಗೆ ಅಸಮಾಧಾನ ಮೂಡಿ ಬಂಡಾಯ ಏಳುವ ಸಾಧ್ಯತೆಯಿದ್ದು, ಇದನ್ನು ಎದುರಾಳಿ ಬಿಜೆಪಿ ಬಳಸಿಕೊಳ್ಳುವ ಸಾಧ್ಯತೆಯಿದೆ.



ಇನ್ನು ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜತೆಗೆ ಚುನಾವಣೆಗೆ ಹೋದರೆ ಸೀಟು ಹಂಚಿಕೆ ವಿಚಾರದಲ್ಲಿ ತ್ಯಾಗಗಳನ್ನು ಮಾಡಬೇಕಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಕೆಲವು ಕ್ಷೇತ್ರಗಳಲ್ಲಿ ಮೈತ್ರಿಯವರೇ ಎದುರಾಳಿಯಾಗಿರುವುದರಿಂದ ಅಲ್ಲಿ ಮೈತ್ರಿ ಮಾಡಿಕೊಂಡು ಚುನಾವಣೆ ನಡೆಸುವುದು ಕಷ್ಟವಾಗಲಿದೆ. ಒಂದು ವೇಳೆ ಹರ್ಯಾಣ ಮತ್ತು ಮಹಾರಾಷ್ಟ್ರದಲ್ಲಿ ಇಂಡಿಯಾ ಒಕ್ಕೂಟ ಗೆಲುವು ಸಾಧಿಸಿದ್ದರೆ ಮೈತ್ರಿ ಮುಂದುವರೆಸಲು ಪ್ರಾದೇಶಿಕ ಪಕ್ಷಗಳ ನಾಯಕರು ಮುಂದಾಗುತ್ತಿದ್ದರೇನೋ? ಆದರೆ ಮಹಾರಾಷ್ಟ್ರದ ಮಹಾಸೋಲನ್ನು ನೋಡಿದ ನಂತರ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಳ್ಳಲು ಭಯಪಡುವಂತಾಗಿದೆ.

ಇಂಡಿಯಾ ಒಕ್ಕೂಟದ ನಂತರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರಿಸ್ಥಿತಿ ಸುಧಾರಿಸಿದೆ ದೇಶದಲ್ಲಿ ಮೂರಂಕಿಯನ್ನು ತಲುಪದೆ ಹೋದರೂ ಗಡಿಗೆ ಬಂದು ನಿಂತಿದೆ. ಸದ್ಯಕ್ಕೆ ಬಿಜೆಪಿ ಲೋಕಾ ಗೆಲುವಿನ ಸ್ಥಾನ ಕುಸಿದಿದ್ದರಿಂದ ಅದಕ್ಕೆ ಕಾರಣ ನಾವು ಹೀಗಾಗಿ ಕಾಂಗ್ರೆಸ್ ನಾಯಕರಿಗೆ ಅದು ಸಾಧನೆಯಂತೆ ಗೋಚರಿಸುತ್ತಿದೆ. ಬಹುಶಃ ಲೋಕಸಭಾ ಚುನಾವಣೆ ನಂತರವೂ ವಿಧಾನಸಭಾ ಚುನಾವಣೆಗಳಲ್ಲಿ ಇಂಡಿಯಾ ಒಕ್ಕೂಟ ಒಗ್ಗಟ್ಟಾಗಿ ಸ್ಪರ್ಧಿಸಿ ಗೆಲುವು ಕಂಡಿದ್ದರೆ ಮುಂದೆ ಇಂಡಿಯಾ ಒಕ್ಕೂಟಕ್ಕೆ ಭವಿಷ್ಯವಿದೆ ಎಂದು ಒಪ್ಪಿಕೊಳ್ಳಬಹುದಿತ್ತು. ಆದರೆ ಈಗಿನ ರಾಜಕೀಯ ಬೆಳವಣಿಗೆಯನ್ನು ಗಮನಿಸಿದರೆ ಅದು ಕಾಣುತ್ತಿಲ್ಲ.

ಬಹಳಷ್ಟು ಸಲ ಚುನಾವಣೆ ಸಂದರ್ಭದಲ್ಲಿ ಮತ್ತು ಚುನಾವಣೆ ನಂತರ ಅಧಿಕಾರಕ್ಕಾಗಿ ಆಗುವ ಮೈತ್ರಿಗಳು ಗಟ್ಟಿಯಾಗಿ ನಿಂತ ನಿದರ್ಶನ ಕಡಿಮೆಯೇ. ಉದಾಹರಣೆಗೆ 2018ರಲ್ಲಿ ಕರ್ನಾಟಕದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಾರದೆಯಿದ್ದಾಗ ಹಾವುಮುಂಗುಸಿಯಂತಿದ್ದ ಕಾಂಗ್ರೆಸ್ ಜೆಡಿಎಸ್ ದಿನಬೆಳಗಾಗುವುದರೊಳಗೆ ಮೈತ್ರಿಯಾಗಿ ಸರ್ಕಾರ ರಚನೆ ಮಾಡಿದ್ದರಾದರೂ ಅದನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇನ್ನು ಇಂಡಿಯಾ ಒಕ್ಕೂಟದ ವಿಚಾರಕ್ಕೆ ಬರುವುದಾದರೆ ಅಲ್ಲಿಯೂ ಅಷ್ಟೆ ಮೋದಿಯನ್ನು ಸೋಲಿಸಬೇಕೆನ್ನುವ ಕಾರಣಕ್ಕೆ ಒಕ್ಕೂಟ ಸೃಷ್ಟಿಯಾಗಿತ್ತು.

ಮೇಲ್ನೋಟಕ್ಕೆ ಲೋಕಸಭಾ ಚುನಾವಣೆ ವೇಳೆ ಇಂಡಿಯಾ ಒಕ್ಕೂಟ ಹೋರಾಟ ಮಾಡಿತ್ತಾದರೂ ಒಳಗೆ ನಾಯಕರಲ್ಲಿ ಒಗ್ಗಟ್ಟು ಕಾಣಿಸಿರಲಿಲ್ಲ. ಒಂದು ವೇಳೆ ಏನೆಲ್ಲ ತಪ್ಪುಗಳಾದವೋ ಅದೆಲ್ಲವನ್ನು ಸರಿಪಡಿಸಿಕೊಂಡು ಮುನ್ನಡೆದಿದ್ದರೆ, ಮುಂದಿನ ಲೋಕಸಭಾ ಚುನಾವಣೆ ಹೊತ್ತಿಗೆ ಗಟ್ಟಿಯಾಗಿ ಎನ್‌ಡಿಎಗೆ ಟಕ್ಕರ್ ಕೊಡಬಹುದಿತ್ತೇನೋ? ಆದರೆ ಮುಂದಿನ ಲೋಕಸಭಾ ಚುನಾವಣೆಗೆ ಮೊದಲು ಹಲವು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ



☞ 7

### ಚಿಕ್ಕೋಡಿ ಸಿಪಿಐ ವಿಶ್ವನಾಥ ಚೌಗಲಾ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆ...

# ಕುಡಿದು ಬಂದು ಕಿರಿಕ್ ಮಾಡುತ್ತಿದ್ದ ಗಂಡನನ್ನು ಕೊಲೆಗೈದು ಶವವನ್ನು ಎರಡು ತುಂಡು ಮಾಡಿ ಕಬ್ಬಿನ ಗದ್ದೆಯಲ್ಲಿ ಬೀಸಾಕಿದ್ದ ಹೆಂಡತಿ ಬಂಧನ!


ಹೆಂಡತಿಯಿಂದಲೇ ಕೊಲೆಯಾದ ಕುಡುಕ ಶ್ರೀಮಂತ ಇಟ್ನಾಳೆ

**ಆತ 40 ವರ್ಷದ ಪರಮ ಕುಡುಕ. ದುಡಿದಿದ್ದ ಹಣ ಕುಡಿತಕ್ಕೆ ಖರ್ಚು ಮಾಡುತ್ತಲಿದ್ದನು. ಮನೆಯಲ್ಲಿ ಹೆಂಡತಿ, ನಾಲ್ಕು ಮಕ್ಕಳು ಉಪವಾಸ ವನವಾಸದ ಜೀವನ ನಡೆಸಿದ್ದರು. ಹಗಲು-ರಾತ್ರಿ ಎನ್ನದೇ ಕುಡಿದು ಹೆಂಡತಿ, ಮಕ್ಕಳನ್ನು ಥಳಿಸುತ್ತಿದ್ದನು. ಮಕ್ಕಳ ಹಸಿವು ನೀಗಿಸಲು ಹೆಂಡತಿ ನಿಸ್ಸಹಾಯಕಳಾಗಿ ಕಂಡ ಗಂಡಸರ ಜತೆ ಹಾದರ ಮಾಡುತ್ತ ಪುಡಿಗಾಸಿಗೆ ಕೈ ಚಾಚತೊಡಗಿದ್ದಳು. 'ಇತ್ತೀಚಿಗೆ ನೀನು ಹಾದರ ಮಾಡಿ ಕುಡಿಯಲು ಹಣ ಕೊಡು' ಎಂದು ದುಂಬಾಲು ಬಿದ್ದು ಹೆಂಡತಿಯನ್ನು ಹುರಿದು ಮುಕ್ಕಿದ್ದನು. 'ನನಗೆ ಮೋಟಾರ್ ಸೈಕಲ್ ಬೇಕು, ನೀ ಯಾರ ಜತೆ ಹಾದರ ಮಾಡಿದರೂ ನಾನು ಕೇಳುವುದಿಲ್ಲ' ಎಂದು ಪೀಡಿಸುತ್ತಿದ್ದ ನಾಮರ್ಧ. ದಿನಂಪ್ರತಿ ಕುಡುಕ ಗಂಡನ ಕಿರುಕುಳ, ಥಳಿತ ಸಹಿಸದ**

**ಬೆಳಗಾವಿ**
ಮನ್ನಾಪೂರ

**ಹೆಂಡತಿ ಅದೊಂದು ನಿರ್ಧಾರಕ್ಕೆ ಬಂದಳು. ದಿ. 08-12-2024ರಂದು ರವಿವಾರ ಕುಡಿದು ಬಂದು ಜಗಳ ಮಾಡಿ ಮಲಗಿದ್ದಾಗ ಮಧ್ಯರಾತ್ರಿ ತಲೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದಳು. ಗಂಡನ ಶವವನ್ನು ಎರಡು ತುಂಡುಗಳಾಗಿ ಹರಿತವಾದ ಆಯುಧದಿಂದ ಕತ್ತರಿಸಿ ಕಬ್ಬಿನ ಗದ್ದೆಯಲ್ಲಿ ಎಸೆದು ಮತ್ತೇ ಶವವನ್ನು ಜೋಡಿಸಿಟ್ಟು ಏನೂ ಆಗಿಲ್ಲ ಎನ್ನುವಂತೆ ಮಲಗಿಬಿಟ್ಟಳು. ದಿ. 10-12-2024ರಂದು ಮಂಗಳವಾರ ಕೊಲೆಯಾದ ಕುಡುಕನ ತಾಯಿ ಶವ ಕಂಡು ಪೊಲೀಸರಿಗೆ ದೂರು ನೀಡಿದಳು. ಕುಡುಕನ ನಿಗೂಢ ಕೊಲೆಯ ಪ್ರಕರಣವನ್ನು ಧಾಡಸಿ ಮತ್ತು ಚತುರ ಸಿಪಿಐ ವಿಶ್ವನಾಥ ಚೌಗಲಾ, ಪಿಎಸ್‌ಐ ಬಸಗೌಡ ನೇರ್ಲಿ, ಸಿಬ್ಬಂದಿಗಳು ಚಾಣಾಕ್ಷತನದಿಂದ ಬೇಧಿಸಿ ಹಂತಕಿ ಹೆಂಡತಿಯನ್ನು ಬಂಧಿಸಿ ಜೈಲಿಗಟ್ಟಿರುವ ಘಟನೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಉಮರಾಣಿಯಲ್ಲಿ ವರದಿಯಾಗಿದೆ.**


ಕುಡುಕ ಗಂಡನನ್ನು ಕೊಲೆ ಮಾಡಿದ ಸಾವಿತ್ರಿ

'ಒಲಿದರೆ ನಾರಿ - ಮುನಿದರೆ ಮಾರಿ' ಎಂಬ ಮಾತು ಅಕ್ಷರಶಃ ಸತ್ಯ. ಹೆಣ್ಣು ಒಲಿದರೆ ಹಿಮಾಲಯ ಪರ್ವತದಂತಹ ಕಷ್ಟಗಳು ಬಂದರೂ ಅವುಗಳನ್ನು ಮೆಟ್ಟಿ ನಿಲ್ಲಬಲ್ಲಳು. ಒಂದು ವೇಳೆ ಅವಳು ಮುನಿದರೆ ಎಂತಹ ನಿರ್ಧಾರವನ್ನಾದರೂ ಹಿಂದೆ-ಮುಂದೆ ನೋಡದೆ ತೆಗೆದುಕೊಳ್ಳಬಲ್ಲಳು ಎನ್ನುವುದರಲ್ಲಿ ಎರಡು ಮಾತಿಲ್ಲ. ಇದಕ್ಕೆ ಜೀವಂತ ನಿದರ್ಶನವೆಂಬಂತೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಉಮರಾಣಿ ಗ್ರಾಮದಲ್ಲಿ ಸಾವಿತ್ರಿಯು ಶ್ರೀಮಂತ ಇಟ್ನಾಳೆಯ ಇನ್ನಿಲ್ಲದ ಕಿರಿಕಿರಿ, ಜಗಳಕ್ಕೆ ರೋಷಿ ಹೋಗಿ ಆತನನ್ನೇ ಅತ್ಯಂತ ಕ್ರೂರವಾಗಿ ಕೊಲೆಗೈದಿದ್ದಾಳೆ. ಇಂದು ಚಿಕ್ಕೋಡಿಯ ಚತುರ ಪೊಲೀಸ್ ಅಧಿಕಾರಿಗಳಾದ ಸಿಪಿಐ ವಿಶ್ವನಾಥ ಚೌಗಲಾ, ಪಿಎಸ್ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳು ನಡೆಸಿದ ತನಿಖೆಯಲ್ಲಿ ಹಂತಕಳಾಗಿ ಸಿಕ್ಕುಬಿದ್ದು ಜೈಲು ಸೇರಿ ಇಂದು ತಂಗಳು ಮುರಿಯುತ್ತಿದ್ದಾಳೆ. ಇವಳ ನಾಲ್ಕು ಮಕ್ಕಳು ತಂದೆಯನ್ನು ಕಳೆದುಕೊಂಡು ಪರದೇಶಿಗಳಾಗಿದ್ದಾರೆ. ಇನ್ನೊಂದೆಡೆ ತಾಯಿ ಸಾವಿತ್ರಿಯ ಕ್ರೂರ ಕೃತ್ಯ ಕಂಡು ನಡುಗಿ ಹೋಗಿದ್ದಾರೆ. ಅಕ್ಷರಶಃ ಉಮರಾಣಿಯ ಹೊರವಲಯದಲ್ಲಿ ನಡೆದ ಈ ಕೊಲೆಯ ಕಥೆ ಎಂತಹವರನ್ನು ಝಲ್ ಎನಿಸುತ್ತದೆ.

**ಪರಮ ಕುಡುಕ ಶ್ರೀಮಂತ...**

ಕುಡಿತ ಅದೆಂತಹ ದುರಂತವನ್ನು ಸೃಷ್ಟಿಸುತ್ತದೆ


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

ಎಂದು ಯಾರು ಊಹಿಸಿಕೊಳ್ಳಲು ಅಸಾಧ್ಯ. ಕುಡಿತಕ್ಕೆ ಅಂಟಿಕೊಂಡ ಮನುಷ್ಯ ತನ್ನ ಸ್ವಾಭಿಮಾನ, ವಿವೇಕ, ಮರ್ಯಾದೆಗಳನ್ನೆಲ್ಲಾ ಬೀದಿಗೆ ತಂದಿಡುತ್ತಾನೆ. ಇಡೀ ಮನೆತನದ ಮಾನ-ಮರ್ಯಾದೆ ಹರಾಜಾದರೂ ಈತನಿಗೆ ಅದ್ಯಾವ ಚಿಂತೆ ಇರದು. ಉಮರಾಣಿ ಗ್ರಾಮದ ಹೊರವಲಯದ ಸಿದ್ಧೇಶ್ವರ ನಗರದ ನಿವಾಸಿ ಶ್ರೀಮಂತ ರಾಮಪ್ಪ ಇಟ್ನಾಳೆ ಎಂಬ ಕುಡುಕನ ದುರಂತ ಅಂತ್ಯ ತನ್ನ ಹೆಂಡತಿಯಿಂದಲೇ ಆಗಿದೆ. ಅದಕ್ಕೆ ಕಾರಣವನ್ನು ಕೆದಕಿದಾಗ 'ಕುಡಿತದ ಕೆಡುಕುತನ' ಅರ್ಥವಾಗುತ್ತದೆ.


ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ


ಸಿಪಿಐ ವಿಶ್ವನಾಥ ಚೌಗಲಾ


ಪಿಎಸ್ಐ ಬಸಗೌಡ ನೇರ್ಲಿ

ಶ್ರೀಮಂತ ಮೊದ ಮೊದಲು ಒಳ್ಳೆಯವನೇ. ಆದರೆ ಈತನಿಗೆ ದುಷ್ಟ ಸಂಗ ದೋಷದ ಪ್ರಭಾವದಿಂದ ಕುಡುಕನಾದನು. ಈತನ ತಂದೆ ರಾಮಪ್ಪ ತಾಯಿ ಲಗಮವ್ವ ಕೃಷಿ ಕೂಲಿ ನಂಬಿಕೊಂಡಿದ್ದವರು. ಈಗಾಗಲೇ ತಂದೆ ಸತ್ತು ಹೋಗಿದ್ದಾನೆ. ಈತನಿಗೆ ಶಾಂತವ್ವ, ಕಸ್ತೂರಿ, ನಿಂಗವ್ವ, ಸಂಗೀತಾ ಎಂಬ ನಾಲ್ಕು ಜನ ಸಹೋದರಿಯರಿದ್ದು, ಎಲ್ಲರದೂ ಮದುವೆಯಾಗಿ ಅವರ ಗಂಡನ ಮನೆಯಲ್ಲಿ ಸಂಸಾರ ನಡೆಸಿದ್ದಾರೆ. ಅಜೀತ ಎಂಬ ಅಣ್ಣ ಅನ್ನಪ್ಪನೆಂಬ ತಮ್ಮ ಶ್ರೀಮಂತನಿಗಿದ್ದಾರೆ. ಅಣ್ಣ-ತಮ್ಮಂದಿರು ಮದುವೆಯಾಗಿ ಬೇರೆ ಬೇರೆ ಮನೆ ಮಾಡಿಕೊಂಡು ವಾಸ ಮಾಡುತ್ತಿದ್ದಾರೆ. ವಯಸ್ಸಾದ ತಾಯಿ ಲಗಮವ್ವಳು ಹಿರಿಯ ಮಗನಾದ ಅಜೀತನ ಮನೆಯ ಪಕ್ಕ ಸಣ್ಣ ಮನೆಯಲ್ಲಿ ವಾಸವಿದ್ದಾಳೆ. ಶ್ರೀಮಂತನಿಗೆ ಶಿಕ್ಷಣ ತಲೆಗೆ ಹೋಗದೇ ಆತನೂ ಕೂಲಿನಾಲಿ ಮಾಡಿ ಬದುಕು ನಡೆಸಿದ್ದನು.


ಕಬ್ಬಿನ ಗದ್ದೆಯಲ್ಲಿ ಎರಡು ಭಾಗಗಳಾಗಿ ಕತ್ತರಿಸಿ ಬಿಸಾಕಿದ ಶ್ರೀಮಂತನ ಶವ


ಮೃತ ಶ್ರೀಮಂತನ ತಾಯಿ ಲಗಮವ್ವ

**15 ವರ್ಷಗಳ ಹಿಂದೆ ಮದುವೆ...**

ಈಗ ಹದಿನೈದು ವರ್ಷಗಳ ಹಿಂದೆ ಶ್ರೀಮಂತ ಹರೆಯಕ್ಕೆ ಬಂದಿದ್ದನು. ಈತ ಕಂಡ... ಕಂಡಲ್ಲಿ ಬೇಲಿ ಹಾರಬಾರದೆಂದು ತಂದೆ-ತಾಯಿ, ಬಂಧುಗಳು ಸೇರಿಕೊಂಡು ಮದುವೆ ಮಾಡಲು ನಿರ್ಧರಿಸಿದರು. 'ಹಣೆಬರಹ ಕೂಡಿ ಬಂದರೆ ಹಡೆದವರು ಬೇಕಿಲ್ಲ...' ಎನ್ನುವ ಗಾದೆಯಂತೆ ಗಡಿಭಾಗದ ಮಹಾರಾಷ್ಟ್ರದ ಇಚಲಕರಂಜಿ ಪಟ್ಟಣದ ನಿವಾಸಿಗಳಾದ ಮುತ್ತಪ್ಪ ಮತ್ತು ಪಾರ್ವತಿ ದಂಪತಿಗಳ ಮಗಳು ಸಾವಿತ್ರಿ ಬೆಳೆದು ನಿಂತಿದ್ದಳು. ಅವಳನ್ನು ಶ್ರೀಮಂತನ ಜತೆಗೆ ಮದುವೆ ಮಾಡಿದರು. ಎರಡು ಮನೆತನಗಳು ಪರಿಸ್ಥಿತಿ ಸಾಧಾರಣವಾಗಿದ್ದರಿಂದ ಸರಳ ರೀತಿಯಲ್ಲಿ ಮದುವೆ ಮಾಡಲಾಯಿತು.

**ಗಂಡನ ಮನೆಗೆ ಸಾವಿತ್ರಿ...**

ಸಾವಿತ್ರಿ ತುಂಬಾ ಮಹತ್ವಾಕಾಂಕ್ಷೆಯುಳ್ಳ ಹೆಣ್ಣು ಮಗಳು. ಇವಳು ಶಾಲೆ ಕಲಿಯಬೇಕೆಂದು ಉತ್ಕಟ ಆಶೆ ಇವಳಲ್ಲಿದ್ದರೂ ಕೂಡಾ ತವರಿನ ಸ್ಥಿತಿ ಅಷ್ಟು ಚೆನ್ನಾಗಿರದ ಕಾರಣ ಕಲಿಯದೇ ಮದುವೆ ಮಾಡಿಕೊಂಡು ಗಂಡನ ಮನೆಗೆ ಬಂದಳು. ಆರಂಭದ ದಿನಗಳಲ್ಲಿ ಸಾವಿತ್ರಿ ಬೆಟ್ಟದಷ್ಟು ಆಶೆಗಳನ್ನು ಹೊತ್ತುಕೊಂಡು ಬಣ್ಣ-ಬಣ್ಣದ ಕನಸುಗಳನ್ನು ಕಂಡಿದ್ದಳು. ಆದರೆ ತಾನು ಕಂಡ ಕನಸುಗಳೆಲ್ಲ ಒಮ್ಮೆಲೆ ಭಗ್ನಗೊಳ್ಳುತ್ತವೆ ಎಂದು ಆಕೆ ಕನಸು-ಮನಸ್ಸಿನಲ್ಲಿ ಎಣಿಸಿರಲಿಲ್ಲ.

ಗಂಡನ ಮನೆ ಉಮರಾಣಿಗೆ ಬಂದ ಹೊಸದರಲ್ಲಿ ಎಲ್ಲವೂ ಸರಿಯಿತ್ತು. ದಿನವಿಡೀ ದುಡಿದು ಬಂದು ದಣಿದು ರಾತ್ರಿಯಾದರೆ ಸಾಕು ಶ್ರೀಮಂತನ ಬಡ ಗುಡಿಸಿಲಿನ ಮೂಲೆಯಲ್ಲಿ ಆತನ ತೋಳ್ತೆಕ್ಕೆಯಲ್ಲಿ ಬಂಧಿಯಾಗಿ, ಬಿಸಿಯುಸಿರಿನ ಹಿತವಾದ ಸ್ಪರ್ಶದಲ್ಲಿ ನರಳುತ್ತ ಆರಂಭದಲ್ಲಿ

☞ 11


ಮುರುಡೇಶ್ವರ ದೇವಸ್ಥಾನ


ಬೀಚ್‌ನಿಂದ ಸಾರ್ವಜನಿಕರನ್ನು ಹೊರ ಕಳಿಸುತ್ತಿರುವ ಪೊಲೀಸರು


ಮಕ್ಕಳ ಶವಗಳಿಗಾಗಿ ಹುಡುಕಾಟ ನಡೆಸುತ್ತಿರುವುದು


ಸಮುದ್ರದ ತೀರದಲ್ಲಿ ಸೇರಿರುವ ಮುರುಡೇಶ್ವರ ಠಾಣೆ ಪೊಲೀಸರು

# ಮುರುಡೇಶ್ವರ ಸಮುದ್ರದ ಅಲೆಗಳ ಅಬ್ಬರಕ್ಕೆ ಸಿಲುಕಿ ನಾಲ್ವರು ವಿದ್ಯಾರ್ಥಿನಿಯರ ಸಾವು

## ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಆರು ಶಿಕ್ಷಕರ ಅಮಾನತ್ತು! ಮುಖ್ಯಮಂತ್ರಿಗಳ 5 ಲಕ್ಷ ಪರಿಹಾರ

**ಶೈಕ್ಷಣಿಕ ಪ್ರವಾಸಕ್ಕೆ ಹೋಗಿದ್ದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 46 ವಿದ್ಯಾರ್ಥಿಗಳು ಹಾಗೂ 6 ಜನ ಶಿಕ್ಷಕರು ತಮ್ಮ ಪ್ರವಾಸದ ಕೊನೆಯ ತಾಣವಾಗಿ ಮುರುಡೇಶ್ವರ ಬೀಚ್‌ನಲ್ಲಿ ಸ್ವಲ್ಪ ಹೊತ್ತು ಆಟವಾಡಿಕೊಂಡು ಮನೆಗೆ ಬರುವ ಖುಷಿಯಲ್ಲಿದ್ದಾಗ ಸಮುದ್ರದ ಅಲೆಗಳ ಅಬ್ಬರಕ್ಕೆ ಏಳು ವಿದ್ಯಾರ್ಥಿನಿಯರು ಸಿಕ್ಕಿಹಾಕಿಕೊಂಡು ನೋಡು ನೋಡುತ್ತಿದ್ದಂತೆ ನೀರಿನಲ್ಲಿ ಕೊಚ್ಚಿ ಹೋದರು. ಲೈಫ್ ಗಾರ್ಡ್ ಸಿಬ್ಬಂದಿ ನಾಲ್ಕು ವಿದ್ಯಾರ್ಥಿನಿಯರನ್ನು ರಕ್ಷಿಸಿದರು, ಅವರಲ್ಲಿ ಒಬ್ಬ ವಿದ್ಯಾರ್ಥಿನಿ ಸಾವನ್ನಪ್ಪಿದ್ದು ಮೂವರು ಆಸ್ಪತ್ರೆಯಲ್ಲಿ ಚೇತರಿಸಿಕೊಂಡರು. ಉಳಿದ ಮೂವರು ವಿದ್ಯಾರ್ಥಿನಿಯರು ಮರುದಿನ ಮುರುಡೇಶ್ವರ ದೇವಸ್ಥಾನವದ ಹಿಂಬದಿಯ ಸಮುದ್ರ ಬಂಡೆಗಳ ಮಧ್ಯೆ ಶವವಾಗಿ ಪತ್ತೆಯಾದರು. ಬೇಜವಾಬ್ದಾರಿಯಿಂದ ವರ್ತಿಸಿ ನಾಲ್ವರು ವಿದ್ಯಾರ್ಥಿನಿಯರ ಸಾವಿಗೆ ಕಾರಣರಾದ ಪ್ರಾಂಶುಪಾಲೆ ಸೇರಿದಂತೆ ಆರು ಜನ ಶಿಕ್ಷಕರ ವಿರುದ್ಧ ಮುರುಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಆರು ಜನರನ್ನು ಅಮಾನತ್ತು ಮಾಡಲಾಗಿದೆ. ಸರ್ಕಾರ ಮೃತ ವಿದ್ಯಾರ್ಥಿನಿಯರ ಕುಟುಂಬಕ್ಕೆ 5 ಲಕ್ಷ ಪರಿಹಾರ ನೀಡಿದೆ.**


ಮೃತ ವಿದ್ಯಾರ್ಥಿನಿಯರಾದ ಜೆ. ದೀಕ್ಷಾ, ಸಿ. ಲಾವಣ್ಯ, ಎಂ. ವಂದನಾ ಹಾಗೂ ಶ್ರಾವಂತಿ

**ಕೋಲಾರ**

✍ ಕೋಲಾರ ಮಂಜು

**ಕೋ**ಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕಿನ ಎಂ. ಕೊತ್ತೂರು ಬಾಳಸಂದ್ರದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸುಮಾರು 260 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ. ಪ್ರತಿ ವರ್ಷದಂತೆ 2024-25ನೇ ಸಾಲಿನ ಶೈಕ್ಷಣಿಕ ಪ್ರವಾಸಕ್ಕೆ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 19 ವಿದ್ಯಾರ್ಥಿನಿಯರು ಮತ್ತು 27 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 46 ಮಕ್ಕಳನ್ನು ಜೋಗ್‌ಫಾಲ್ಸ್, ಬನವಾಸಿ, ಸಿರಸಿ, ಗೋಕರ್ಣ, ಇಡಗುಂಜಿ ಮತ್ತು ಮುರುಡೇಶ್ವರ ಬೀಚ್ ಸೇರಿದಂತೆ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದ ಪ್ರವಾಸವನ್ನು ಡಿಸೆಂಬರ್ 9 ಮತ್ತು 10ರಂದು ಎರಡು ದಿನಗಳ ಕಾಲ ಹಮ್ಮಿಕೊಂಡಿದ್ದ ಶಾಲೆಯ ಪ್ರಾಂಶುಪಾಲೆ ಶಶಿಕಲಾರವರು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಅನುಮತಿ ಕೋರಿದ ಮೇರೆಗೆ ಬೆಂಗಳೂರಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ನೀಡುವ ಷರತ್ತು ಮತ್ತು ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಜವಾಬ್ದಾರಿಯುತ ಶಿಕ್ಷಕರೊಂದಿಗೆ ಹಾಗೂ ಹೆಣ್ಣುಮಕ್ಕಳ ಸುರಕ್ಷತೆಗಾಗಿ ಮಹಿಳಾ ಸಿಬ್ಬಂದಿಯ ಜೊತೆಗೆ ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಮಹಿಳಾ ಶುಶ್ರೂಷಕಿಯನ್ನು ನಿಯೋಜಿಸಿಕೊಂಡು, ಪ್ರವಾಸೋದ್ಯಮ ಇಲಾಖೆಯಿಂದ ನೋಂದಣಿಗೊಂಡಿರುವ ಸಂಸ್ಥೆಯ ಬಸ್‌ಗಳಲ್ಲಿ ಪ್ರವಾಸವನ್ನು ಕೈಗೊಳ್ಳಲು ನಿಯಮಾನುಸಾರ ಅನುಮತಿಯನ್ನು ನೀಡಿದರು.

ಪ್ರವಾಸಕ್ಕೆ ಹೋಗುವ ಮುನ್ನ ಶಾಲೆಯಲ್ಲಿ ಉಳಿದಿರುವ ವಿದ್ಯಾರ್ಥಿಗಳನ್ನು ನೋಡಿಕೊಳ್ಳಲು ಪ್ರಾಂಶುಪಾಲೆಯ ಸ್ಥಾನದಲ್ಲಿ ಸಾಳೆಯ ಮೇಲ್ವಿಚಾರಕರಾದ ಬಿ.ಆರ್. ಕುಮಾರ್‌ರಾಜುರವರಿಗೆ ಜವಾಬ್ದಾರಿಯನ್ನು ವಹಿಸಿಕೊಟ್ಟು, ಕರಾವಳಿ ಭಾಗದ ಪ್ರವಾಸಕ್ಕೆ ವಿದ್ಯಾರ್ಥಿಗಳ ಜೊತೆಗೆ ಶಾಲೆಯ ಅತಿಥಿ ಇಂಗ್ಲೀಷ್ ಭಾಷಾ ಶಿಕ್ಷಕ ಎಸ್. ಚೌಡಪ್ಪ, ಅತಿಥಿ ಕನ್ನಡ ಭಾಷಾ ಶಿಕ್ಷಕಿ ಸಿ.ಎನ್. ಶಾರದಮ್ಮ, ಅತಿಥಿ ದೈಹಿಕ ಶಿಕ್ಷಕ ಕೆ. ನರೇಶ್, ಅತಿಥಿ ಗಣಿತ ಶಿಕ್ಷಕ ಆರ್. ಸುನಿಲ್, ಅತಿಥಿ ವಿಜ್ಞಾನ ಶಿಕ್ಷಕ ವಿಶ್ವನಾಥ್ ಹಾಗೂ ಡಿ ಗ್ರೂಪ್ ನೌಕರಳಾದ ಲಕ್ಷ್ಮಮ್ಮನವರೊಂದಿಗೆ ಕೆಎ-40-2818 ಸಂಖ್ಯೆ ಮೋನೋ ಟ್ರಾವೆಲ್ಸ್‌ನ ಖಾಸಗಿ ಬಸ್‌ನಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸೇರಿದಂತೆ ಒಟ್ಟು 57 ಜನರು ಡಿಸೆಂಬರ್ 8ರಂದು ರಾತ್ರಿ 10 ಗಂಟೆಗೆ ಶಾಲೆಯಿಂದ ಹೊರಟು ಮರುದಿನ ಬೆಳಿಗ್ಗೆ ಕರಾವಳಿ ಭಾಗದ ಕೆಲವು ಸ್ಥಳಗಳನ್ನು ನೋಡಿಕೊಂಡು ಡಿಸೆಂಬರ್ 10ರಂದು ಮಧ್ಯಾಹ್ನ 2 ಗಂಟೆಗೆ ಕಾರವಾರ ಜಿಲ್ಲೆ ಭಟ್ಕಳ ತಾಲ್ಲೂಕಿನ ಮುರುಡೇಶ್ವರಕ್ಕೆ ಬಂದು ಮೊದಲಿಗೆ ದೇವರ ದರ್ಶನ ಪಡೆದು ಅಲ್ಲಿಯೇ ಊಟ ಮಾಡಿದ ನಂತರ ಎಲ್ಲರು ಬಸ್ಸಿನಲ್ಲಿ ವಿಶ್ರಾಂತಿ ಪಡೆದು ಸಂಜೆ 5 ಗಂಟೆ ನಂತರ ಸಮುದ್ರ ತೀರಕ್ಕೆ ಹೋಗಿ ಸೂರ್ಯಾಸ್ತಮಾನಕ್ಕೆ ನೋಡಿಕೊಂಡು ಸಂಜೆ ಇಲ್ಲಿಂದ ಹೊರಟು ರಾತ್ರಿ 8 ಗಂಟೆ ನಂತರ ಯಾವುದಾದರೊಂದು ದೇವಸ್ಥಾನದ ಬಳಿ ಅಡಿಗೆ ಮಾಡಿಕೊಂಡು ಊಟ ಮಾಡಿ ಕೋಲಾರಕ್ಕೆ ಪ್ರಯಾಣ ಬೆಳೆಸಿದರೆ ಬೆಳಿಗ್ಗೆ 6 ಗಂಟೆಗೆ ಶಾಲೆ ತಲುಪುವುದಾಗಿ ಪ್ರಾಂಶುಪಾಲೆ ಶಶಿಕಲಾರವರು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ತಿಳಿಸಿದರು. ಅದರಂತೆ ಸಂಜೆ 5.30ಕ್ಕೆ ದೇವಸ್ಥಾನದ ಎಡಭಾಗದಲ್ಲಿರುವ ಬೀಚ್‌ಗೆ ಹೋಗಿ ನೀರಿನ ಅಂಚಿನಲ್ಲಿ ಸುತ್ತಾಡುತ್ತಾ ಸೂರ್ಯಾಸ್ತಮಾನದ ಕ್ಷಣಕ್ಕಾಗಿ ಕಾದಿದ್ದರು. ಸೂರ್ಯಾಸ್ತಮಾನಕ್ಕೆ ಇನ್ನು ಒಂದು ಗಂಟೆ ಕಾಲ ಸಮಯ ಇರುವುದರಿಂದ ನೀರಿಗಿಳಿದು ಸ್ವಲ್ಪ ಹೊತ್ತು ಆಟವಾಡುವುದಾಗಿ ಕೆಲವು ವಿದ್ಯಾರ್ಥಿಗಳು ಶಿಕ್ಷಕರನ್ನು ಕೇಳಿಕೊಂಡರು. ಆಗ ಕೆಲವು ಶಿಕ್ಷಕರಿಗೆ ಮಕ್ಕಳು ನೀರಿನಲ್ಲಿ ಆಟವಾಡುವುದು ಇಷ್ಟವಿರಲಿಲ್ಲ. ಇನ್ನು ಕೆಲವರು ನಮ್ಮ ಕಣ್ಣು ಮುಂದೆಯೇ ಮೊಣಕಾಲಿನ ಮಟ್ಟದವರೆಗೂ ನೀರಿಗಿಳಿದು ಆಟವಾಡಲೆಂದು ಹೇಳಿದರಲ್ಲದೆ ವಿದ್ಯಾರ್ಥಿಗಳ ಜೊತೆ ಶಿಕ್ಷಕರೂ ಸಹ ನೀರಿಗಿಳಿದುಬಿಟ್ಟರು. ಸಂಜೆ ಸೂರ್ಯಾಸ್ತಮಾನದ ಸಂದರ್ಭದಲ್ಲಿ ಸಾವಿರಾರು ಜನರು ಜಮಾಯಿಸುವುದರಿಂದ ಸಮುದ್ರ ತೀರದಲ್ಲಿನ ಲೈಫ್‌ಗಾಡ್ಸ್‌ಗಳು ಮೈಕ್‌ನಲ್ಲಿ ಕೂಗಿ ಎಚ್ಚರಿಕೆಯನ್ನು ಕೊಡುವುದಲ್ಲದೆ, ನೀರಿನ ಆಳಕ್ಕೆ ಇಳಿಯುವ ವ್ಯಕ್ತಿಗಳಿಗೆ ವಿಜ್ಹಿಲ್ ಊದಿ ಸಮುದ್ರದ ಆಳಕ್ಕೆ ಹೋಗದಂತೆ ಎಚ್ಚರಿಸುತ್ತಲೇ ಇರುತ್ತಾರೆ. ವಿದ್ಯಾರ್ಥಿಗಳು ನೀರಿನಲ್ಲಿ ಆಟವಾಡುತ್ತಾ ಮುಂದೆ, ಮುಂದೆ ಹೋಗುತ್ತಾ ಇರುವಾಗ ಅಲೆಗಳು ಬಂದು ಅವರನ್ನು ದಡಕ್ಕೆ ತಂದು ಎಸೆದು ಮತ್ತೆ ವಾಪಸ್ಸು ಹೋಗುತ್ತಿತ್ತು. ಇದು ಮಕ್ಕಳಿಗೆ ಖುಷಿಯಾಗುತ್ತಿದ್ದಲ್ಲದೆ ಇನ್ನು ಸ್ವಲ್ಪ ಆಳಕ್ಕೆ ಹೋದರೆ ದೊಡ್ಡ ಅಲೆಗಳ ಜೊತೆ ಆಡವಾಡುತ್ತಾ ದಡಕ್ಕೆ ಬರಬಹುದೆಂದು ವಿದ್ಯಾರ್ಥಿಗಳು ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದುಕೊಂಡು ಅಲೆಗಳ ಜೊತೆ ಆಟವಾಡುತ್ತಾ ಮುಂದೆ ಹೋಗುತ್ತಿರುವ ಮಕ್ಕಳಿಗೆ ಯಾವೊಬ್ಬ ಶಿಕ್ಷಕರು ಎಚ್ಚರಿಕೆಯನ್ನು ಕೊಡದೆ ತಮ್ಮಷ್ಟಕ್ಕೆ ತಾವು ಸೂರ್ಯಾಸ್ತಮಾನವನ್ನು ಗಮನಿಸುತ್ತಾ ಮೈಮರೆತಿದ್ದರು. ಈ ಸಮಯದಲ್ಲಿ ದುರಂತವೊಂದು ನಡೆದು ಹೋಯಿತು.


ಮಕ್ಕಳ ಶವಕ್ಕಾಗಿ ಶೋಧ ಕಾರ್ಯದಲ್ಲಿ ತೊಡಗಿದ್ದ ರಕ್ಷಣಾ ಪಡೆ


ನೀರಿನಲ್ಲಿ ಮುಳುಗಿದ್ದ ಮಕ್ಕಳನ್ನು ರಕ್ಷಿಸುತ್ತಿರುವ ಲೈಫ್ ಗಾರ್ಡನ್ ತಂಡ

### ಖುಷಿಯಲ್ಲಿದ್ದವರ ಬೆನ್ನಟ್ಟಿದ ಜವರಾಯ

ಸಮುದ್ರದ ಮೇಲೆ ಸಂಜೆ ಹೊತ್ತು ತಂಪಾದ ಗಾಳಿ ಬೀಸುವುದರಿಂದ ಅಲೆಗಳ ಅಬ್ಬರ ಜೋರಾಗುತ್ತಿದ್ದಂತೆ ಎಚ್ಚರಗೊಳ್ಳಬೇಕಾಗಿದ್ದ ವಿದ್ಯಾರ್ಥಿಗಳು ನೀರಿನ ಜೊತೆ ಗುದ್ದಾಡುತ್ತಾ ತಮ್ಮನ್ನು ತಾವು ಮರೆತು ಒಬ್ಬರನ್ನೊಬ್ಬರು ತಬ್ಬಿಕೊಂಡು ಖುಷಿಯಲ್ಲಿದ್ದರು. ಆಗ ಮೃತ್ಯುವಿನ ರೂಪದಲ್ಲಿ ಬಂದ ದೊಡ್ಡ ಅಲೆಯೊಂದು ಮಕ್ಕಳನ್ನು ಮೇಲಕ್ಕೆ ಎತ್ತಿಕೊಂಡು ಹಾಗೆಯೇ ದಡಕ್ಕೆ ತಂದು


ಮುರುಡೇಶ್ವರದ ಅಗ್ನಿಶಾಮಕ ದಳ


ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮಕ್ಕಳ ಶವಗಳನ್ನು ತಂದಿರುವ ವಾಹನಗಳು

☞ 5

4 ☜

ಹಾಕಬೇಕಾದ ಅಲೆಯು ಏಳು ಜನ ವಿದ್ಯಾರ್ಥಿನಿಯರನ್ನು ಸಮುದ್ರದ ಒಳಗೆ ಕರೆದುಕೊಂಡು ಹೋಯಿತು. ಅಲೆಗಳ ಅಬ್ಬರಕ್ಕೆ ಸಿಲುಕಿ ಕೊಚ್ಚಿಕೊಂಡು ಹೋಗುತ್ತಿದ್ದ ವಿದ್ಯಾರ್ಥಿಗಳು ಕಾಪಾಡಿ, ಕಾಪಾಡಿ ಎಂದು ಕೂಗಾಡಿದರು. ಸಮುದ್ರದ ತೀರದಲ್ಲಿ ನಡುಮಟ್ಟದ ನೀರಿನಲ್ಲಿ ನಿಂತು ಸೂರ್ಯಾಸ್ತಮಾನಕ್ಕಾಗಿ ಕಾದಿದ್ದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಮ್ಮ ಕಣ್ಣ ಮುಂದೆಯೇ ಏಳು ಜನ ವಿದ್ಯಾರ್ಥಿನಿಯರು ನೋಡು, ನೋಡುತ್ತಿದ್ದಂತೆ ಸಮುದ್ರದ ಒಳಕ್ಕೆ ಹೋಗುತ್ತಿರುವುದನ್ನು ನೋಡಿ ಭಯ ಮತ್ತು ಗಾಬರಿಯಿಂದ ಮಕ್ಕಳನ್ನು ರಕ್ಷಿಸಿ ಎಂದು ಜೋರಾಗಿ ಕಿರುಚಾಡಿದರು. ನೀರಿನಲ್ಲಿ ಅಂಚಿನಲ್ಲಿಯೇ ತಿರುಗಾಡುತ್ತಾ ನೀರಿಗಿಳಇದಿರುವವರಿಗೆ ಎಚ್ಚರಿಕೆಯನ್ನು ಕೊಡುತ್ತಾ ಅಲ್ಲಿಯೇ ಇದ್ದ ಕರಾವಳಿ ರಕ್ಷಣಾ ಪಡೆಯ ತಂಡ ಹಾಗೂ ಸ್ಥಳೀಯ ಮೀನುಗಾರರು ಅಲೆಗಳೊಂದಿಗೆ ಕೊಚ್ಚಿ ಹೋಗುತ್ತಿದ್ದ ನಾಲ್ಕು ವಿದ್ಯಾರ್ಥಿನಿಯರನ್ನು ರಕ್ಷಿಸಿ ನೀರಿನಿಂದ ಹೊರತಂದರು. ಆದರೆ ಇನ್ನುಳಿದ ಮೂವರು ನೀರಿನಲ್ಲಿ ಮರೆಯಾದರು. ಸಮುದ್ರದ ಉಪ್ಪು ನೀರು ಕುಡಿದು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ವಿದ್ಯಾರ್ಥಿನಿಯರಿಗೆ ಪ್ರಥಮ ಚಿಕಿತ್ಸೆ ನೀಡಿದ ನಂತರ ಮುರುಡೇಶ್ವರ ಆರ್.ಎನ್.ಎಸ್. ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಅಸ್ವಸ್ಥಗೊಂಡಿದ್ದ



ಊರಿಗೆ ವಾಪಸ್ಸು ಬರುತ್ತಿರುವ ವಿದ್ಯಾರ್ಥಿಗಳು



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯಶೋಧ ಹಾಗೂ ಲಿಪಿಕಾರ ಬಳಿ ವಿಚಾರಿಸುತ್ತಿರುವ ಶಾಸಕರು ಹಾಗೂ ಅಧಿಕಾರಿಗಳು



ಆಸ್ಪತ್ರೆಗೆ ಬೇಟಿ ನೀಡಿರುವ ಎಸ್ಪಿ ನಾರಾಯಣ್

ಪೂಜಾರಹಳ್ಳಿಯ ಗೋಪಾಲಪ್ಪನ ಮಗಳು ಶ್ರಾವಂತಿ (15) ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಳು. ಇನ್ನುಳಿದ ಮೂವರು ವಿದ್ಯಾರ್ಥಿನಿಯರಾದ ತಾತಗಟ್ಟಿ ಗ್ರಾಮದ ಆಂಜನಪ್ಪ ಮಗಳು ಯಶೋಧ (15), ಬಾಳಸಂದ್ರ ಗ್ರಾಮದ ನರಸಿಂಹಪ್ಪನ ಮಗಳು ವೀಕ್ಷಣಾ (15) ಹಾಗೂ ಕಲಿಕೇರಿ ಗ್ರಾಮದ ಮುನಿರಾಜುರವರ ಮಗಳು ಲಿಪಿಕಾ (15) ಚಿಕಿತ್ಸೆ ನಂತರ ಚೇತರಿಸಿಕೊಂಡರು. ನೀರಿನಲ್ಲಿ



ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ಮಕ್ಕಳಿಗೆ ಸಂತಾಪ ಸೂಚಿಸುತ್ತಿರುವ ಅಧಿಕಾರಿಗಳು

ಕೊಚ್ಚಿ ಕಾಣೆಯಾದವರು ಎನ್. ಗಡ್ದೂರು ಗ್ರಾಮದ ಜಯರಾಮಪ್ಪನ ಮಗಳು ದೀಕ್ಷಾ(15), ಹೆಬ್ಬಣಿ ಗ್ರಾಮದ ಚನ್ನರೆಡ್ಡಪ್ಪನ ಮಗಳು ಲಾವಣ್ಯ (15), ದೊಡ್ಡಗಟ್ಟಹಳ್ಳಿ ಗ್ರಾಮದ ಮುನಿರಾಜುರವರ ಮಗಳು ವಂದನಾ (15) ಈ ಮೂವರು ವಿದ್ಯಾರ್ಥಿನಿಯರ ಪತ್ತೆಗಾಗಿ ಲೈಫ್‌ಗಾಡ್‌ಗಳು ಹಾಗೂ ಮೀನುಗಾರರು ಬೋಟುಗಳಲ್ಲಿ ಸುತ್ತಾಡಿ ಮಕ್ಕಳಿಗಾಗಿ ಹುಡುಕಾಟ ನಡೆಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ನೀರಿನಲ್ಲಿ ವಿದ್ಯಾರ್ಥಿನಿಯರು ಕೊಚ್ಚಿಹೋಗಿರುವ ವಿಷಯ ತಿಳಿಯುತ್ತಿದ್ದಂತೆ ಮುರುಡೇಶ್ವರ ಪೊಲೀಸ್ ಠಾಣೆಯ ಪಿಎಸ್‌ಐ ಹನುಮಂತ ಬಿರಿದಾರ್ ಮತ್ತು ಸಿಬ್ಬಂದಿಯು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದ ನಂತರ ಮುಂದಿನ ಕ್ರಮಕ್ಕಾಗಿ ಹಿರಿಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದರು. ಮುರುಡೇಶ್ವರದಲ್ಲಿನ ಘಟನೆಯ ವಿಚಾರ ತಿಳಿಯುತ್ತಿದ್ದಂತೆ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಜಿಲ್ಲಾಧಿಕಾರಿ ಲಕ್ಷ್ಮಿಪ್ರಿಯಾ, ಪೊಲೀಸ್ ವರಿಷ್ಠಾಧಿಕಾರಿ ಎಂ. ನಾರಾಯಣ್ ಮುಂತಾದವರು ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿನಿಯರ ಶವಗಳ ಪತ್ತೆಗಾಗಿ ಸೂಕ್ತ ಮಾರ್ಗದರ್ಶನ ನೀಡಿದರು. ಮುರುಡೇಶ್ವರ ಪೊಲೀಸ್ ಠಾಣೆಯ ಸಿಪಿಐ 570 ಹಣವಂತ ಗೊಡಿಹಾಳರವರು ನೀಡಿದ ದೂರಿನ ಮೇರೆಗೆ ಠಾಣಾಧಿಕಾರಿ ಸಂಹಿತೆ-2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಶೈಕ್ಷಣಿಕ ಪ್ರವಾಸಕ್ಕೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದ ಶಾಲೆಯ ಮುಖ್ಯೋಪಾಧ್ಯಾಯರಾದ ಶಶಿಕಲಾ (40), ಗಣಿತ ಅತಿಥಿ ಶಿಕ್ಷಕಿ ಆರ್. ಸುನಿಲ್ (33), ಇಂಗ್ಲೀಷ್ ಅತಿಥಿ ಶಿಕ್ಷಕ ಎಸ್. ಚೌಡಪ್ಪ (34), ದೈಹಿಕ ಅತಿಥಿ ಶಿಕ್ಷಕ ಕೆ. ನರೇಶ್ (30, ವಿಜ್ಞಾನ ಅತಿಥಿ ಶಿಕ್ಷಕ ಎಸ್. ವಿಶ್ವನಾಥ್ (27), ಕನ್ನಡ ಅತಿಥಿ ಶಿಕ್ಷಕಿ ಶಾರದಮ್ಮ (37) ಇತರರು ಸೇರಿದಂತೆ ಇವರು ಸರ್ಕಾರ ನಿಯಮಗಳನ್ನು ಉಲ್ಲಂಗನೆ ಮಾಡಿರುವುದಲ್ಲದೆ, ತಾವು ಪ್ರವಾಸಕ್ಕೆ ಕರೆದುಕೊಂಡು ಬಂದ ವಿದ್ಯಾರ್ಥಿಗಳ ಬಗ್ಗೆ ಜವಾಬ್ದಾರಿಯನ್ನು ಹೊಂದದೆ, ಮಕ್ಕಳನ್ನು ನೀರಿಗಿಳಿಸುವ ಮುನ್ನ ಯಾವುದೇ ಸುರಕ್ಷಾ ಕವಚಗಳನ್ನು ಅಳವಡಿಸದೆ ನಿರ್ಲಕ್ಷತನದಿಂದ ವಿದ್ಯಾರ್ಥಿಗಳನ್ನು ಸಮುದ್ರದಲ್ಲಿ ಆಟವಾಡಲು ಬಿಟ್ಟಿದ್ದರಿಂದ 7 ವಿದ್ಯಾರ್ಥಿನಿಯರು ನೀರಿನ ಅಲೆಗೆ ಸಿಲುಕಿ ಕೊಚ್ಚಿಕೊಂಡು ಹೋಗಿದ್ದು, ನಾಲ್ಕು ವಿದ್ಯಾರ್ಥಿನಿಯರನ್ನು ಲೈಫ್‌ಗಾರ್ಡ್‌ಗಳು ರಕ್ಷಿಸಿ ದಡಕ್ಕೆ ತಂದರು. ಆದರೆ ಅವರಲ್ಲಿ ಶ್ರಾವಂತಿ ಎಂಬ ವಿದ್ಯಾರ್ಥಿನಿ ಮೃತಪಟ್ಟಿದ್ದು, ಯಶೋಧ, ವೀಕ್ಷಣಾ ಮತ್ತು ಲಿಪಿಕಾ ಆಸ್ಪತ್ರೆಯಲ್ಲಿ ಚೇತರಿಸಿಕೊಂಡರು. ನೀರಿನಲ್ಲಿ ಕೊಚ್ಚಿ ಹೋದ ದೀಕ್ಷಾ, ಲಾವಣ್ಯ ಮತ್ತು ವಂದನಾರವರ ಸಾವಿಗೆ ಈ ಆರು ಜನರ ನಿರ್ಲಕ್ಷತನವೇ ಕಾರಣವಾಗಿದ್ದು, ಇವರ ಮೇಲೆ ಕಾನೂನು ಕ್ರಮಕ್ಕೆ ಮುಂದಾದ ಪೊಲೀಸರು ಶಿಕ್ಷಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

**ಸುರಕ್ಷಿತ ಕ್ರಮಕ್ಕೆ ಸಮೃದ್ಧಿ ಆಗ್ರಹ**

ಕರಾವಳಿ ಪ್ರವಾಸದಲ್ಲಿ ಅನಿರೀಕ್ಷಿತ ಸಾವಿಗೆ ತುತ್ತಾಗಿರುವ ಮಕ್ಕಳ ಬಗ್ಗೆ ವಿಷಯ ತಿಳಿಯುತ್ತಿದ್ದಂತೆ ತಂಡೆ, ತಾಯಿ, ಪೋಷಕರು 10ರಂದು ಮಂಗಳವಾರ ರಾತ್ರಿ ಶಾಲೆಯ ಮುಂದೆ ಸೇರಿ ಕೂಡಲೇ ನಮ್ಮ ಮಕ್ಕಳನ್ನು ಊರಿಗೆ ಕರೆದುಕೊಂಡು ಬನ್ನಿ ಎಂದು ಮೇಲ್ವಿಚಾರಕರ ಮುಂದೆ ತಮ್ಮ ಆತಂಕವನ್ನು ತೋಡಿಕೊಂಡರು. ಜೊತೆಗೆ ಇಡೀ ತಾಲ್ಲೂಕಿನ ಜನರು ಕಣ್ಣೀರಾಕಿದರಲ್ಲದೆ ಎಂ. ಕೊತ್ತೂರು ಬಾಳಸಂದ್ರ, ಗ್ರಾಮದಲ್ಲಿ ಸೂತಕದ ವಾತಾವರಣ ನಿರ್ಮಾಣವಾಗಿತ್ತು. ಬೆಳಗಾವಿ ಅಧಿವೇಶನದಲ್ಲಿದ್ದ ಮುಳಬಾಗಿಲು ಕ್ಷೇತ್ರದ ಶಾಸಕ ಸಮೃದ್ಧಿ ಮಂಜುನಾಥ್ ರವರಿಗೆ ಘಟನೆಯ ವಿಷಯ ತಿಳಿಯುತ್ತಿದ್ದಂತೆ ಮೊದಲಿಗೆ ತಮ್ಮ ಆಪ್ತ ಸಹಾಯಕರಿಗೆ ಫೋನ್ ಮಾಡಿ ಮಕ್ಕಳನ್ನು ಕಳೆದುಕೊಂಡಿರುವ ಹಾಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಪೋಷಕರನ್ನು ಮುರುಡೇಶ್ವರಕ್ಕೆ ಕರೆದುಕೊಂಡು ಬನ್ನಿ ನಾನು ಬುಧವಾರ ಬಳಿಗ್ಗೆ ಅಲ್ಲಿಗೆ ಬಂದಿರುವುದಾಗಿ ಹೇಳಿದರು. ಅದರಂತೆ ಶಾಸಕ ಸಮೃದ್ಧಿ ಮಂಜುನಾಥ್‌ರವರು ಮುರುಡೇಶ್ವರಕ್ಕೆ ತೆರಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿನಿಯರ ಆರೋಗ್ಯವನ್ನು ವಿಚಾರಿಸಿದರು. ಅಷ್ಟೊತ್ತಿಗಾಗಲೇ ಮುಳಬಾಗಿಲಿನಿಂದ ಎರಡು ಟಿ.ಟಿ. ವಾಹನಗಳಲ್ಲಿ ಮುರುಡೇಶ್ವರಕ್ಕೆ ಬಂದಿದ್ದ ವಿದ್ಯಾರ್ಥಿನಿಯರ ಪೋಷಕರನ್ನು ಸಂತೈಸಿದರಲ್ಲದೆ ಅಲ್ಲಿಯೇ ಇದ್ದ ವಿದ್ಯಾರ್ಥಿಗಳನ್ನು ತಬ್ಬಿಕೊಂಡು ಕಣ್ಣೀರಿಟ್ಟರು. ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಆತಂಕಪಡದೇ ಗ್ರಾಮಗಳಿಗೆ ವಾಪಸ್ಸು ತೆರಳುವಂತೆ ಧೈರ್ಯ ತುಂಬಿದರು. ಇದೇ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತಾ ಮುರುಡೇಶ್ವರ ಬೀಚ್‌ನಲ್ಲಿ ಯಾವುದೇ ಸುರಕ್ಷಿತ ಕ್ರಮಗಳ ವ್ಯವಸ್ತೆ ಇಲ್ಲ. ಕಾರವಾರ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ನಿಷ್ಕ್ರೀಯವಾಗಿದೆ. ಲೈಫ್‌ಗಾರ್ಡ್ ಇಲ್ಲ. ಬಡವರ ಮಕ್ಕಳು ಪ್ರವಾಸಕ್ಕೆ ಬಂದಾಗ ಇಂತಹ ಘಟನೆಗಳು ನಡೆದರೆ ಹೇಗೆ? ಸಮುದ್ರಕ್ಕೆ ಇಳಿಯುವ ಸಾರ್ವಜನಿಕರಿಗೆ ಸುರಕ್ಷಿತ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುವವರೆಗೂ ಮುರುಡೇಶ್ವರ ಬೀಚ್‌ಗೆ ಯಾರು ಇಳಿಯದಂತೆ ನಿಷೇಧ ಮಾಡಬೇಕೆಂದು ಆಗ್ರಹಿಸಿದ್ದಾರೆ. ಸಮುದ್ರದ ಅಲೆಗಳಲ್ಲಿ ಕೊಚ್ಚಿಹೋಗಿದ್ದಾ ದೀಕ್ಷಾ, ಲಾವಣ್ಯ ಹಾಗೂ ವಂದನಾಳ ಮೃತದೇಹಕ್ಕಾಗಿ ಸ್ಥಳೀಯ ಪೊಲೀಸರು ಅಗ್ನಿಶಾಮಕದಳ ಕರಾವಳಿ ಕಾವಲು ಪಡೆಯ ಪೊಲೀಸರು ಹುಡುಕಾಟ ನಡೆಸಿದರು. ಆದರೆ ವಿದ್ಯಾರ್ಥಿನಿಯರ ಶವಗಳು ಪತ್ತೆಯಾಗಲಿಲ್ಲ. ಮರುದಿನ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಮುರುಡೇಶ್ವರ ದೇವಸ್ಥಾನದ ಹಿಂಬದಿಯ ಅರಬ್ಬೀ ಸಮುದ್ರದ ಬಂಡೆ ಕಲ್ಲುಗಳ ಕೆಳಗೆ ಶವಗಳು ಪತ್ತೆಯಾಗಿದ್ದು ಅವುಗಳನ್ನು ಹೊರ ತೆಗೆದು ಮುರುಡೇಶ್ವರ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು. ಆಸ್ಪತ್ರೆಯ ಶವಗಾರಕ್ಕೆ ಎಸ್ಪಿ ನಾರಾಯಣ್, ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್, ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆಯ ಪಿಐ, ಮುರುಡೇಶ್ವರ ಪೊಲೀಸ್ ಠಾಣೆಯ ಪಿಎಸ್‌ಐ ಮತ್ತು ಸಿಬ್ಬಂದಿ ವರ್ಗ ಹಾಗೂ ಮೃತ ವಿದ್ಯಾರ್ಥಿನಿಯರ ಪೋಷಕರ ಸಮಕ್ಷಮದಲ್ಲಿ ಶವಗಳ ಮಹಜರ್ ನಡೆಸಿದ ಮೇಲೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹಗಳ ಪರೀಕ್ಷೆ ನಡೆಸಿದ ನಂತರ ಶವಗಳನ್ನು ಮುಳಬಾಗಿಲಿಗೆ ತರುವ ವ್ಯವಸ್ಥೆಯನ್ನು ಕೋಲಾರ ಜಿಲ್ಲಾಡಳಿತದಿಂದ ಮಾಡಲಾಗಿತ್ತು. 12ರಂದು ಗುರುವಾರ ಬೆಳಿಗ್ಗೆ 8 ಗಂಟೆಗೆ ವಿದ್ಯಾರ್ಥಿನಿಯರ ಪಾರ್ಥಿವ ಶರೀರಗಳನ್ನು ತೆಗೆದುಕೊಂಡು ಬಂದ ಆ್ಯಂಬುಲೆನ್ಸ್‌ಗಳು ಜಿಲ್ಲಾಡಳಿತ ಭವನದ ಆವರಣಕ್ಕೆ ಬರುತ್ತಿದ್ದಂತೆ ಜಿಲ್ಲಾಧಿಕಾರಿ ಅಕ್ರಂ ಪಾಷ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್, ಉಪವಿಭಾಗಾಧಿಕಾರಿ ಡಾ|| ಹೆಚ್.ಸಿ.ಎಸ್. ಮೈತ್ರಿ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪಿ. ಪ್ರವೀಣ್ ಬಾಗೇವಾಡಿ, ಎಎಸ್ಪಿಗಳಾದ ರವಿಶಂಕರ್, ಜಗದೀಶ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶ್ರೀನಿವಾಸ್, ತಹಶೀಲ್ದಾರ್ ಡಾ|| ನಯನಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ನೌಕರರು ಹಾಗೂ ಸಾರ್ವಜನಿಕರು ಅಂತಿಮ ದರ್ಶನ ಪಡೆದು ನಮನ ಸಲ್ಲಿಸಿದರು. ನಂತರ ಪೂಜಾರಹಳ್ಳಿಗೆ ಶ್ರಾವಂತಿ, ಹೆಬ್ಬಣಿಗೆ ಲಾವಣ್ಯ, ಎನ್. ಗಡ್ದೂರು ಗ್ರಾಮಕ್ಕೆ ದೀಕ್ಷಾ ಹಾಗೂ ದೊಡ್ಡಗುಟ್ಟಹಳ್ಳಿ ಗ್ರಾಮಕ್ಕೆ ವಂದನಾರವರ ಮೃತದೇಹವನ್ನು ತೆಗೆದುಕೊಂಡು ಹೋಗಿ ಮೃತರ ಕುಟುಂಬದವರಿಗೆ ತಾಲ್ಲೂಕು ಆಡಳಿತದಿಂದ ತಹಶೀಲ್ದಾರ್‌ರವರು ಹಸ್ತಾಂತರ ಮಾಡಿ ಮೃತರಿಗೆ ಗೌರವ ನಮನ ಸಲ್ಲಿಸಿದರು. ಗ್ರಾಮಗಳಿಗೆ ಪಾರ್ಥಿವ ಶರೀರ ಆಗಮಿಸುತ್ತಿದ್ದಂತೆ ಪಾಲಕರು, ಸಂಬಂಧಿಕರು ಮತ್ತು ಗ್ರಾಮಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಪೊಲೀಸರ ನೆರವಿನೊಂದಿಗೆ ಸ್ವಗ್ರಾಮಗಳಲ್ಲಿ ವಿದ್ಯಾರ್ಥಿನಿಯರ ಅಂತಿಮ ಸಂಸ್ಕಾರವನ್ನು ನೆರವೇರಿಸಲಾಯಿತು.





ಎಸ್ಪಿ ನಾರಾಯಣ್

**ಶಿಕ್ಷಕರ ಅಮಾನತ್ತು**

ಶೈಕ್ಷಣಿಕ ಪ್ರವಾಸದ ಸಮಯದಲ್ಲಿ ಬೇಜವಾಬ್ದಾರಿಯಿಂದ ವರ್ತಿಸಿ ವಿದ್ಯಾರ್ಥಿಗಳ ಸಾವಿಗೆ ಕಾರಣರಾಗಿದ್ದಾರೆಂಬ ಆರೋಪದ ಮೇಲೆ ಶಾಲೆಯ ಪ್ರಾಂಶುಪಾಲೆ ಶಶಿಕಲಾರನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಿಇಓ ಕಾಂತರಾಜು ಸೇವೆಯಿಂದ ಅಮಾನತ್ತು ಮಾಡಿ ಶಶಿಕಲಾ ಸ್ಥಾನಕ್ಕೆ ಕುರುಡುಮಲೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲೆ ಸಂತೋಷಮ್ಮರವರನ್ನು ನೇಮಕ ಮಾಡಲಾಗಿದೆ. ಪ್ರವಾಸ ಸಮಯದಲ್ಲಿ ನಿರ್ಲಕ್ಷ್ಯ ತೋರಿದ ಶಿಕ್ಷಕರಾದ ಚೌಡಪ್ಪ,

☞ 12



ಪೋಷಕರಿಗೆ ಚೆಕ್ ವಿತರಿಸುತ್ತಿರುವ ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿ



ಮೃತ ಮಕ್ಕಳ ಪೋಷಕರಿಗೆ ವಾಲ್ಮೀಕಿ ಸಂಘದ ವತಿಯಿಂದ ಪರಿಹಾರ ನೀಡುತ್ತಿರುವುದು

# ಪತಿಯ ಅನೈತಿಕ ಸಂಬಂಧಕ್ಕೆ ಪತ್ನಿ ಬಲಿ...
# ಸರೋಜಮ್ಮ ಸಾವು ಆತ್ಮಹತ್ಯೆಯೋ...? ಕೊಲೆಯೋ...?


ಸರೋಜಮ್ಮ ಬದುಕಿದ್ದಾಗ


ದೇವಣ್ಣ

**ಮೈಸೂರು**

✍ ಟಿ.ಎನ್. ಕಷ್ಣಕುಮಾರ್

**ಪ**ತಿಯ ಅನೈತಿಕ ಸಂಬಂಧಕ್ಕೆ ಪತ್ನಿ ಬಲಿಯಾಗಿದ್ದಾಳೆ. ಪ್ರಿಯಕರಳ ಮಗಳ ಚಾಕರಿಗೆ ಪತ್ನಿಯನ್ನ ಕರೆದೊಯ್ದು ಪತಿ ಕೊಲೆ ಮಾಡಿ ನಂತರ ತನ್ನ ಸಂಬಂಧಿಕರ ಜೊತೆ ಸೇರಿ ಮೃತದೇಹವನ್ನ ನೇಣು ಬಿಗಿದ ಸ್ಥಿತಿಯಲ್ಲಿ ಕಾಣುವಂತೆ ಮಾಡಿ ಆತ್ಮಹತ್ಯೆ ಎಂಬಂತೆ ಬಿಂಬಿಸಿರುವ ಆರೋಪ ಕೇಳಿ ಬಂದಿದೆ. ಗೃಹಿಣಿಯ ಅನುಮಾನಾಸ್ಪದ ಸಾವು ಸಾಕಷ್ಟು ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ. ಮಾವಿನ

## ಗೃಹಿಣಿಯ ಸಾವಿನ ಸುತ್ತ... ಅನುಮಾನದ ಹುತ್ತ...


ಮರದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾದ ಸರೋಜಮ್ಮ ಸಾವಿನ ಸುತ್ತ ಅನುಮಾನದ ಹುತ್ತ ಮೂಡಿದೆ. ಇದೊಂದು ಕೊಲೆ ಎಂದು ಮೃತಳ ಸಂಬಂಧಿಕರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್‌ರವರಿಗೆ ದೂರು ಕೊಟ್ಟಿದ್ದಾರೆ. ಆದರೆ ಸಧ್ಯ ಮೈಸೂರು ತಾಲೂಕು ಜಯಪುರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಕೇಸ್ ದಾಖಲಾಗಿದೆ. ಕೊಲೆ ಆರೋಪ ಹೊತ್ತ ಪತಿ, ಪ್ರಿಯತಮೆ ಹಾಗೂ ಇಬ್ಬರು ಸಂಬಂಧಿಕರು ತಲೆಮರೆಸಿಕೊಂಡಿದ್ದಾರೆ. ಅನುಮಾನಾಸ್ಪದವಾಗಿ ಮೃತಪಟ್ಟ ಸರೋಜಮ್ಮಳ ಸಾವಿನ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಸಂಬಂಧಿಕರು ಆಗ್ರಹಿಸಿದ್ದಾರೆ.


ನೇಣಿನ ಕುಣಿಕೆಯಲ್ಲಿ ಸರೋಜಮ್ಮ

ಕಾಮಾತುರಾಣಾಂ ನಾ ಭಯಂ ನಾ ಲಜ್ಜ ಎಂಬ ಮಾತುಗಳು ಕೆಲವು ಕಿಡಿಗೇಡಿಗಳಿಗೆ ಅಕ್ಷರಶಃ ಅನ್ವಯಿಸುವುದರಲ್ಲಿ ಸಂದೇಹವೇ ಇಲ್ಲ. ಕಾಮದ ರುಚಿ ಕಂಡ ತಿಕ್ಕಲು ಬುದ್ಧಿಯ ಅವಿವೇಕಿಗಳಿಗೆ ಪತ್ನಿಯ ಬಗ್ಗೆಯಾಗಲಿ, ಮಕ್ಕಳ ಬಗ್ಗೆ ಆಗಲಿ ಚಿಂತೆ ಇರುವುದಿಲ್ಲ. ಹೀಗಿರುವಾಗ ಇನ್ನು ಸಮಾಜದ ಬಗ್ಗೆ ಚಿಂತೆ ಮಾಡುತ್ತಾರೆ ಎಂಬುದು ಮೂರ್ಖತನ. ಇಂತಹ ಕ್ಯಾಟಗರಿಗೆ ಸೇರಿದವನೇ ಮೈಸೂರು ತಾಲೂಕು ಮಾರ್ಬಳ್ಳಿ ಗ್ರಾಮದ ದೇವಣ್ಣ. ಅಂತದ್ದೇನು ಕಿತಾಪತಿ ಮಾಡಿದ ಅಂತೀರಾ...? ಸುಂದರವಾದ ಪತ್ನಿ, ಮೂರು ಹೆಣ್ಣು ಮಕ್ಕಳಿದ್ರೂ ಹಿರಿ ಮಗಳ ಅತ್ತಿಗೆ ಜೊತೆ ಅನೈತಿಕ ಸಂಬಂಧ ಬೆಳೆಸಿ ಸಿಕ್ಕಿಬಿದ್ದರೂ ಕಾಮದ ಅಮಲಿನಲ್ಲಿ ಕ್ಯಾರೆ ಎನ್ನದ ಬೇಜವಾಬ್ದಾರಿ ಮನುಷ್ಯ. ರೆಡ್‌ಹ್ಯಾಂಡಾಗಿ ಆಗಿ ಸಾಕಷ್ಟು ಬಾರಿ ಪ್ರಿತಮಳ ಜೊತೆ ಸಿಕ್ಕಿಬಿದ್ದರೂ ಡೋಂಟ್ ಕೇರ್ ಎಂದೇ ಸಂಬಂಧ ಬೆಳೆಸಿದ ಕೀಚಕ. ತನ್ನ ಕಾಮದ ತೃಷೆ ತೀರಿಸಿಕೊಳ್ಳುವ ಭರದಲ್ಲಿ ಪತ್ನಿಯನ್ನ ಕಡೆಗಣಿಸಿ ಸಾವಿಗೆ ಕಾರಣನಾದ ಮನುಷ್ಯ ರೂಪದ ರಕ್ಕಸ.


ದೇವಣ್ಣನ ಲವರ್ ಪ್ರೇಮಾ

ಹೌದು... ಇವನು ಮಾಡಿದ್ದಾದ್ರೂ ಏನು ಅಂತೀರಾ... 35 ವರ್ಷದ ಹಿಂದೆ ನಂಜನಗೂಡು ತಾಲೂಕು ಗೌಡರಹುಂಡಿ ಗ್ರಾಮದ ಚಿಕ್ಕಯ್ಯನಛತ್ರ, ಹೋಬಳಿಯ ಸರೋಜಮ್ಮಳನ್ನ ಹಿರಿಯರ ಸಮ್ಮುಖದಲ್ಲೇ ವರಿಸಿದ. ಅನ್ಯೋನ್ಯ ಸಂಸಾರದ ಕುರುಹಾಗಿ ಮೂರು ಹೆಣ್ಣುಮಕ್ಕಳ ತಂದೆಯಾದ. ವ್ಯವಸಾಯದಲ್ಲಿ ನಿಸ್ಸೀಮನಾಗಿದ್ದ ದೇವಣ್ಣ ಜಮೀನಿನಲ್ಲಿ ಕಸರತ್ತು ನಡೆಸುತ್ತಾ ಮತ್ತೊಂದು ಹೆಣ್ಣಿನ ಸಂಗ ಮಾಡಿದ್ದ. ಸರೋಜಮ್ಮಳಿಗೆ ದೇವಣ್ಣ ಬೇರೆ ಯಾರೂ ಆಗಿರಲಿಲ್ಲ ಸ್ವಂತ ಅತ್ತೆ ಮಗನೇ ಆಗಿದ್ದ. ಸಂಬಂಧದಲ್ಲೇ ಮದುವೆ ಮಾಡಿದ್ರಿಂದ ಸರೋಜಮ್ಮ ಸುಖವಾಗಿ ಜೀವನ ಸಾಗಿಸುತ್ತಾಳೆ ಅಂತಾನೇ ಎಲ್ಲರೂ ಅಂದುಕೊಂಡಿದ್ದರು. ಮೊದಲ ಮಗಳ ಮದುವೆ ಆಗುತ್ತಿದ್ದಂತೆಯೇ ವರಸೆ ತೆಗೆದಿದ್ದ. ಹಿರಿ ಮಗಳ ಅತ್ತಿಗೆ ಪ್ರೇಮಾ ಮೇಲೆ ಮೋಹ ಬೆಳೆಸಿಕೊಂಡ. ಜಮೀನಿನಲ್ಲಿ ವ್ಯವಸಾಯ ಮಾಡಿದಂತೆ ಪ್ರೇಮಾ ಜೊತೆಗೂ ಸಾಕಷ್ಟು ಕಸರತ್ತು ನಡೆಸಿದ. ಮೂರು ಮಕ್ಕಳ ತಂದೆ ಆದ್ರೂ ಪ್ರೇಮಾಗೆ ದೇವಣ್ಣ ಬೇಕಿತ್ತು. ಅದ್ಯಾವ ಸುಖ ತೋರಿಸಿದ್ನೋ ಗೊತ್ತಿಲ್ಲ ಮುಗ್ಧ ಗಂಡನ ಮುಂದೆಯೇ ದೇವಣ್ಣನ ಜೊತೆ ಓಡಾಡೋಕ್ಕೆ ಶುರು ಮಾಡಿಕೊಂಡಿದ್ಲು. ಯಾವ ವಿಚಾರ ಬೇಗ ವೈರಲ್ ಆಗುತ್ತೋ ಇಲ್ವೋ ಗೊತ್ತಿಲ್ಲ, ಅಕ್ರಮ ಸಂಬಂಧ ವಿಚಾರಗಳಂತೂ ರಾತ್ರೋ ರಾತ್ರಿ ವೈರಲ್ ಆಗಿಬಿಡುತ್ತೆ. ಹಾಗೇ ಆಯ್ತು ಈ ಇಬ್ಬರ ವಿಚಾರದಲ್ಲಿ. ಗಂಡ ಮನೆಯಲ್ಲಿದ್ರೂ ಲೀಲಾಜಾಲವಾಗಿ ಪ್ರೇಮಾ ಮನೆಗೆ ಬರುತ್ತಿದ್ದ ದೇವಣ್ಣನಿಗೆ ಯಾವುದೇ ಅಡೆತಡೆ ಆಗಲಿಲ್ಲ. ದೇವಣ್ಣನ ಕರಾಮತ್ತು ಸರೋಜಮ್ಮಳಿಗೆ ತಿಳಿಯೋಕ್ಕೆ ತುಂಬಾ ದಿನಗಳು ಬೇಕಿರಲಿಲ್ಲ. ಪ್ರೇಮಾ ಜೊತೆ ಓಡಾಡುತ್ತಿದ್ದ ವಿಚಾರದಲ್ಲಿ ಸರೋಜಮ್ಮ ವಿರೋಧಿಸುತ್ತಾ ಬಂದ್ಲು. ಯಾವುದಕ್ಕೇ ಕೇರ್ ಮಾಡದ ದೇವಣ್ಣ ತನ್ನ ಸಂಬಂಧ ಮುಂದುವರೆಸುತ್ತಾ ಬಂದ. ಈ ಮಧ್ಯೆ ಇನ್ನಿಬ್ಬರು ಹೆಣ್ಣು ಮಕ್ಕಳ ಮದುವೆ ಸಹ ಮುಗಿದು ಹೋಯ್ತು. ಆದ್ರೆ ದೇವಣ್ಣ ಪ್ರೇಮಾ ಕಳ್ಳಾಟಕ್ಕೆ ಮಾತ್ರ ಬ್ರೇಕ್ ಬೀಳಲಿಲ್ಲ. ಹೀಗೇ ಮುಂದುವರೆದ್ರೆ ತನ್ನ ಸಂಸಾರ ಹಾಳಾಗೋದು ಗ್ಯಾರೆಂಟಿ ಅಂತ ಖಚಿತಪಡಿಸಿಕೊಂಡ ಸರೋಜಮ್ಮ ಹಿರಿಯರ ಗಮನಕ್ಕೆ ತಂದ್ರು. ಇದ್ಯಾವುದಕ್ಕೂ ಸೊಪ್ಪು ಹಾಕದ ದೇವಣ್ಣ ಪ್ರಿಯತಮೆ ಜೊತೆ ಜಾಲಿಯಾಗೇ ಸುತ್ತಾಡುತ್ತಿದ್ದ. ಒಂದಲ್ಲ ಹತ್ತಾರು ಭಾರಿ ಪಂಚಾಯ್ತಿ ನಡೆಯಿತು. ಸಭೆಯಲ್ಲಿ ಮಕ್ಕಳ ಮದುವೆಗೆ ಪ್ರೇಮಾ 10 ಲಕ್ಷ ಸಾಲ ಕೊಟ್ಟಿದ್ದಾಳೆ ಕೊಟ್ಬಿಡಿ ಅವಳ ಸಂಬಂಧ ಬಿಡ್ತೀನಿ ಅಂತ ವಾದಿಸುತ್ತಿದ್ದ. ಒಮ್ಮೊಮ್ಮೆ ಅವಳ ಸಂಗ ಬಿಡ್ತೀನಿ ಅಂತ ಎಲ್ಲರ ಮುಂದೆ ಮಾತು ಕೊಡ್ತಿದ್ದ. ಯಾವ ಮಾತಿಗೂ ನಿಲ್ಲದ ದೇವಣ್ಣನ ಅಕ್ರಮ ಸಂಬಂಧ ಮುಂದುವರೆಯಿತು. ಯಾರ ಎಚ್ಚರಿಕೆಯೂ ವರ್ಕ್‌ಔಟ್ ಆಗಲಿಲ್ಲ.


ಎಸ್ಪಿ ವಿಷ್ಣುವರ್ಧನ

ಡಿ.10ರಂದು ಮನೆಗೆ ಬಂದ ದೇವಣ್ಣ ಸರೋಜಮ್ಮಳನ್ನ ಬೈಕ್‌ನಲ್ಲಿ ಹತ್ತಿಸಿಕೊಂಡ. ನೇರವಾಗಿ ಕರೆದೊಯ್ದಿದ್ದು ದೂರ ಗ್ರಾಮದಲ್ಲಿದ್ದ ಪ್ರೇಮಾ ಮನೆಗೆ. ಎಷ್ಟೇ ವಿರೋಧಿಸಿದ್ರೂ ಪಟ್ಟು ಬಿಡದ ದೇವಣ್ಣ ಬಲವಂತವಾಗಿ ಪ್ರಿಯತಮಳ ಮನೆಗೆ ಪತ್ನಿಯನ್ನ ಕರೆದೊಯ್ದ. ಪ್ರೇಮಾ ಮಗಳು ಗರ್ಭಿಣಿಯಾಗಿದ್ಲು. ಸೀಮಂತದ ಚಾಕರಿ ಮಾಡೋಕ್ಕೆ ಕರೆದೊಯ್ದಿದ್ದ. ಇಷ್ಟವಿಲ್ಲದಿದ್ರೂ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕಾದ ಪರಿಸ್ಥಿತಿ ಸರೋಜಮ್ಮಳದ್ದು. ಇದೇ ವೇಳೆ ತನ್ನಲ್ಲಿದ್ದ ಆಕ್ರೋಶವನ್ನ ಬಹಿರಂಗಪಡಿಸಿದ್ಲು. ಜೋರಾಗೇ ಜಗಳ ಆಯ್ತು. ಕೋಪದಲ್ಲೇ ಸರೋಜಮ್ಮ ಮನೆ ಬಿಟ್ಟರು. ಆ ರಾತ್ರಿ ಮನೆಗೆ ಬರಲೇ ಇಲ್ಲ. ಹುಡುಕಾಡಿ ಸುಸ್ತಾದ ಸರೋಜಮ್ಮ ಮನೆಯವರು ಜಯಪುರ ಪೊಲೀಸ್ ಠಾಣೆಗೆ ತೆರಳಿ ಮಿಸ್ಸಿಂಗ್ ಕಂಪ್ಲೇಂಟ್ ದಾಖಲಿಸಿದ್ರು. ಮರುದಿನ ದೂರ ಗ್ರಾಮದ ಜಮೀನೊಂದರ ಮಾವಿನ ಮರದಲ್ಲಿ ಸರೋಜಮ್ಮ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆ ಆದ್ರು. ದೇವಣ್ಣ ಅಕ್ಕನ ಮಗ ಸತೀಶ ಇದನ್ನ ನೋಡಿ ಸರೋಜಮ್ಮಳ ಸಹೋದರ ಚಂದ್ರಶೇಖರ್‌ಗೆ ಫೋನ್ ಮಾಡಿ ತಿಳಿಸಿದ. ಘಟನೆ ನಡೆದ ಸ್ಥಳಕ್ಕೆ ಬಂದಾಗ ಅಚ್ಚರಿ ಮೂಡಿತ್ತು. 35 ವರ್ಷಗಳ ಕಾಲ ಎಂತಹ ಕಷ್ಟ ಬಂದ್ರೂ ಧೃತಿಗೆಡದೆ ದೇವಣ್ಣ ಜೊತೆ ಸಂಸಾರ ನಡೆಸಿದ ಸರೋಜಮ್ಮ ಆತ್ಮಹತ್ಯೆಗೆ ಶರಣಾದ್ರಾ ಎಂಬ ಅನುಮಾನ ಬಂತು. ಊಹೂಂ... ಸರೋಜಮ್ಮ ಆತ್ಮಹತ್ಯೆ ಮಾಡಿಕೊಳ್ಳುವಂತ ಹೇಡಿಯಲ್ಲ. ಸ್ಥಳಕ್ಕೆ ಬಂದ ದೇವಣ್ಣನ ಮುಖದಲ್ಲಿ ಅಪರಾಧಿ ಭಾವ ಕಾಣಿಸಲಿಲ್ಲ. ನಿರ್ಲಿಪ್ತತೆಯ ಭಾವನೆ ಆತನ ಮುಖದಲ್ಲಿ ಕಾಣಿಸುತ್ತಿತ್ತು. ಯಾರ ಪ್ರಶ್ನೆಗಳಿಗೂ ಉತ್ತರ ನೀಡದೆ ಮೌನಕ್ಕೆ ಶರಣಾಗಿದ್ದ. ದೇವಣ್ಣನ ವರ್ತನೆ ಅನುಮಾನಕ್ಕೆ ಕಾರಣವಾಗಿತ್ತು. ಇಲ್ಲಿ ಏನೋ ನಡೆದಿದೆ ಎಂದು ನಿರ್ಧರಿಸಿದ ಸರೋಜಮ್ಮ ಮನೆಯವರು ಜಯಪುರ ಪೊಲೀಸ್ ಠಾಣೆಯಲ್ಲಿ ಅನುಮಾನ ವ್ಯಕ್ತಪಡಿಸಿ ದೇವಣ್ಣನನ್ನ ಒಪ್ಪಿಸಿ ತೀವ್ರ ವಿಚಾರಣೆ ನಡೆಸುವಂತೆ ದೂರು ನೀಡಿದ್ರು. ಜೊತೆಗೆ ಪ್ರೇಮಾ, ಸತೀಶ ಹಾಗೂ ಮಾದಪ್ಪನ ಮೇಲೂ ಸಂಶಯ ವ್ಯಕ್ತಪಡಿಸಿದ್ರು. ಜಯಪುರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ದಾಖಲಾಯಿತು. ದೇವಣ್ಣ ಹೊರಗೆ ಬಂದಿದ್ದ.

ಮೂವರು ಅರೆಸ್ಟ್ ಆಗದಿರುವುದು ಸರೋಜಮ್ಮ ಸಂಬಂಧಿಕರನ್ನ ಕೆರಳಿಸಿತ್ತು. ಜಯಪುರ ಪೊಲೀಸ್ ಠಾಣೆಯಲ್ಲಿ ಕೇವಲ ಯುಡಿಆರ್ ದಾಖಲಾಗಿರೋದು ಸಮಾಧಾನ ತರಲಿಲ್ಲ. ಮರುದಿನವೇ ಘಟನೆ ಸಂಬಂಧ ಹೆಚ್ಚಿನ ತನಿಖೆ ನಡೆಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್‌ರವರಿಗೆ ದೂರು ನೀಡಿದ್ರು. ಘಟನೆ ನಡೆದ ಸ್ಥಳದಲ್ಲಿ ಮೊಬೈಲ್ ಟವರ್ ಲೊಕೇಷನ್ ಸಹಾಯದಿಂದ ಸುಳಿವು ಪಡೆದು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ತಿಳಿಸಿದ್ದಾರೆ. ಸಧ್ಯ ದೇವಣ್ಣ, ಪ್ರೇಮಾ, ಸತೀಶ, ಮಾದಪ್ಪ ನಾಪತ್ತೆಯಾಗಿದ್ದಾರೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಸಾವಿನ ಸತ್ಯಾಸತ್ಯತೆ ಹೊರಬರಲಿದೆ. ಸರೋಜಮ್ಮಳ ಸಾವು ಆತ್ಮಹತ್ಯೆ ಅಲ್ಲ ಅದೊಂದು ಪೂರ್ವನಿಯೋಜಿತ ಕೊಲೆ ಎಂದೇ ಮನೆಯವರ ವಾದವಾಗಿದೆ. ಪೋಸ್ಟ್ ಮಾರ್ಟಮ್ ರಿಪೋರ್ಟ್‌ಗಾಗಿ ಪೊಲೀಸರು ಸಹ ಕಾದಿದ್ದಾರೆ. ಪತಿಯ ಅಕ್ರಮ ಸಂಬಂಧವನ್ನ ವಿರೋಧಿಸುತ್ತಾ ಬಂದ ಸರೋಜಮ್ಮ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾರೆ. ಆಕೆಯ ಸಾವಿನ ಸುತ್ತಾ ಅನುಮಾನದ ಹುತ್ತ ಎದ್ದಿದೆ. ಸಮಗ್ರ ತನಿಖೆ ನಡೆಸುವಂತೆ ಪೊಲೀಸರ ಮೇಲೆ ಒತ್ತಡ ಹೇರಲಾಗಿದೆ. ವೈದ್ಯಕೀಯ ಪರೀಕ್ಷೆ ವರದಿ ಇವೆಲ್ಲ ಅನುಮಾನಕ್ಕೂ ಉತ್ತರ ದೊರೆಯಲಿದೆ...

# ಟೆಕ್ಕಿ ಆತ್ಮಹತ್ಯೆ: ಪತ್ನಿ, ಅತ್ತೆ, ಭಾವಮೈದುನ ಸೆರೆ

ದೇಶಾದ್ಯಂತ ತೀವ್ರ ಸಂಚಲನಕ್ಕೆ ಕಾರಣವಾಗಿರುವ ಟೆಕ್ಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣ ಸಂಬಂಧ ಅವರ ಪತ್ನಿ ಸೇರಿದಂತೆ ಮೂವರನ್ನು ಮಾರತಹಳ್ಳಿ ಪೊಲೀಸರು ಬಂಧಿಸಿದ್ದಾರೆ. ಇದೇ ವೇಳೆ ಮಗನ ಸಾವಿಗೆ ನ್ಯಾಯ ದೊರೆಯುವರೆಗೂ ಚಿತಾಭಸ್ಮ ವಿಸರ್ಜಿಸುವುದಿಲ್ಲ ಎಂದು ಕುಟುಂಬಸ್ಥರು ಹೇಳಿದ್ದು, ಮಗು ಈಗ ಅನಾಥವಾಗಿದೆ. ಅತುಲ್ ಪತ್ನಿ ನಿಖಿತಾ ಸಿಂಘಾನಿಯಾಳನ್ನು ಹರಿಯಾಣದ ಗುರುಗ್ರಾಮದಲ್ಲಿ ಬಂಧಿಸಿದ್ದರೆ, ತಾಯಿ ನಿಶಾ ಸಂಘಾನಿಯಾ ಹಾಗೂ ಸಹೋದರ ಅನುರಾಗ್ ಸಿಂಘಾನಿಯ ಅವರನ್ನು ಉತ್ತರ ಪ್ರದೇಶದ ಅಲಹಾಬಾದ್‌ನಲ್ಲಿ ಬಂಧಿಸಲಾಗಿದೆ. ಮೂವರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ. ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ವೈಟ್ ಫೀಲ್ಡ್ ವಿಭಾಗದ ಡಿಸಿಪಿ ಶಿವಕುಮಾರ್ ಮಾಹಿತಿ ನೀಡಿದ್ದಾರೆ.



ಆತ್ಮಹತ್ಯೆಗೆ ಶರಣಾದ ಅತುಲ್ ಸುಭಾಷ್

**ಏನಿದು ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣ**

ಉತ್ತರಪ್ರದೇಶ ಮೂಲದ 34 ವರ್ಷದ ಟೆಕ್ಕಿ ಅತುಲ್ ಸುಭಾಷ್ ಡಿಸೆಂಬರ್ 8ರಂದು ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದು ಮಾರನೇ ದಿನ ಬೆಳಗ್ಗೆ ಬೆಳಕಿಗೆ ಬಂದಿತ್ತು. ಕೂಡಲೇ ಸ್ಥಳೀಯರು 112 ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ತತ್‌ಕ್ಷಣ ಸ್ಥಳಕ್ಕೆ ಬಂದ ಪೊಲೀಸರು, ಸ್ಥಳ ಪರಿಶೀಲಿಸಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದು, ಕೇಸ್ ದಾಖಲಿಸಿಕೊಂಡಿದ್ದಾರೆ. ಅವನು ಬರೆದಿಟ್ಟ 26 ಪುಟಗಳ ಮರಣ ಪತ್ರದಲ್ಲಿ ಪತ್ನಿ ಮತ್ತು ಆಕೆಯ ಕುಟುಂಬ ಸದಸ್ಯರ ವಿರುದ್ಧ ಸಾಕಷ್ಟು ಆರೋಪಗಳನ್ನು ಮಾಡಿದ್ದನು. ಪತ್ನಿ ಮತ್ತು ಆಕೆಯ ಕುಟುಂಬದವರು ಅತುಲ್ ಸುಭಾಷ್ ಮತ್ತು ಕುಟುಂಬದವರ ವಿರುದ್ಧ 10ಕ್ಕೂ ಹೆಚ್ಚು ದೂರು ದಾಖಲಿಸಿದ್ದರು. ಬೆಂಗಳೂರಿನ ಮಂಜುನಾಥ್ ಲೇಔಟ್ ಖಾಸಗಿ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಅವರು ವಾಸವಿದ್ದರು. ಅತುಲ್ ಸುಭಾಷ್ ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದನು. ಐದು ವರ್ಷ ಹಿಂದೆ ಉತ್ತರ ಪ್ರದೇಶದಲ್ಲೇ ವಿವಾಹವಾಗಿದ್ದು, ಎರಡು ವರ್ಷದ ಹಿಂದೆ ಬೆಂಗಳೂರಿಗೆ ಬಂದು ನೆಲೆಸಿದ್ದನು. ಈ ನಡುವೆ ದಂಪತಿ ನಡುವೆ ಗಲಾಟೆ ನಡೆದಿದ್ದು ಅತುಲ್ ಪತ್ನಿ ಉತ್ತರ ಪ್ರದೇಶದ ತವರು ಮನೆಗೆ ತೆರಳಿದ್ದಳು. ಅತುಲ್ ಸುಭಾಷ್ ಮನೆಯಲ್ಲಿ ಒಂಟಿಯಾಗಿದ್ದನು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ಆರೋಪಿಗಳನ್ನು ಖೆಡ್ಡಾಗೆ ಬೀಳಿಸಿದ್ದೇ ರೋಚಕ**

ಅತುಲ್ ಆತ್ಮಹತ್ಯೆ ಪ್ರಕರಣ ಸಂಬಂಧ ಮೊದಲಿಗೆ ಬೆಂಗಳೂರು ಪೊಲೀಸರು ಮತ್ತು ಅತ್ತೆಯನ್ನು ಬಂಧಿಸಿದ್ದು, ಬಳಿಕ ಅತುಲ್ ಪತ್ನಿಯನ್ನು ಬಂಧಿಸಿದ್ದಾರೆ. ಅತುಲ್ ಪತ್ನಿ ನಿಖಿತಾಗಾಗಿ ಎರಡು ದಿನ ಪೊಲೀಸರು ಹುಡುಕಾಟ ನಡೆಸಿದ್ದರೂ ಪತ್ತೆಯಾಗಿರಲಿಲ್ಲ, ಹೀಗಾಗಿ ತಲೆಮರೆಸಿಕೊಂಡಿದ್ದ ನಿಖಿತಾ ಸೇರಿದಂತೆ ಎಲ್ಲಾ ಆರೋಪಿಗಳೂ ಅಲಹಾಬಾದ್ ಹೈಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಯು.ಪಿ ಬಿಟ್ಟು ಬೇರೆಡೆ ತಲೆಮರೆಸಿಕೊಂಡಿದ್ದ ಶಂಕೆ ಪೊಲೀಸರಿಗೆ ಇತ್ತು. ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ಸ್ನೇಹಿತರ ಸಹಾಯ ಪಡೆದು ಒಂದು ಕಡೆ ಇರದೆ, ವಾಸಸ್ಥಳವನ್ನು ಬದಲಿಸುತ್ತಿದ್ದರು, ಆದರೆ ಒಂದು ಬಾರಿ ಕರೆ ಮಾಡಿ ನೆರವು ಕೇಳಿದ್ದರಿಂದ ಮೊಬೈಲ್ ಟವರ್ ಮೂಲಕ ಲಾಕ್ ಆಗಿದ್ದಾರೆ.


ಡಿಸಿಪಿ ಶಿವಕುಮಾರ್

**ಚಿತಾಭಸ್ಮ ವಿಸರ್ಜನೆ ಇಲ್ಲ**

ಮಗನ ಸಾವಿಗೆ ನ್ಯಾಯ ಸಿಗುವವರೆಗೂ ಆತನ ಚಿತಾಭಸ್ಮ ವಿಸರ್ಜನೆ ಮಾಡುವುದಿಲ್ಲ ಮಗನಿಗೆ ಕಿರುಕುಳ ನೀಡಿ ಆತನ ಸಾವಿಗೆ ಕಾರಣ ರಾದವರಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಸುಭಾಷ್ ತಂದೆ ಪವನ್‌ಕುಮಾರ್ ಸರಕಾರವನ್ನು ಒತ್ತಾಯಿಸಿದ್ದಾರೆ.

ಅವರನ್ನು (ಸುಭಾಷ್ ಅವರ ವಿಚ್ಛೇದಿತ ಪತ್ನಿ ಮತ್ತು ಅತ್ತೆ) ಬಂಧಿಸಿದ್ದಕ್ಕಾಗಿ ನಾನು ಕರ್ನಾಟಕ ಪೊಲೀಸರಿಗೆ ಧನ್ಯವಾದ ಹೇಳುತ್ತೇನೆ. ನನ್ನ ಮಗನಿಗೆ ಕಿರುಕುಳ ನೀಡಿದ ಎಲ್ಲರಿಗೂ ಶಿಕ್ಷೆಯಾಗಬೇಕು, ಇದರಿಂದ ಅವನಿಗೆ ನ್ಯಾಯ ಸಿಗುತ್ತದೆ ಮತ್ತು ಅವನ ಆತ್ಮಕ್ಕೆ ಶಾಂತಿ ಸಿಗುತ್ತದೆ. ನಮಗೆ ನ್ಯಾಯ ಸಿಗುವವರೆಗೂ ಮಗನ ಚಿತಾಭಸ್ಮ ವಿಸರ್ಜಿಸುವುದಿಲ್ಲ. ನನ್ನ ಮಗನಿಗೆ ಹಣಕ್ಕಾಗಿ ಕಿರುಕುಳ ಮತ್ತು ಚಿತ್ರಹಿಂಸೆ ನೀಡಲಾಗುತ್ತಿತ್ತು ಮತ್ತು ಆತನ ಹೆಂಡತಿ ಆತನನ್ನು ಅವಮಾನಿಸುತ್ತಿದ್ದಳು. ದಯವಿಟ್ಟು ನಮಗೆ ನ್ಯಾಯ ಒದಗಿಸಿ ಎಂದು ನಾನು ಪ್ರಧಾನಿ ನರೇಂದ್ರ ಮೋದಿ ಮತ್ತು ಸಂಬಂಧಪಟ್ಟ ಎಲ್ಲರನ್ನೂ ವಿನಂತಿಸುತ್ತೇನೆ ಎಂದಿದ್ದಾರೆ. ಸುಭಾಷ್ ಅವರ ಸಹೋದರ ಬಿಕಾಸ್‌ಕುಮಾರ್ ಮಾತನಾಡಿ, ತಮ್ಮ ವಿರುದ್ಧ ದಾಖಲಿಸಿರುವ ಸುಳ್ಳು ಪ್ರಕರಣಗಳನ್ನು ಹಿಂಪಡೆಯಬೇಕು. ಈ ಘಟನೆಯ ಹಿಂದಿರುವ ಇನ್ನಿತರರನ್ನೂ ಬಂಧಿಸಬೇಕು. ಎಲ್ಲ ಸುಳ್ಳು ಪ್ರಕರಣಗಳನ್ನು ಹಿಂತೆಗೆದುಕೊಳ್ಳುವವರೆಗೂ ನಮಗೆ ನ್ಯಾಯ ಸಿಗುವುದಿಲ್ಲ, ನ್ಯಾಯ ಸಿಗುವವರೆಗೂ ನಾವು ನನ್ನ ಸಹೋದರನ ಚಿತಾಭಸ್ಮ ವಿಸರ್ಜಿಸುವುದಿಲ್ಲ, ನಮ್ಮ ಹೋರಾಟ ಮುಂದುವರಿಯುತ್ತದೆ ಎಂದಿದ್ದಾರೆ.


ಆರೋಪಿಗಳಾದ ನಿಶಾ ಸಿಂಗಾನಿಯಾ, ನಿಖಿತಾ ಸಿಂಘಾನಿಯಾ, ಅನುರಾಗ್ ಸಿಂಘಾನಿಯಾ

**ಮಗು ಅನಾಥವಾಯಿತೇ?**

ನನ್ನ ಸೋದರನ ಮಗ (ಸುಭಾಷ್ ಅವರ ಮಗ)ನ ಬಗ್ಗೆಯೂ ನಮಗೆ ತುಂಬಾ ಕಾಳಜಿ ಇದೆ. ಆ ಮಗುವಿನ ಸುರಕ್ಷತೆ ನಮಗೆ ಗಂಭೀರ ಆತಂಕದ ವಿಷಯವಾಗಿದೆ. ಮಾಧ್ಯಮಗಳಲ್ಲಿ ಇತ್ತೀಚೆಗೆ ಪ್ರಕಟವಾದ ಯಾವುದೇ ಛಾಯಾಚಿತ್ರಗಳಲ್ಲಿ ಆತ ಕಾಣಿಸಿಲ್ಲ, ಆತ ಎಲ್ಲಿದ್ದಾನೆ ಎಂಬುದನ್ನು ಮಾಧ್ಯಮಗಳ ಮೂಲಕ ತಿಳಿಯಲು ಬಯಸುತ್ತೇನೆ. ಸಾಧ್ಯವಾದಷ್ಟು ಬೇಗ ಆತನನ್ನು ನಮ್ಮ ಕಸ್ಟಡಿಗೆ ನೀಡಬೇಕೆಂದು ನಾವು ಬಯಸುತ್ತೇವೆ ಎಂದು ಬಿಕಾಸ್‌ಕುಮಾರ್ ಹೇಳಿದ್ದಾರೆ. ಈ ಮಧ್ಯೆ, ಮಗು ಬೋರ್ಡಿಂಗ್ ಶಾಲೆಯೊಂದರಲ್ಲಿ ಓದುತ್ತಿದ್ದಾನೆ ಎಂದು ಉತ್ತರ ಪ್ರದೇಶದ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

**ಕಿರುಕುಳ ಕಾನೂನು ದುರ್ಬಳಕೆ, ಬದಲಾವಣೆ ಅಗತ್ಯ**

ವರದಕ್ಷಿಣೆ ಕಿರುಕುಳ ಕಾನೂನು ದುರ್ಬಳಕೆಯ ಬಗ್ಗೆ ಮುಂದೆ ಭಾರತೀಯ ನ್ಯಾಯ ಸಂಹಿತೆಯಲ್ಲಿ ಚರ್ಚೆಯಾಗಬೇಕು, ಕಾನೂನಿನಲ್ಲಿ ಬದಲಾವಣೆ ಆಗಬೇಕು. ದೇಶ ಹಾಗೂ ರಾಜ್ಯದ ಕಾನೂನಿನಲ್ಲಿಯೂ ಬದಲಾವಣೆ ಆಗಬೇಕಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಅಭಿಪ್ರಾಯಪಟ್ಟರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟೆಕ್ಕಿ ಅತುಲ್ ಸುಭಾಷ್ ಪತ್ನಿ ನಿಖಿತಾ, ಅತ್ತೆ ನಿಶಾ ಮತ್ತು ಬಾಮೈದ ಬಂಧನದ ವಿಚಾರವಾಗಿ ಪ್ರತಿಕ್ರಿಯಿಸಿ, ಅವರನ್ನು ಪೊಲೀಸರು ಕಸ್ಟಡಿಗೆ ಪಡೆದಿದ್ದಾರೆ. ಈಗಾಗಲೇ ಡೆತ್‌ನೋಟ್ ಪಡೆದುಕೊಂಡಿದ್ದಾರೆ. ಮಹಿಳೆಯರಿಗಿರುವ ಕಾನೂನು ದುರ್ಬಳಕೆ ಆಗಿದೆ ಎಂಬುದೂ ಸೇರಿದಂತೆ ಅನೇಕ ವಿಚಾರಗಳನ್ನು ಡೆತ್‌ನೋಟಲ್ಲಿ ಅತುಲ್ ಬರೆದಿದ್ದಾರೆ. ಕಾನೂನಿನಲ್ಲಿರುವ ಅಂಶಗಳು ಬಹಳಷ್ಟು ಗಂಡಂದಿರಿಗೆ ತೊಂದರೆ ಆಗುತ್ತಿವೆ ಎಂಬ ಆರೋಪ ಇದ್ದು, ಇದು ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಗುತ್ತಿದೆ.

2 ☞

ನಡೆಯಲಿದ್ದು, ಅಲ್ಲಿ ಇಂಡಿಯಾ ಒಕ್ಕೂಟದಲ್ಲಿರುವ ಪ್ರಾದೇಶಿಕ ಪಕ್ಷಗಳು ಪ್ರತ್ಯೇಕವಾಗಿ ಚುನಾವಣೆ ಹೋದರೆ ಅಲ್ಲಿಗೆ ಇಂಡಿಯಾ ಒಕ್ಕೂಟದ ಕಥೆ ಮುಗಿದಂತೆಯೇ.

ಈಗಾಗಲೇ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಇಂಡಿಯಾ ಒಕ್ಕೂಟದಲ್ಲಿದ್ದರೂ ಚುನಾವಣೆ ಸೀಟು ಹಂಚಿಕೆ ವಿಚಾರದಲ್ಲಿ ಮಾತ್ರ ಅವರು ಯಾವುದೇ ಕಾರಣಕ್ಕೂ ರಾಜಿಯಾಗುವುದಿಲ್ಲ, ಹಾಗೆಯೇ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜತೆಗೆ ಒಟ್ಟಾಗಿ ಹೋಗಲು ತಯಾರಿಲ್ಲ, ಏಕೆಂದರೆ ಅವರು ಈಗಾಗಲೇ ಅಧಿಕಾರದಲ್ಲಿದ್ದಾರೆ. ಹೀಗಾಗಿ ತಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಜತೆಗೆ ಚುನಾವಣೆಗೆ ಹೋದರೆ ಅದರಿಂದ ಲಾಭವಂತು ಆಗಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ.

ಸದ್ಯಕ್ಕೆ ವಿಧಾನಸಭಾ ಚುನಾವಣೆ ಹತ್ತಿರದಲ್ಲಿರುವುದು ದೆಹಲಿಯಲ್ಲಿ ಇಲ್ಲಿ ಕಾಂಗ್ರೆಸ್‌ನ್ನು ಗುಡಿಸಿ ಅಧಿಕಾರ ಹಿಡಿದು ಆಡಳಿತ ನಡೆಸುತ್ತಿರುವುದು ಎಎಪಿ. ಕಾಂಗ್ರೆಸ್‌ನ್ನು ಸೋಲಿಸಿ ಅಧಿಕಾರಕ್ಕೆ ಬಂದಿರುವ ಎಎಪಿ ಮತ್ತೆ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡು ಚುನಾವಣೆಗೆ ಹೋದರೆ ಬಿಜೆಪಿಗೆ ಲಾಭವಾಗುತ್ತದೆ ಎಂಬುದು ಎಎಪಿ ಲೆಕ್ಕಾಚಾರವಾಗಿದೆ. ಹೀಗಾಗಿಯೇ ಅದು ಮೈತ್ರಿಗೆ ಸೊಪ್ಪು ಹಾಕದೆ ಏಕಾಂಗಿ ಹೋರಾಟಕ್ಕೆ ಸಜ್ಜಾಗಿದೆ. ಎಎಪಿ ಮತ್ತು ಟಿಎಂಸಿ ಇಂಡಿಯಾ ಒಕ್ಕೂಟದಿಂದ ದೂರ ಸರಿದರೆ ಕಾಂಗ್ರೆಸ್‌ಗೆ ಮುಖಭಂಗವಾಗುತ್ತದೆ. ಮತ್ತೆ ಹಿಂದಿನ ಯುಪಿಎ ಪರಿಸ್ಥಿತಿಯೇ ಬರಲಿದೆ

ದೆಹಲಿ ಚುನಾವಣೆಯತ್ತ ಇಡೀ ದೇಶ ಕಣ್ಣಿಟ್ಟಿದೆ. ಇಲ್ಲಿ ಅಧಿಕಾರ ಉಳಿಸಿಕೊಳ್ಳಲು ಎಎಪಿ ಪಣತೊಟ್ಟಿದೆ. ಹೀಗಾಗಿಯೇ ಅದು ಜರೂರಾಗಿಯೇ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡುವ ಮೂಲಕ ಕಾಂಗ್ರೆಸ್ ಜತೆಗೆ ಕೈಜೋಡಿಸಲ್ಲ ಎಂಬ ಸಂದೇಶ ನೀಡಿದೆ. ಈ ಸಂಬಂಧ ಸ್ಪಷ್ಟನೆಯನ್ನು ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ನೀಡಿದ್ದಾರೆ. ಅಲ್ಲಿಗೆ ಇಂಡಿಯಾ ಮೈತ್ರಿಗೆ ದೊಡ್ಡದೊಂದು ಹೊಡೆತ ಬಿದ್ದಿದೆ. ಈ ನಡುವೆ ಪ್ರಿಯಾಂಕ ಗಾಂಧಿ ಅವರು ಲೋಕಸಭೆಯಲ್ಲಿ ಮಾತನಾಡಿ ಮೋದಿಗೆ ಟಾಂಗ್ ನೀಡಿದ್ದಾರೆ. ಅವರ ಮಾತಿಗೆ ಕಾಂಗ್ರೆಸ್ ಸದಸ್ಯರು ಮೇಜುಕುಟ್ಟಿ ಬೆಂಬಲ ಸೂಚಿಸಿದ್ದಾರೆ. ಬಹುಶಃ ಅವರನ್ನು ಅಜ್ಜಿ ಇಂದಿರಾಗಾಂಧಿ ಅವರನ್ನು ಕಾಣುವ ಕಾತರ ಕಾಂಗ್ರೆಸ್ಸಿಗರಲ್ಲಿ ಹೆಚ್ಚಾಗಿದೆ. ಅವರ ನೇತೃತ್ವದಲ್ಲಿ ಮುಂದೆ ನಡೆದರೆ ಕಾಂಗ್ರೆಸ್ ಗೆಲುವು ಖಚಿತ ಎಂಬ ವಿಶ್ವಾಸದಲ್ಲಿದ್ದಾರೆ. ಇದನ್ನು ಅರಗಿಸಿಕೊಳ್ಳಲು ಮೈತ್ರಿ ಪಕ್ಷದ ಎಎಪಿ ಮತ್ತು ಟಿಎಂಸಿಗೆ ನುಂಗಲಾರದ ತುತ್ತಾಗಿದೆ. ಹೀಗಾಗಿ ಅದರ ನೆರಳಿನಲ್ಲಿ ವಿಧಾನಸಭಾ ಚುನಾವಣೆಗೆ ಹೋಗಲು ಪ್ರಬಲ ಪ್ರಾದೇಶಿಕ ಪಕ್ಷಗಳು ತಯಾರಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಇಂಡಿಯಾ ಒಕ್ಕೂಟದ ಕಥೆ ಏನು ಎಂಬುದೇ ಪ್ರಶ್ನೆಯಾಗಿ ಉಳಿದಿದೆ.



## ಅಪ್ರಾಪ್ತೆ ಮಗಳ ಮದುವೆ ಮಾಡಿಕೊಡಲು ನಿರಾಕರಿಸಿದ ತಾಯಿ-ಮಗ...


# ರೊಚ್ಚಿಗೆದ್ದ ಪಾಗಲ್ ಪ್ರೇಮಿ ಮತ್ತು ಮೂವರು ಸಹಚರರು ಸೇರಿಕೊಂಡು ತಾಯಿ-ಮಗನನ್ನು ಬರ್ಬರವಾಗಿ ಕೊಚ್ಚಿ ಕೊಚ್ಚಿ ಕೊಲೆ ಮಾಡಿದರು!


ಮಗಳ ಪ್ರಿಯಕರನಿಂದ ಕೊಲೆಯಾದ ಮಂಗಲಾ ನಾಯಿಕ

**ಆತ 32 ವರ್ಷದ ಐನಾತಿ ಪಾಗಲ್ ಪ್ರೇಮಿ. 17 ವರ್ಷದ ಅಪ್ರಾಪ್ತ ಕಾಲೇಜು ತರುಣಿಯನ್ನು ಇನ್ನಿಲ್ಲದಂತೆ ಪ್ರೀತಿಸುತ್ತಿದ್ದನು. ಮಹಾಮಾರಿ ಕರೋನಾ ವಕ್ಕರಿಸಿದ ಸಂದರ್ಭದಲ್ಲಿ ಅಪ್ರಾಪ್ತೆಯ ತಂದೆ ಸತ್ತು ಹೋಗಿದ್ದನು. ಈ ಸಂದರ್ಭದಲ್ಲಿ ಕುಟುಂಬಕ್ಕೆ ಸಹಾಯ ಮಾಡುವ ನೆಪದಲ್ಲಿ ಅಪ್ರಾಪ್ತೆಯ ಮನೆಯಲ್ಲಿ ಬಂದು ಉಳಿದ ಪಾಗಲ್ ಪ್ರೇಮಿ. ದಿನಕಳೆದಂತೆ ಅಪ್ರಾಪ್ತೆ ಜತೆಗೆ ಸಲುಗೆ ಬೆಳೆದು ಪರಸ್ಪರ ಹತ್ತಿರವಾದರು. ಇದೇ ಕಾರಣಕ್ಕೆ ನಿಮ್ಮ ಮಗಳನ್ನು ನನಗೆ ಕೊಟ್ಟು ಮದುವೆ ಮಾಡಬೇಕೆಂದು ಅಪ್ರಾಪ್ತೆಯ ತಾಯಿ ಮತ್ತು ಸಹೋದರನಿಗೆ ಒತ್ತಾಯಿಸುತ್ತಿದ್ದನು. 'ನಿನಗೂ ಮತ್ತು ನಮ್ಮ ಮಗಳಿಗೂ 16 ವರ್ಷ ಅಂತರವಿದೆ. ಮೇಲಾಗಿ ಆಕೆ ಕಲಿತಾಕೆ ನಾವು ನಿನಗೆ ಮದುವೆ ಮಾಡಿಕೊಡುವುದಿಲ್ಲ' ಎಂದು ಕಡ್ಡಿ ಮುರಿದಂತೆ ಹೇಳುವುದಲ್ಲದೆ ಇನ್ನೂ ಮುಂದೆ ತಮ್ಮ ಮನೆಗೆ ಬರಬಾರದೆಂದು ತಾಕೀತು ಮಾಡಿದಾಗ ಅನೇಕ ಬಾರಿ ಪಾಗಲ್ ಪ್ರೇಮಿ ಜಗಳ ಮಾಡಿಕೊಂಡಿದ್ದನು. ತನ್ನ ಮತ್ತು ಅಪ್ರಾಪ್ತೆಯ ಮದುವೆ ಬಗ್ಗೆ ಆಕ್ರೋಶಗೊಂಡು ತಾಯಿ-ಮಗ ಇಬ್ಬರನ್ನು ಮುಗಿಸಿದರೆ ತನ್ನ ದಾರಿ ಸಲೀಸಾಗುತ್ತದೆ ಎಂದು ಭಾವಿಸಿ ತನ್ನ ಮೂವರು ಸ್ನೇಹಿತರೊಡನೆ ಸಂಚು ರೂಪಿಸಿ ದಿನಾಂಕ 04-12-2024ರಂದು ರಾತ್ರಿ ಮನೆಗೆ ನುಗ್ಗಿದನು. ಮನೆಯಲ್ಲಿ ನಾಲ್ವರು ಸೇರಿಕೊಂಡು ಅಟ್ಟಾಡಿಸಿ ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಚ್ಚಿ... ಕೊಚ್ಚಿ ಕೊಲೆಗೈದು ಪರಾರಿಯಾದರು. ಜೋಡಿ ಕೊಲೆ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ಸಿಪಿಐ ಬಿ.ಎಸ್. ತಳವಾರ, ಪಿಎಸ್‌ಐಗಳಾದ ಶಿವರಾಜ ನಾಯಿಕವಾಡಿ, ಬಿ.ಕೆ. ಪಾಟೀಲ ಮತ್ತು ಸಿಬ್ಬಂದಿಗಳು ಕೇವಲ 24 ಗಂಟೆಗಳಲ್ಲಿ ಪಾಗಲ್ ಪ್ರೇಮಿ ಸೇರಿದಂತೆ ನಾಲ್ವರು ಹಂತಕರನ್ನು ಬಂಧಿಸಿ ಜೈಲಿಗಟ್ಟಿದ ಘಟನೆ ಬೆಳಗಾವಿ ಜಿಲ್ಲೆ ನಿಪ್ಪಾಣಿ ಗ್ರಾಮೀಣ ಪೊಲೀಸ್ ಠಾಣೆ ಅಕ್ಕೋಳದಿಂದ ವರದಿಯಾಗಿದೆ.**


ತಂಗಿಯ ಪ್ರಿಯಕರನಿಂದ ಕೊಲೆಯಾದ ಪ್ರಜ್ವಲ ನಾಯಿಕ


ಪಾಗಲ್ ಪ್ರೇಮಿ ರವಿ ಮತ್ತು ಸಹಚರರು ಬರ್ಬರವಾಗಿ ಮಂಗಲಾರನ್ನು ಕೊಲೆ ಮಾಡಿರುವುದು


ಬಾಳಿ ಬದುಕಬೇಕಾದ ಪ್ರಜ್ವಲ ರವಿಯ ಆಕ್ರೋಶಕ್ಕೆ ಭೀಕರವಾಗಿ ಕೊಲೆಯಾಗಿರುವುದು

ಪ್ರೀತಿ ಫಲಿಸದೇ ಹೋದಾಗ ನೊಂದುಕೊಂಡು ಕೆಲವರು ಆತ್ಮಹತ್ಯೆಗೆ ಮುಂದಾಗಿ ತಮ್ಮ ಜೀವನಕ್ಕೆ ಕೊನೆ ಹಾಡುತ್ತಾರೆ. ಇನ್ನೂ ಕೆಲವರು ಮನಸ್ಸಿನಲ್ಲಿ ಸೇಡಿನ ಬೆಂಕಿಯಿಂದ ಆಕ್ರೋಶಗೊಂಡು ತಮ್ಮ ಪ್ರೀತಿಗೆ ಅಡ್ಡ ಬಂದವರು ಯಾರೇ ಇರಲಿ ಅಂತಹವರನ್ನು ಹಿಂದು-ಮುಂದು ನೋಡದೇ ಕೊಚ್ಚಿ ಹಾಕುತ್ತಾರೆ. ಇದಕ್ಕೆ ಉದಾಹರಣೆಯಾಗಿ ಬೆಳಗಾವಿ ಜಿಲ್ಲೆಯ ಅಕ್ಕೋಳ ಪರಿಸರದಲ್ಲಿ ರವಿ ಲಕ್ಷ್ಮಣ ಖಾನಪ್ಪಗೋಳ ಎಂಬ ಪಾಗಲ್ ಪ್ರೇಮಿಯೊಬ್ಬ ತಾನು ಪ್ರೀತಿಸುತ್ತಿದ್ದ ಅಪ್ರಾಪ್ತ ತರುಣಿಯ ತಾಯಿ ಮಂಗಲ ನಾಯಿಕ ಮತ್ತವಳ ಮಗ ಪ್ರಜ್ವಲನನ್ನು ಅಟ್ಟಾಡಿಸಿ ತನ್ನ ಸ್ನೇಹಿತರೊಂದಿಗೆ ಕೊಚ್ಚಿ ಹಾಕಿದ್ದಾನೆ. ಈ ಬಿಭತ್ಸಕರ ಘಟನೆ ಅಕ್ಕೋಳ ಪರಿಸರವನ್ನು ನಡುಗಿಸಿದೆ. ತಮ್ಮ ಪ್ರೀತಿಗೆ ಅಡ್ಡಲಾದವರ ಮಾರಣಹೋಮ ನಡೆಸಿದ ರವಿ ಖಾನಪ್ಪಗೋಳ ಮತ್ತು ಮೂವರು ಇಂದು ಜೈಲು ಸೇರಿ ಕಂಬಿ ಎಣಿಸುತ್ತಿದ್ದಾರೆ. ಆದರೆ ನಿಷ್ಪಾಪಿ ತಾಯಿ-ಮಗ ಬಲಿಯಾಗಿದ್ದು ದೊಡ್ಡ ದುರಂತ. ಅಪ್ರಾಪ್ತೆ ಮಾತ್ರ ಅನಾಥಳಾಗಿ ದಿಕ್ಕು ತೋಚದಂತೆ ಚಡಿಪಡಿಸುತ್ತಿದ್ದಾಳೆ.

**ನತದೃಷ್ಟ ತಾಯಿ-ಮಗ...**

ಅಕ್ಷರಶಃ ಮಂಗಲಾ ನಾಯಿಕ ಬದುಕಿನಲ್ಲಿ ಏನಾದರೂ ಸಾಧಿಸಬೇಕು. ಎಲ್ಲರಂತೆ ಗಂಡ... ಮಕ್ಕಳು ತನ್ನದೇ ಆದ ಪುಟ್ಟ ಸಂಸಾರದೊಂದಿಗೆ ನಾಲ್ಕು ಜನರು ಹೌದೌದು ಎನ್ನುವಂತೆ ಜೀವನ ಸಾಗಿಸಬೇಕು ಎನ್ನುವ ಇರಾದೆ ಹೊಂದಿದ್ದಳು. ಆದರೆ ಇವಳದು ತುಂಬಾ ನತದೃಷ್ಟ ಜೀವನವಾಗಿದೆ. ಜೀವಕ್ಕೆ ಜೀವವಾಗಿದ್ದ ಗಂಡ ಸುಕಾಂತ ನಾಯಿಕ ಮಹಾಮಾರಿ ಕರೋನಾಗೆ ತುತ್ತಾಗಿ 2020ರಲ್ಲಿ ಸತ್ತು ಹೋದನು. ಆಗ ಅಕ್ಷರಶಃ ಮಂಗಲಾ ನಾಯಿಕ ಏಕಾಂಗಿಯಾಗಿ ಬಂದ ಕಷ್ಟ-ಕಾರ್ಪಣ್ಯಗಳನ್ನು ಧೈರ್ಯವಾಗಿ ಎದುರಿಸಿ ಮಗ ಪ್ರಜ್ವಲ್ ಮಗಳು ಪ್ರಾಜಕ್ತಾಳೊಂದಿಗೆ ತನ್ನ ಮುರುಕು ಮನೆಯಲ್ಲಿ ಗುಬ್ಬಚ್ಚಿಯಂತೆ ಜೀವನ ಸಾಗಿಸಿದ್ದಳು. ಅಕ್ಕೋಳದಿಂದ ಅಣತಿ ದೂರದಲ್ಲಿದ್ದ ಬಾಳೋಬಾ ಮಾಳ ಪರಿಸರದಲ್ಲಿ ತನ್ನ ಜಮೀನಿನಲ್ಲಿದ್ದ ಮನೆಯಲ್ಲಿ ವಾಸವಾಗಿದ್ದಳು. ಆದರೆ ಇಂದು ಕುಟುಂಬಕ್ಕೆ ಸಹಾಯ ಮಾಡುವ ನೆಪದಲ್ಲಿ ಮನೆ ಸೇರಿಕೊಂಡಿದ್ದ ಐನಾತಿ ಪಾಗಲ್ ಪ್ರೇಮಿಯೊಬ್ಬನಿಗೆ ತಾಯಿ-ಮಗ ಇಬ್ಬರು ಬಲಿಯಾಗಿ ದುರಂತ ಅಂತ್ಯ ಕಂಡಿದ್ದಾರೆ. ಇದಕ್ಕೆ ಹೇಳುವುದು ತಾಯಿ-ಮಗ ಇಬ್ಬರು ನತದೃಷ್ಟರು ಎಂದು. ಇಂದು ಬದುಕುಳಿದ ಅಪ್ರಾಪ್ತೆ ಮಗಳು ಅನಾಥಳಾಗಿದ್ದಾಳೆ. ತಾಯಿ-ಮಗನ ಬರ್ಬರ ಕೊಲೆಯ ಕಾರಣವನ್ನು ಕೆದಕುತ್ತ ಹೋದರೆ 'ಪ್ರೀತಿ ಕುರುಡು' ಎಂದು ತಿಳಿದು ಬರುತ್ತದೆ.

**ಸಂಬಂಧಿಯೊಂದಿಗೆ ಬಂದು ಮನೆ ಸೇರಿದ್ದ...**

ಮಹಾಮಾರಿ ಕರೋನಾ ಹೊಡೆತಕ್ಕೆ ಸಿಲುಕಿ ಹೃದಯಾಘಾತದಿಂದ ಮಂಗಲಾ ನಾಯಿಕಳ ಗಂಡ ಸುಕಾಂತ ಮೃತಪಟ್ಟ ಸಂದರ್ಭದಲ್ಲಿ ಸಮೀಪದ ಹುಕ್ಕೇರಿ ತಾಲ್ಲೂಕಿನ ಕೋಣನಕೇರಿ ಗ್ರಾಮದಲ್ಲಿ ಮಂಗಲಾ ನಾಯಿಕಳ ದೂರದ ಸಂಬಂಧಿ ಸತ್ತೆಪ್ಪ ಹೊನ್ನೋಳಿ ಎಂಬಾತನು ಅಕ್ಕೋಳ ಗ್ರಾಮಕ್ಕೆ ಬಂದು ವಿಧವೆ ಮಂಗಲಾಳಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದನು. ಆರಂಭದಲ್ಲಿ ಕುಟುಂಬಕ್ಕೆ ಧೈರ್ಯ ತುಂಬುವುದಕ್ಕಾಗಿ ಸತ್ತೆಪ್ಪ ಹೊನ್ನೋಳಿ ಮೇಲಿಂದ ಮೇಲೆ ಅಕ್ಕೋಳ ಗ್ರಾಮಕ್ಕೆ ಬರುತ್ತಿದ್ದನು. ಹೀಗೆ ಅದೊಮ್ಮೆ ಬರುವಾಗ ತಮ್ಮೂರಿನ ತಮ್ಮದೇ ಜಾತಿಯ ರವಿ ಲಕ್ಷ್ಮಣ ಖಾನಪ್ಪಗೋಳ ಎಂಬಾತನನ್ನು ಜತೆಗೆ ಕರೆದುಕೊಂಡು ಬಂದಿದ್ದನು. ನಿಜವಾಗಿ ಅಂದು ಸತ್ತೆಪ್ಪ ಹೊನ್ನೋಳಿ ರವಿ ಖಾನಪ್ಪಗೋಳನನ್ನು ಕರೆತರದೇ ಇದ್ದರೆ ಇಂದು ಮಂಗಲಾ ನಾಯಕ ಮಗ ಪ್ರಜ್ವಲ್ ಬದುಕಿ ಉಳಿಯುತ್ತಿದ್ದರು. ಐನಾತಿ ರವಿ ಕರೋನಾ ಸಂಕಷ್ಟದ ಸಮಯದಲ್ಲಿ ಮಂಗಲಾಳ ಕುಟುಂಬಕ್ಕೆ ನೆರವಾಗುವ ನೆಪದಿಂದ ಅವರ ಮನೆಯಲ್ಲಿ ಝಂಡಾ ಊರಿಬಿಟ್ಟನು. ಆಗಿನ್ನು ಮಂಗಲಾಳಿಗೆ ನಲವತ್ತರ ಆಸು-ಪಾಸು ವಯಸ್ಸು. ಮಕ್ಕಳಿನ್ನು ಚಿಕ್ಕವರು. ಹೀಗಾಗಿ ಮಂಗಲಾ ಕೂಡಾ ರವಿ ಖಾನಾಪೂರನಿಗೆ ಹೆಚ್ಚೆಚ್ಚು ನಂಬಿದ್ದಳು. ರವಿ ಯಾವಾಗ ಎಂಟ್ರಿ ಕೊಟ್ಟನೋ... ಅದಾಗಲೇ ಸತ್ತೆಪ್ಪ ಬರುವುದನ್ನು ನಿಲ್ಲಿಸಿಬಿಟ್ಟನು.


ಪಾಗಲ್ ಪ್ರೇಮಿ ರವಿ ಲಕ್ಷ್ಮಣ ಖಾನಪ್ಪಗೋಳ

**ಯಾರೀತ ಐನಾತಿ ರವಿ ಖಾನಾಪೂರೆ...**

'ಕಷ್ಟಕ್ಕಾದರೆ ಕರೆಯಬೇಡಿ ಊಟಕ್ಕಾದರೆ ಮರೆಯಬೇಡಿ' ಎನ್ನುವ ಜಾಯಮಾನದ ರವಿ ಲಕ್ಷ್ಮಣ ಖಾನಾಪೂರೆ ಮೂಲತಃ ಹುಕ್ಕೇರಿ ತಾಲ್ಲೂಕಿನ ಕೋಣನಕೇರಿ ಗ್ರಾಮದವನು. ಮೈ ಮುರಿದು ದುಡಿದು ತಂದೆತಾಯಿಯನ್ನು ಸಾಕದೇ ಉಂಡಾಡಿ ಗುಂಡನಂತೆ ಗುಟಕಾ... ಗುಂಡು... ತುಂಡುಗಳ ನಡುವೆ ಮಿಂದೇಳತೊಡಗಿದ್ದನು. ಡ್ರೈವಿಂಗ್ ಕೆಲಸಕ್ಕೆಂದು ಸಮೀಪದ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಗಡಹಿಂಗ್ಲಜ, ಆಜರಾ, ಚಂದಗಡ ಪರಿಸರಗಳಲ್ಲಿ ಕೆಲಸ ಮಾಡಿಕೊಂಡಿದ್ದನು. ಯಾವಾಗ ಮಂಗಲಾ ನಾಯಿಕಳ ಮನೆಗೆ ತಮ್ಮೂರಿನ ಸತ್ತೆಪ್ಪನ ಜತೆಗೆ ಬರತೊಡಗಿದನೋ... ಆವಾಗಿನಿಂದ ಅಕ್ಕೋಳದಲ್ಲಿ ಇರತೊಡಗಿದ್ದನು.

ಯಾವಾಗ ರವಿ ಖಾನಪ್ಪಗೋಳ ಮಂಗಲಾ ನಾಯಿಕಳ ಮನೆಯಲ್ಲಿ ಇರತೊಡಗಿದಾಗ ಬಾಳೋಬಾ ಮಾಳದಲ್ಲಿ ಬೇರೆ... ಬೇರೆ... ಗುಸು... ಗುಸು, ಪಿಸು... ಪಿಸು ಚರ್ಚೆ ಆರಂಭವಾಯಿತು. ಇದರಿಂದ ಮಂಗಲಾಳೊಡನೆ ಪಕ್ಕದ ಮನೆಯವರ ಮಾತುಕತೆ ಎಲ್ಲವೂ ನಿಂತು ಹೋದವು. ಜನ ಕಥೆ ಕಟ್ಟಿ ಮಂಗಲಾ-ರವಿಯ ಬಗ್ಗೆ ಮಾತಾಡಿಕೊಂಡರು. ಇದಕ್ಕೆ ಮಂಗಲಾ ತಲೆಕೆಡಿಸಿಕೊಂಡಿರಲಿಲ್ಲ. 2020ರಿಂದಲೂ ಹೆಚ್ಚಾಗಿ ಅಕ್ಕೋಳದಲ್ಲಿ ಮಂಗಲಾ ನಾಯಿಕಳ ಮನೆಯಲ್ಲಿ ರವಿಯ ವಾಸ್ತವ್ಯ ಮುಂದುವರೆಯಿತು.

**ಮಗ ಕೆಲಸಕ್ಕೆ... ಮಗಳು ಕಾಲೇಜಿಗೆ...**

ತನ್ನ ಪಾಲಿಗೆ ಬಂದಿದ್ದ ತುಂಡು ಜಮೀನಿನ ಆದಾಯ ಯಾವುದಕ್ಕೂ ಸಾಲುವಂತಿರಲಿಲ್ಲ. ಹೀಗಾಗಿ ಮಗ ಪ್ರಜ್ವಲ ನಿಪ್ಪಾಣಿಯ ತಂಬಾಕು ವಕಾರದಲ್ಲಿ ಕೆಲಸಕ್ಕೆ ಹೋಗುತ್ತಿದ್ದನು. ಅನಿವಾರ್ಯವಾಗಿ ಮಗನನ್ನು ಕೆಲಸಕ್ಕೆ ಕಳಿಸುತ್ತಿರುವೆನಲ್ಲಾ



**ಬೆಳಗಾವಿ**
✍ ಮನ್ನಾಪೂರ

ಎಂದು ಮಂಗಲಾ ಒಳಗಿಂದೊಳಗೆ ಕೊರಗುತ್ತಿದ್ದಳು. ಇತ್ತ ಮಗಳು 17 ವರ್ಷದ ಸುಂದರಿ. ಆಕೆ ನಿಪ್ಪಾಣಿಗೆ ಕಾಲೇಜು ಕಲಿಯಲು ಹೋಗುತ್ತಿದ್ದಳು. ಮಂಗಲಾ ಮನೆಗೆಲಸ ಮಾಡಿಕೊಂಡಿದ್ದಳು. ಕುಟುಂಬಕ್ಕೆ ಸಹಾಯ ಮಾಡುವ ನೆಪದಲ್ಲಿ ಮನೆಗೆ ಸೇರಿದ್ದ ಐನಾತಿ ಇತ್ತೀಚಿಗೆ ಮಂಗಲಾ ಮತ್ತವಳ ಮಗ ಪ್ರಜ್ವಲ್ ಮೇಲೆ ಇನ್ನಿಲ್ಲದ ದಾದಾಗಿರಿ ಮಾಡುತ್ತ ಅಧಿಕಾರ ಚಲಾಯಿಸತೊಡಗಿದ್ದನು. ಇದಕ್ಕಾಗಿ ಮೇಲಿಂದ ಮೇಲೆ ಮಂಗಲಾ ಮತ್ತವಳ ಮಗ ಪ್ರಜ್ವಲ್ ಜಗಳ ಕಾಯತೊಡಗಿದ್ದರು. ನೀನು ನಮ್ಮ ಮನೆಗೆ ಬರಬೇಡ ಎನ್ನುತ್ತಿದ್ದರು.

**ಅಪ್ರಾಪ್ತೆ ತರುಣಿಯನ್ನು ಪ್ರೀತಿಸುತ್ತಿದ್ದ...**


ಇತ್ತೀಚಿಗೆ ಮಂಗಲಾ ನಾಯಿಕಳ ಮಗಳು ಬೆಳೆದು ಎದೆಯುದ್ದಕ್ಕೆ ನಿಂತಿದ್ದಳು. ಅವಳ ರೂಪ, ಆಕರ್ಷಕ ಮೈಮಾಟಕ್ಕೆ ಮನ ಸೋತಿದ್ದ ರವಿ ಖಾನಪ್ಪಗೋಳ ಎಂಬ ಐನಾತಿ ಪ್ರೀತಿ-ಪ್ರೇಮದ ಬೀಜವನ್ನು ಅವಳ ತಲೆಗೆ ತುಂಬಿದ್ದನು. ಮೊದ-ಮೊದಲು ರವಿ ಖಾನಪ್ಪಗೋಳ ತನ್ನ ಮಗಳ ಜತೆ ಸ್ವಚ್ಛಂದವಾಗಿ ತಿರುಗುವುದು, ಹರಟೆ ಹೊಡೆಯುವುದು, ಭುಜಕ್ಕೆ ಭುಜ ತಾಗಿಸಿ ನಡೆಯುವುದನ್ನು ಅಷ್ಟಾಗಿ ಗಮನಿಸಿರಲಿಲ್ಲ. ಆದರೆ ಇತ್ತೀಚಿಗೆ ರವಿಯ ವರಸೆ ಮತ್ತು ತನ್ನ ಮಗಳ ಚಲನ-ವಲನ ಬೇರೆಯಾಗಿತ್ತು. ರವಿ ಎಲ್ಲಿಯಾದರೂ ಊರಿಗೆ ಹೋದಾಗ ಆತನೊಂದಿಗೆ ಗಂಟೆಗಟ್ಟಲೇ ಹರಡುತ್ತಿದ್ದಳು. ಅದೊಂದು ದಿನ ರವಿ ನೇರವಾಗಿ ಅಪ್ರಾಪ್ತೆಗೆ ಲವ್ ಪ್ರಪೋಸ್ ಮಾಡಿದಾಗ ಆಕೆಯೂ ಕೂಡಾ ರವಿಗೆ ತಕ್ಷಣ ಸ್ಪಂದಿಸಿ 'ಐ ಲವ್ ಯೂ' ಎಂದಳು. ಅದಾಗಲೇ ಐನಾತಿ ರವಿಗೆ 32 ವರ್ಷ. ಅಪ್ರಾಪ್ತೆಗೆ 17 ವರ್ಷ. ಇಬ್ಬರ ನಡುವೆ ಸುಮಾರು 16 ವರ್ಷ ಅಂತರವಿತ್ತು. ಅಪ್ರಾಪ್ತೆಗೆ ಇದರ ಅರಿವಿಲ್ಲದೇ ಪ್ರೇಮದ ಅಮಲಿನಲ್ಲಿ ತೇಲಾಡುತ್ತಿದ್ದಳು. ರವಿ ಖಾನಪ್ಪಗೋಳ ಮತ್ತು ಅಪ್ರಾಪ್ತೆ ಪರಸ್ಪರ ಮದುವೆ ಮಾಡಿಕೊಳ್ಳಲು ತೀರ್ಮಾನಿಸಿದ್ದರು.

**ತಾಯಿ-ಮಗ ವಿರೋಧಿಸಿದ್ದರು...**

ಐನಾತಿ ಪಾಗಲ್ ಪ್ರೇಮಿ ರವಿ ಲಕ್ಷ್ಮಣ ನಾಯಿಕ ನಿಜಕ್ಕೂ ಅಪ್ರಾಪ್ತೆ ಪ್ರೀತಿಯ ಅಮಲಿಗೆ ಹುಚ್ಚನಂತಾಗಿದ್ದನು. ಇದನ್ನು ತಾಯಿ ಮಂಗಲಾ ಮತ್ತು ಮಗ ಪ್ರಜ್ವಲ್ ತೀರಾ ನೇರವಾಗಿ ವಿರೋಧಿಸಿ ನೀನು ನಮ್ಮ ಮನೆಯಲ್ಲಿ ಇರುವುದು ಬೇಡಾ... ಬರುವುದು ಬೇಡಾ ಎಂದು ಕಡ್ಡಿ ಮುರಿದಂತೆ ಹೇಳಿಬಿಟ್ಟಿದ್ದರು.

**ಮದುವೆ ಮಾಡಿಕೊಡಲು ದುಂಬಾಲು...**

ಮಂಗಲಾ ನಾಯಿಕಳ ಮಗಳು ಅಪ್ರಾಪ್ತೆಯ ಪ್ರೀತಿಯಲ್ಲಿ ಅಕ್ಷರಶಃ ಹುಚ್ಚನಂತಾಗಿದ್ದ ರವಿ ಖಾನಪ್ಪಗೋಳ 'ನಿಮ್ಮ ಮಗಳನ್ನು ಮದುವೆ ಮಾಡಿಕೊಡಿರಿ... ನಮ್ಮ ನಡುವೆ ವಯಸ್ಸಿನ ಅಂತರವಿದ್ದರೆ ಏನಾಗುತ್ತದೆ? ಎಂದು ದುಂಬಾಲು ಬಿದ್ದಾಗ ಮಂಗಲಾ ನಾಯಿಕ ಮತ್ತು ಪ್ರಜ್ವಲ ಅತ್ಯಂತ ಸ್ಪಷ್ಟವಾಗಿ ಹೇಳಿಬಿಟ್ಟರು ನಮ್ಮ ಮಗಳು ಕಲಿತಾಕೆ... ಇನ್ನೂ ಆಕೆ ಕಲಿಯುವಳಿದ್ದಾಳೆ. ನಿನಗೂ ಅವಳಿಗೂ ವಯಸ್ಸಿನ ಅಂತರ ಬಹಳಷ್ಟಿದೆ. ನೀನು ಬೇರೆ ಕಡೆಗೆ ಮದುವೆ ಮಾಡಿಕೋ ಇದೇ ಕೊನೆ ನೀನು ಇನ್ನು ಮೇಲೆ ನಮ್ಮ ಮನೆ ಕಡೆ ಸುಳಿಯಕೂಡದು' ಎಂದು ತಾಕೀತು ಮಾಡಿದರು. ಇತ್ತ ತಮ್ಮ ಅಪ್ರಾಪ್ತೆ ಮಗಳಿಗೂ 'ರವಿ ಖಾನಪ್ಪಗೋಳನ ಉಸಾಬರಿ ಮಾಡಬೇಡ. ಇನ್ನೂ ಚಿಕ್ಕವಳಿದ್ದಿಯಾ... ಮೊಬೈಲ್ ಪ್ರೀತಿ... ರೀತಿ ಎಲ್ಲಿಯದು? ಅದನ್ನೆಲ್ಲ ಮರೆತುಬಿಡು' ಎಂದು ಖಡಕ್ ಆಗಿ ವಾರ್ನಿಂಗ್ ಮಾಡಿ ಇತ್ತೀಚಿಗೆ ಆಕೆಯನ್ನು ಹದ್ದುಬಸ್ತಿನಲ್ಲಿಡತೊಡಗಿದ್ದರು. ಇದರಿಂದ ರವಿ ಖಾನಪ್ಪಗೋಳನು ಮಂಗಲಾ ಮತ್ತವಳ ಮಗ ಪ್ರಜ್ವಲ್ ಮೇಲೆ ತೀರಾ ಆಕ್ರೋಶಗೊಂಡನು. ಇತ್ತೀಚಿಗೆ ಅಪ್ರಾಪ್ತೆಯು ಕೂಡಾ 'ರವಿ ನಿನ್ನ ಬಿಟ್ಟು ಇರಲಾರೆ ಹೇಗಾದರೂ... ಏನಾದರೂ ಮಾಡು...' ಎಂದಾಗ ಐನಾತಿ ಪಾಗಲ್ ಪ್ರೇಮಿ ಅದೊಂದು ನಿರ್ಧಾರಕ್ಕೆ ಬಂದನು.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ


ಡಿವೈಎಸ್ಪಿ ಪ್ರಶಾಂತ ಮುನ್ನೋಳಿ


ಸಿಪಿಐ ಬಿ.ಎಸ್. ತಳವಾರ

**ಕೊಲೆಗೆ ಸಂಚು ರೂಪಿಸಿದನು...**

ಅಂದು ದಿನಾಂಕ 04-12-2024 ಬುಧವಾರ. ತನ್ನ ಪರಮ ಮಿತ್ರ ತಮ್ಮೂರಿನವನೇ ಆಗಿದ್ದ ಲೋಕೇಶ ಶ್ಯಾಮರಾವ ನಾಯಿಕ (24 ವ) ಈತನಿಗೆ ಅಪ್ರಾಪ್ತೆಯನ್ನು ಪ್ರೀತಿಸುವ ವಿಷಯ ಪೂರ್ತಿಯಾಗಿ ಗೊತ್ತಿತ್ತು. ಕಾರಣ ರವಿ ಖಾನಪ್ಪಗೋಳನೊಂದಿಗೆ ಈತ ಹಲವಾರು ಬಾರಿ ಮಂಗಲಾ ನಾಯಿಕಳ ಮನೆಗೆ ಬಂದು ಹೋಗಿದ್ದನು. ಅದರಂತೆ ಅಂದು ಲೋಕೇಶ ಮತ್ತು ಮಹಾರಾಷ್ಟ್ರದ ಕಾಗಲ್ ತಾಲ್ಲೂಕಿನ ಬೇಡರವಾಡಿಯ ಸಂತೋಷ ಲಗಮಾ ನಾಯಿಕ (21 ವ) ಎಂಬ ಸ್ನೇಹಿತನನ್ನು ಕರೆಸಿಕೊಂಡಿದ್ದನು. ರವಿ ಖಾನಪ್ಪಗೋಳ, ಲೋಕೇಶ ನಾಯಿಕ ಮತ್ತು ಸಂತೋಷ ನಾಯಿಕ ಮೂವರು ಸೇರಿಕೊಂಡು ಅಯೋಧ್ಯಾ ನಗರ ಗಡಹಿಂಗ್ಲಜ ನಿವಾಸಿಯಾಗಿದ್ದ ಮಹಾದೇವ ಪುಂಡಲೀಕ ಗವಂಡಿ (44 ವ) ಈತನ ಮನೆಗೆ ಹೋಗಿದ್ದಾರೆ. ಈತ ರವಿ ಖಾನಪ್ಪಗೋಳನ ಸಂಬಂಧಿಕನಾಗಿದ್ದನು.


ರವಿಯ ಸಹಚರರಾದ ಲೋಕೇಶ ಶ್ಯಾಮರಾವ ನಾಯಿಕ, ಸಂತೋಷ ಲಗಮಾ ನಾಯಿಕ, ಮಹಾದೇವ ಪುಂಡಲೀಕ ಗವಂಡಿ


ಬರ್ಬರವಾಗಿ ಕೊಲೆಯಾಗಿರುವ ಮಂಗಲಾ ಹಾಗೂ ಪ್ರಜ್ವಲ್ ಶವ ಪರಿಶೀಲಿಸುವ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ

ಮಹಾದೇವ ಪುಂಡಲೀಕ ಗವಂಡಿ ಮನೆಯಲ್ಲಿ ಎಲ್ಲರೂ ಸಾರಾಯಿ ಕುಡಿದು ಮಾತಿಗಿಳಿದಿದ್ದಾರೆ. ಆಗ ಪಾಗಲ್ ಪ್ರೇಮಿ ರವಿ ಖಾನಪ್ಪಗೋಳ ಮುಂದಾಗಿ ತನ್ನ ಮತ್ತು ಅಪ್ರಾಪ್ತೆ ತರುಣಿ ಪ್ರೇಮದ ವಿಚಾರ... ಇದಕ್ಕೆ ಮಂಗಲಾ ಮತ್ತು ಮಗ ಪ್ರಜ್ವಲ್‌ನ ವಿರೋಧ ತಿಳಿಸಿದ್ದಾನೆ. ಹೇಗಾದರೂ ಸರಿ ಮಂಗಲಾ ಮತ್ತು ಪ್ರಜ್ವಲ್‌ನ ಇಮ್ಮಬ್ಬರ ಮದುವೆಗೆ ಅಡ್ಡ ಬರುತ್ತಿದ್ದಾರೆ. ಅವರು ಬದುಕಿರಕೂಡದು' ಎಂದು ತನ್ನ ಪ್ಲ್ಯಾನ್ ಹೇಳಿದ್ದಾನೆ. ಕುಡಿದ ಮತ್ತಿನಲ್ಲಿ ನಾಲ್ವರು ಮಂಗಲಾ ಮತ್ತು ಪ್ರಜ್ವಲ್‌ರನ್ನು ಕೊಲೆ ಮಾಡೋಣ ಎಂದು ತೀರ್ಮಾನಿಸಿ ತಲವಾರ್, ಮೋಟಾರ್ ಬೈಕ್‌ನ ಕಣಪಸರ್, ಹರಿತವಾದ ಚೂರಿ ಹಿಡಿದು ಸಂಜೆ ಹೊತ್ತಿಗೆ ಮೋಟಾರ್ ಸೈಕಲ್ ಮೇಲೆ ಆಕ್ಕೋಳದತ್ತ ಹೊರಟಿದ್ದಾರೆ.


ಪಿಎಸ್‌ಐ (ಕಾ.ಸು) ಶಿವರಾಜ ನಾಯಿಕವಾಡಿ


ಹೆಚ್ಚುವರಿ ಪಿಎಸ್‌ಐ ಬಿ.ಕೆ. ಪಾಟೀಲ

**ಬರ್ಬರವಾಗಿ ತಾಯಿ-ಮಗನ ಜೋಡಿ ಕೊಲೆ...**

ದಿನಾಂಕ 04-12-2024ರಂದು ರಾತ್ರಿ 9 ಗಂಟೆಯ ಸುಮಾರಿಗೆ ನಿಪ್ಪಾಣಿ ಮಾರ್ಗವಾಗಿ ಎರಡು ಮೋಟಾರ್ ಸೈಕಲ್‌ಗಳ ಮೇಲಿನಿಂದ ಅಕ್ಕೋಳಕ್ಕೆ ಬಂದಿದ್ದಾರೆ. ಮೊದಲೇ ಇತ್ತೀಚಿಗೆ ಹಗಲು ಸಣ್ಣವು... ಬಲು ಬೇಗ ರಾತ್ರಿಯಾಗುವುದು. ಬಾಳೋಬಾ ಮಾಳದಲ್ಲಿ ಎಲ್ಲರೂ ಚಳಿಯಿರುವ ಕಾರಣ ಬೆಚ್ಚಗೆ ಕದ ಹಾಕಿಕೊಂಡು ಮಲಗಿದ್ದರು. ಇತ್ತ ಮಂಗಲಾ ನಾಯಿಕ ಮಗ ಪ್ರಜ್ವಲ ಮಗಳು ಊಟ ಮಾಡಿ ಇನ್ನೇನು ಮಲಗುವ ತಯಾರಿಯಲ್ಲಿದ್ದರು. ಅಷ್ಟರಲ್ಲಿ ದಢ...ದಢನೇ ಕದ ಬಡಿದಾಗ ಮಂಗಲಾ ಬಂದವಳೇ ಕದ ತೆರೆದಿದ್ದಾಳೆ. ರವಿ ಖಾನಪ್ಪಗೋಳ ಮತ್ತು ಇನ್ನುಳಿದ ಮೂವರು ಗೂಳಿಗಳಂತೆ ಒಳ ನುಗ್ಗಿದ್ದಾರೆ. 'ಮತ್ತೇ ಯಾಕೆ ಬಂದಿರುವೆ... ನಿನಗೆ ಬರಬೇಡ ಎಂದರೂ ಬಂದಿದ್ದಿಯಾ?' ಎಂದು ಮಂಗಲಾ ಬಾಯಿ ಮಾಡಿದ್ದಾಳೆ. ಮೊದಲೇ ಆಕ್ರೋಶಗೊಂಡಿದ್ದ ರವಿ ನಾಯಕ ಕೈಯಲ್ಲಿದ್ದ ಮೋಟಾರ್ ಬೈಕ್ ಸಕಾಪಸರ್‌ದಿಂದ ಬಲವಾಗಿ ಮುಖಕ್ಕೆ ಹೊಡೆದಿದ್ದಾನೆ. ಹೊಡೆತ ಹಣೆಗೆ ಬಿದ್ದು ಸೀಳಿ ಹೋಗಿದೆ. ಒಂದೇ ಹೊಡೆತಕ್ಕೆ 'ಅಯ್ಯೋಯಪ್ಪಾ' ಎಂದು ಚೀರಿ ನೆಲಕ್ಕೆ ಬಿದ್ದಿದ್ದಾಳೆ. ಅವಳಿಗೆ ತೀವ್ರ ರಕ್ತಸ್ರಾವವಾಗಿ ಮಡುಗಟ್ಟಿದೆ. ವಿಲವಿಲನೇ ಒದ್ದಾಡುತ್ತಿರುವಾಗ ಮಗ ಪ್ರಜ್ವಲ್ ತಾಯಿಯನ್ನು ಬಿಡಿಸಲು ಬಂದಾಗ ಆತನ ಮೇಲೂ ಉಳಿದವರು ತಲವಾರ್ ಮತ್ತು ಚಾಕುವಿನಿಂದ ಹಲ್ಲೆ ಮಾಡುತ್ತಾರೆ. ಪ್ರಾಣ ಉಳಿಸಿಕೊಳ್ಳಲು ಮನೆ ತುಂಬಾ ಓಡಾಡಿದ ತಾಯಿ-ಮಗ ಹಂತಕರ ಹೊಡೆತಕ್ಕೆ ಸಿಕ್ಕು ಅನಾಮತ್ತಾಗಿ ಅತ್ಯಂತ ಬರ್ಬರವಾಗಿ ಕೊಲೆಯಾಗುತ್ತಾರೆ. ಅಪ್ರಾಪ್ತೆ ಮಗಳು ಅಣ್ಣ ಮತ್ತು ತಾಯಿಯ ಕೊಲೆಯನ್ನು ತೆರೆದ ಕಣ್ಣುಗಳಿಂದ ನೋಡುತ್ತಾಳೆ. ತಮ್ಮ ಕೆಲಸ ಮುಗಿಸಿದ ಪಾಗಲ್ ಪ್ರೇಮಿ ಜತೆಗೆ ಅಪ್ರಾಪ್ತೆಯನ್ನು ಕರೆದೊಯ್ದು ಕತ್ತಲಲ್ಲಿ ಪರಾರಿಯಾಗಿದ್ದರು. ಇದು ರಾತ್ರಿ 9.30ಗೆ ಮುಗಿದಿತ್ತು.

**ಪೊಲೀಸರಿಗೆ ದೂರು...**

ಬಾಳೋಬಾ ಮಾಳದಲ್ಲಿ ನಡೆದ ತಾಯಿ-ಮಗನ ಜೋಡಿ ಕೊಲೆಗಿಂತ ಮುನ್ನ ಮಂಗಲಾ ನಾಯಿಕಳ ಮನೆಯಲ್ಲಿ ಜೋರಾಗಿ ಕಿರುಚಾಟದ ಶಬ್ದ ಕೇಳಿಬಂದಿತ್ತು. ರಾತ್ರಿ 9.40 ಗಂಟೆಗೆ ಪಕ್ಕದಲ್ಲಿದ್ದ ಸುನೀಲ ಅಶೋಕ ನಾಯಿಕ ಎನ್ನುವವರು ಬಂದು ನೋಡಿದಾಗ ಅಲ್ಲಿನ ದೃಶ್ಯ ಕರುಳು ಕತ್ತರಿಸುವಂತಿತ್ತು. ಚಿಕ್ಕಮ್ಮ ಮಂಗಲಾ ಮತ್ತು ಪ್ರಜ್ವಲ್ ಭೀಕರವಾಗಿ ಕೊಲೆಯಾಗಿದ್ದರು. ರಕ್ತ ಮನೆ ತುಂಬಾ ಸಿಡಿದಿತ್ತು. ಅಪ್ರಾಪ್ತೆಯಂತೂ ಕಾಣುತ್ತಿಲ್ಲ. ತಕ್ಷಣ ಅಶೋಕ ನಾಯಿಕ ನಿಪ್ಪಾಣಿ ಗ್ರಾಮೀಣ ಪೊಲೀಸ್ ಠಾಣೆಗೆ ಧಾವಿಸಿ ಬಂದು ಜೋಡಿ ಕೊಲೆಯ ವಿವರವಾದ ಮಾಹಿತಿ ನೀಡಿ ದೂರು ಸಲ್ಲಿಸಿದರು. ಅಂದು ಕರ್ತವ್ಯದ ಮೇಲಿದ್ದ ಪಿಎಸ್‌ಐ ಶಿವರಾಜ ನಾಯಿಕವಾಡಿ ವಿಷಯದ ಗಂಭೀರತೆಯನ್ನು ಅರಿತುಕೊಂಡು ಸಿಪಿಐ ಬಿ.ಎಸ್. ತಳವಾರ, ಪ್ರಭಾರಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡು ಹೆಚ್ಚುವರಿ ಪಿಎಸ್‌ಐ ಬಿ.ಕೆ. ಪಾಟೀಲ ಮತ್ತು ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳಕ್ಕೆ ತೆರಳಿದರು. ಅಷ್ಟರಲ್ಲಿ ಸಿಪಿಐ ಬಿ.ಎಸ್. ತಳವಾರ ಅವರು ತಮ್ಮ ಸಿಬ್ಬಂದಿಗಳೊಡನೆ ಧಾವಿಸಿ ಬರ್ಬರವಾಗಿ ಕೊಲೆಯಾಗಿದ್ದ ತಾಯಿ-ಮಗನ

☞ 10

# ಬರ್ಬರವಾಗಿ ಕೊಚ್ಚಿ ಕೊಚ್ಚಿ ಕೊಲೆ ಮಾಡಿದ ಹಂತಕರು!

9 ☜

ಶವ ಸೂಕ್ಷ್ಮವಾಗಿ ಪರಿಶೀಲಿಸಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಸಮಾಲೋಚನೆ ನಡೆಸಿದರು. ಅವರಿಂದ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡರು. ಪಂಚನಾಮೆಗೆ ಸಿದ್ಧತೆ ಮಾಡಿಕೊಳ್ಳುವಾಗಲೇ ಘಟನಾ ಸ್ಥಳಕ್ಕೆ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಮತ್ತು ಎಸ್ಪಿ ಡಾ. ಭೀಮಾಶಂಕರ ಧಾವಿಸಿ ತಾಯಿ-ಮಗನ ಕೊಲೆಯ ದೃಶ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ತನಿಖಾಧಿಕಾರಿ ಬಿ.ಎಸ್. ತಳವಾರ, ಸಹಾಯಕರಾದ ಪಿಎಸ್ಐ ಶಿವರಾಜ ನಾಯಿಕವಾಡಿ, ಪಿಎಸ್ಐ ಬಿ.ಕೆ. ಪಾಟೀಲ ಅವರಿಗೆ ಸೂಕ್ತ ನಿರ್ದೇಶನ ನೀಡಿದರು. ಪಂಚನಾಮೆ ಕಾರ್ಯ ಮುಗಿಸಿ ಶವಗಳನ್ನು ನಿಪ್ಪಾಣಿಯ ಸರಕಾರಿ ಆಸ್ಪತ್ರೆಯಲ್ಲಿ ಶಲ್ಯ ಚಿಕಿತ್ಸೆ ಮಾಡಿಸಿ ವಾರಸುದಾರರಿಗೆ ಒಪ್ಪಿಸಿದರು.

**ಹಂತಕರ ಪತ್ತೆಗೆ ವಿಶೇಷ ತನಿಖಾ ತಂಡ...**

ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಅವರ ಉಸ್ತುವಾರಿಯಲ್ಲಿ ಸಿಪಿಐ ಬಿ.ಎಸ್. ತಳವಾರ ನೇತೃತ್ವದಲ್ಲಿ ಪಿಎಸ್ಐ (ಕಾ.ಸು) ಶಿವರಾಜ ನಾಯಿಕವಾಡಿ, ಹೆಚ್ಚುವರಿ ಪಿಎಸ್ಐ ಬಿ.ಕೆ. ಪಾಟೀಲ, ಎಎಸ್ಐ ಎಂ.ಬಿ. ಭಜಂತ್ರಿ, ಸಿಬ್ಬಂದಿಗಳಾದ ಎಸ್.ಎಸ್. ಚಿಕ್ಕೋಡಿ, ರಾಜು ದಿವಟೆ, ಎಸ್. ಎಸ್. ಕಾಡಗೌಡರ, ಪಿ.ಎಂ. ಗಸ್ತಿ, ಪಿ.ಎ. ತಳವಾರ, ಶೇಖರ ಅಸೋದೆ, ಗೋಪಾಲ ಬಡಿಗೇರ, ಆರ್.ವೈ. ಮೆಲ್ಗಡೆ, ಎಂ.ಎಂ. ನದಾಫ, ಪಿ.ಬಿ. ಸಿದ್ದಾಟಗಿ ಮಠ, ಎಸ್.ಎಸ್. ಸಾರವಾಡ, ಸಿದ್ದು ಖೋತ, ಯಾಶೀನ್ ಕಲಾವಂತ, ಅಮರ ಚಂದನಶಿವ, ಪಿ.ಎಲ್. ಕುದರಿ ಇವರ ವಿಶೇಷ ತನಿಖಾ ತಂಡವನ್ನು ರಚಿಸಲಾಯಿತು.

ಘಟನೆ ನಡೆದ ದಿವಸ ಅಪ್ರಾಪ್ತೆಯನ್ನು ಕರೆದುಕೊಂಡು ಹೋಗಿದ್ದು ಆಕೆಯನ್ನು ಹಂತಕರ ಕೈಯಿಂದ ಸೇಫಾಗಿ ರಕ್ಷಣೆ ಮಾಡಬೇಕೆಂದು ಎಸ್ಪಿ ಡಾ. ಭೀಮಾಶಂಕರ ತನಿಖಾ ತಂಡಕ್ಕೆ ನಿರ್ದೇಶನ ನೀಡಿದರು. ಹಂತಕರ ಪತ್ತೆಗೆ ತನಿಖಾ ತಂಡವನ್ನು ವಿಭಜಿಸಿ ಮೂರ್‍ನಾಲ್ಕು ಗುಂಪುಗಳನ್ನಾಗಿ ಮಾಡಿ ಕಾರ್ಯಾಚರಣೆಗೆ ತೊಡಗಿಸಲಾಯಿತು.

**ಹಂತಕರ ಬಂಧನ...**

ಸಿಪಿಐ ಬಿ.ಎಸ್. ತಳವಾರ ತುಂಬಾ ಚತುರ ಮತ್ತು ದಾಢಸಿ ಅಧಿಕಾರಿ ಹಿಡಿದ ಕಾರ್ಯಾಚರಣೆಯನ್ನು ಮಾಡಿ ಮುಗಿಸುವತನಕ ಅವರಿಗೆ ಸಮಾಧಾನವಿರುವುದಿಲ್ಲ. ಅಂತೆಯೇ ವಿಶೇಷ ತನಿಖಾ ತಂಡದ ಸಿಬ್ಬಂದಿಗಳು ಖಚಿತ ಮಾಹಿತಿಯ ಮೇರೆಗೆ ಪಿಎಸ್ಐಗಳಾದ ಶಿವರಾಜ ನಾಯಿಕವಾಡಿ, ಬಿ.ಕೆ. ಪಾಟೀಲ ಮತ್ತು ಕೆಲವು ಜನ ಸಿಬ್ಬಂದಿಗಳು ಹುಕ್ಕೇರಿ ತಾಲ್ಲೂಕಿನ ಕೋಣನಕೇರಿ ಗ್ರಾಮಕ್ಕೆ ತೆರಳಿ ಮೊದಲು ಲೋಕೇಶ ಶಾಮರಾವ ನಾಯಿಕನನ್ನು ವಶಕ್ಕೆ ತೆಗೆದುಕೊಂಡು ಆತನ ಹೇಳಿಕೆಯಂತೆ ಹಂತಕ ಪಾಗಲ್ ಪ್ರೇಮಿ ರವಿ ಖಾನಪ್ಪಗೋಳ ಮನೆಗೆ ದಾಳಿ ಮಾಡಲಾಗಿ ಅಪ್ರಾಪ್ತೆ ತರುಣಿ ಸಮೇತ ಪೊಲೀಸರಿಗೆ ಸಿಕ್ಕು ಬಿದ್ದನು.

ರವಿ ಖಾನಪ್ಪಗೋಳ, ಲೋಕೇಶ ನಾಯಿಕ ಅವರನ್ನು ಕರೆತಂದು ಸಿಪಿಐ ಬಿ.ಎಸ್. ತಳವಾರ ಮುಂದೆ ಹಾಜರುಪಡಿಸಲಾಗಿ ವಿಚಾರಣೆ ಕಾಲಕ್ಕೆ ತಮ್ಮ ಕೃತ್ಯವನ್ನು ಹಂತಕರಿಬ್ಬರು ಒಪ್ಪಿಕೊಂಡಿದ್ದು, ತಾನು ಪ್ರೀತಿಸುತ್ತಿದ್ದ ಅಪ್ರಾಪ್ತೆಯನ್ನು ತನ್ನೊಂದಿಗೆ ಮದುವೆ ಮಾಡಿಕೊಡದಾದ ಆಕ್ರೋಶದಿಂದ ಮಂಗಲಾಳ ಕೊಲೆ ಮಾಡಿದ್ದು, ಈ ಸಂದರ್ಭದಲ್ಲಿ ತಾಯಿಯನ್ನು ಬಿಡಿಸಲು ಬಂದ ಮಗ ಪ್ರಜ್ವಲ್‌ನನ್ನು ಕೊಲೆ ಮಾಡಿದ್ದಾಗಿ ಹೇಳಿದನು. ಅವರ ಹೇಳಿಕೆಯಂತೆ ಜೋಡಿ ಕೊಲೆ ಮಾಡಲು ಭಾಗಿಯಾದ ಇನ್ನಿಬ್ಬರು ಸಂತೋಷ ಲಗಮಾ ನಾಯಿಕ, ಮಹಾದೇವ ಪುಂಡಲೀಕ ಗವಂಡಿ ಎಂಬ ಹಂತಕರ ಬಗ್ಗೆ ತಿಳಿಸಿದಾಗ ವಿಶೇಷ ತನಿಖಾ ತಂಡ ತಡ ಮಾಡದೇ ಖಚಿತ ಮಾಹಿತಿ ಆಧರಿಸಿ ಅವರನ್ನು ತಮ್ಮ ವಶಕ್ಕೆ ಪಡೆದುಕೊಂಡು ಸಿಪಿಐ ಬಿ.ಎಸ್. ತಳವಾರ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಹಂತಕರು ತಮ್ಮ ಕೃತ್ಯ ಒಪ್ಪಿಕೊಂಡಿದ್ದಾರೆ. ತಾವು ಸುಟ್ಟಿದ್ದ ರಕ್ತ-ಸಿಕ್ತ ಬಟ್ಟೆ, ಮಾರಕಾಸ್ತ್ರಗಳು, ಮೋಟಾರ್ ಸೈಕಲ್ ಪಂಚನಾಮೆ ಕಾಲಕ್ಕೆ ಹಂತಕರು ಹಾಜರುಪಡಿಸಿದ್ದಾರೆ. ನಾಲ್ವರು ಹಂತಕರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಇವರನ್ನು ಜೈಲಿಗೆ ಕಳಿಸಲು ಆದೇಶ ಮಾಡಿದ್ದಾರೆ. ಇದೀಗ ಜೈಲು ಸೇರಿ ಕಂಬಿ ಎಣಿಸುತ್ತ ತಂಗಳು ಮುರಿಯುತ್ತಿದ್ದಾರೆ.



ಪಾಗಲ್ ಪ್ರೇಮಿ ರವಿ ಲಕ್ಷ್ಮಣ ಖಾನಪ್ಪಗೋಳ

**ಶ್ಲಾಘನೆ...**

ನಿಪ್ಪಾಣಿ ತಾಲ್ಲೂಕಿನಲ್ಲಿ ಮಂಗಲಾ ನಾಯಿಕ ಮತ್ತು ಪ್ರಜ್ವಲ್ ನಾಯಿಕ ಎಂಬ ತಾಯಿ-ಮಗನ ಜೋಡಿ ಕೊಲೆ ತೀವ್ರ ಭಯದ ಮತ್ತು ಆತಂಕದ ವಾತಾವರಣ ಸೃಷ್ಟಿಸಿತ್ತು. ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿ ಕೇವಲ 24 ಗಂಟೆಗಳಲ್ಲಿ ಕೊಲೆ ರಹಸ್ಯ ಭೇದಿಸಿ ನಾಲ್ವರು ಹಂತಕರ ಹೆಡೆಮುರಿ ಕಟ್ಟಿ ಜೈಲಿಗಟ್ಟುವಲ್ಲಿ ಯಶಸ್ವಿ ಕಾರ್ಯಾಚರಣೆ ಕೈಗೊಂಡ ನಿಪ್ಪಾಣಿ ಸಿಪಿಐ ಬಿ.ಎಸ್. ತಳವಾರ, ನಿಪ್ಪಾಣಿ ಗ್ರಾಮೀಣ ಪಿಎಸ್ಐಗಳಾದ ಶಿವರಾಜ ನಾಯಿಕವಾಡಿ ಮತ್ತು ಬಿ.ಕೆ. ಪಾಟೀಲ ಹಾಗೂ ವಿಶೇಷ ತನಿಖಾ ತಂಡದ ಸಿಬ್ಬಂದಿಗಳ ಪರಿಶ್ರಮವನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಅಥಣಿಯ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಶ್ಲಾಘಿಸಿದ್ದಾರೆ.



ಸಿಬ್ಬಂದಿಗಳಾದ ಎಸ್.ಎಸ್. ಕಾಡಗೌಡರ, ಶೇಖರ ಅಸೋದೆ, ಗೋಪಾಲ ಬಡಿಗೇರ, ರಾಜು ದಿವಟೆ, ಪಾರೀಶ ಗಸ್ತಿ, ಆರ್.ವೈ. ಮೇಲಗಡೆ, ಎಂ.ಎಂ. ನದಾಫ, ಪ್ರಭು ಸಿದ್ದಾಟಗಿ ಮಠ, ಅಮರ ಚಂದನಶಿವ, ಪ್ರಕಾಶ ಕುದರಿ

# ಪತ್ನಿ ವರದಕ್ಷಿಣೆ ತಂದಿಲ್ಲ ಎಂದು ಮನೆಗೆ ಬೀಗ ಹಾಕಿ ಪರಾರಿಯಾದ ಪತಿ ಹಾಗೂ ಕುಟುಂಬದವರು

## ಕಳೆದೆರಡು ದಿನಗಳಿಂದ ಮನೆ ಮುಂದೆ ಧರಣಿ ಕುಳಿತ ಪತ್ನಿ ಹಾಗೂ ಅಪ್ಪ ಅಮ್ಮ

ವರದಕ್ಷಣೆ ಹಣ ತಾರದಿದ್ದಕ್ಕೆ ಮನೆಗೆ ಬೀಗ ಹಾಕಿಕೊಂಡು ಪತಿ ಹಾಗೂ ಸಂಬಂಧಿಕರು ಪತ್ನಿಯನ್ನು ಮನೆ ಮುಂದೆ ಬಿಟ್ಟು ಪರಾರಿ ಯಾಗಿದ್ದು ಎರಡು ದಿನಗಳಿಂದ ಬೀಗ ಹಾಕಿದ ಮನೆಯ ಮುಂದೆ ಪತ್ನಿ ಹಾಗೂ ಅವರ ಅಪ್ಪ ಅಮ್ಮ ಧರಣಿ ಸತ್ಯಾಗ್ರಹ ಮಾಡುತ್ತಿರುವ ಪ್ರಕರಣ ಗಂಗಾವತಿಯ ಜುಲ್ಲೈ ನಗರದ ಈರಣ್ಣ ಗುಡಿ ಪಕ್ಕದಲ್ಲಿ ಜರುಗಿದೆ.

ಪತಿಯ ಧೋರಣೆ ಖಂಡಿಸಿ ಬೀಗ ಹಾಕಿದ ಮನೆಯ ಮುಂದೆ ಧರಣಿ ಮಾಡುತ್ತಿರುವ ಆಂಧ್ರಪ್ರದೇಶದ ರಾಯದುರ್ಗಾ ಮೂಲದ ಶಾಂತಿ ಹಾಗೂ ಜುಲ್ಲೈನಗರದ ಮಂಜು ಬಿದರೂರು ಎಂಬುವರ ಮದುವೆ ಕಳೆದ ವರ್ಷ ನವೆಂಬರ್19 ರಂದು ಜರುಗಿತ್ತು. ಈ ಮಧ್ಯೆ ಮದುವೆ ಸಂದರ್ಭದಲ್ಲಿ ಜುಲ್ಲೈನಗರದ ಈರಣ್ಣ ಗುಡಿ ಪಕ್ಕದ ಮನೆ ಮಂಜು ಬಿದರೂರು ಅವರ ಹೆಸರಿನ ದಾಖಲೆಯನ್ನು ವಧುವನ್ನು ನೋಡಲು ಹೋದ ಸಂದರ್ಭದಲ್ಲಿ ತೋರಿಸಿ ಹುಡುಗ ಮಾನ್ವಿ ಸಹಕಾರಿ ಬ್ಯಾಂಕಿನ ಉದ್ಯೋಗಿ ಎಂದು ಹೇಳಿ ಮದುವೆ ಮಾಡಕೊಂಡ ನಂತರ ನಿರಂತರವಾಗಿ 25 ಲಕ್ಷ ರೂ. ಗಳನ್ನು ವರದಕ್ಷಿಣೆ ತರಬೇಕು.ಇಲ್ಲದಿದ್ದರೆ ತವರು ಮನೆಯಲ್ಲಿ ಇರುವಂತೆ ಹೊಡಿಬಡಿ ಮಾಡಿ ನಿತ್ಯವೂ ಪತಿ ಮಂಜು ಬಿದರೂರು ಹಾಗೂ ಪತಿಯ ಅಣ್ಣನ ಹೆಂಡತಿ ಕಿರುಕುಳ ನೀಡುತ್ತಿದ್ದಾರೆ.ಈ ಕುರಿತು ಸಮಾಜದ ದೈವಕ್ಕೆ ಮನವಿ ಮಾಡಿಕೊಂಡ ಸಂದರ್ಭದಲ್ಲಿ ರಾಜೀ ಪಂಚಾತಿ ನಡೆಸಿ ಬುದ್ಧಿಮಾತು ಹೇಳಿದರೂ ಪತ್ನಿಯ ಮೇಲೆ ಪತಿ ಹಾಗೂ ಅವರ ತಾಯಿ,ಅಣ್ಣನ ಹೆಂಡತಿ ಪುನಹ ನಿತ್ಯವೂ ಕಿರುಕುಳ ಮಿತಿಮೀರಿದೆ.

ಮದುವೆಯಾಗಿ ವರ್ಷ ತುಂಬುವ ಸಂದರ್ಭದಲ್ಲಿ ತವರುಮನೆ ಉಡಿ ತುಂಬುವ ಕಾರ್ಯ ಮಾಡಿಕೊಂಡು ಬರಲು ರಾಯದುರ್ಗಕ್ಕೆ ಹೋಗಿ ಬಂದಿದ್ದು ನ.18 ಸೋಮವಾರ ಬೆಳ್ಳಿಗ್ಗೆ 10.30ಕ್ಕೆ ಮನೆಗೆ ಬಂದಾಗ ಮನೆಗೆ ಬೀಗ ಹಾಕಿ ಪತಿ ಕುಟುಂಬದವರು ನಾಪತ್ತೆಯಾಗಿದ್ದಾರೆ. ಈ ಕುರಿತು ಮೊಬೈಲ್ ಕರೆ ಮಾಡಿ ಪತಿ ಮಂಜು ಬಿದರೂರು ಇವರ ವಿಚಾರಿಸಿದಾಗ 25 ಲಕ್ಷ ತಂದರೆ ಮಾತ್ರ ಮನೆಗೆ ಪ್ರವೇಶ ಇಲ್ಲದಿದ್ದರೆ ನೀನು ಪುನಹ ತವರುಮನೆಗೆ ಹೋಗುವಂತೆ ತಿಳಿದಾಗ ಪತ್ನಿ ಶಾಂತಿ ಹಾಗೂ ಅವರ ಅಪ್ಪ ಅಮ್ಮ ಮಂಜು ಬಿದರೂರು ಮನೆ ಎದುರು ಸೋಮವಾರ ಬೆಳ್ಳಿಗ್ಗೆ10.30 ರಿಂದ ಧರಣಿ ನಡೆಸುತ್ತಿದ್ದಾರೆ. ಪ್ರಕರಣ ಕುರಿತು ಪೊಲೀಸ್ ಇಲಾಖೆಯ 112ಗೆ ಕರೆ ಮಾಡಿ ವಿಷಯ ತಿಳಿಸಿದ್ದು ಠಾಣೆಗೆ ಆಗಮಿಸಿ ದೂರು ನೀಡುವಂತೆ ಸೂಚನೆ ನೀಡಿದ್ದು ಕೇಸ್ ಕೊಡುವುದಾಗಿ ಧರಣಿ ನಿರತ ಪತ್ನಿ ಶಾಂತಿ ತಿಳಿದಿದ್ದಾರೆ.



-ವೀರನಗೌಡ

# ಎರಡು ತುಂಡು ಮಾಡಿ ಕಬ್ಬಿನ ಗದ್ದೆಯಲ್ಲಿ ಬೀಸಾಕಿದ್ದ ರಾಕ್ಷಸಿ ಹೆಂಡತಿ!

3 ☞

ತನ್ನ ತವರನ್ನು ಮರೆತಿದ್ದಳು. ಇದಾದ ಕೆಲ ದಿನಗಳಲ್ಲಿ ಶ್ರೀಮಂತ ದುಷ್ಟಸ್ನೇಹಿತರೊಂದಿಗೆ ಸೇರಿ ಸಾರಾಯಿ ಚಟಕ್ಕೆ ಅಂಟಿಕೊಂಡನು.



ಮೊದಲು ಹಂತಕಿ ಸಾವಿತ್ರಿ ಹೀಗಿದ್ದಳು

**ಪಟ...ಪಟನೇ ನಾಲ್ಕು ಮಕ್ಕಳಾದವು...**

ಬಡತನದ ಜೀವನಕ್ಕೆ ಮನೆ ತುಂಬಾ ಮಕ್ಕಳು ಎನ್ನುವಂತೆ ಶ್ರೀಮಂತ ಮತ್ತು ಸಾವಿತ್ರಿಗೆ ನಾಲ್ಕು ಮಕ್ಕಳಾದವು. ಮಕ್ಕಳಿಗೆ ಮಾಯವ್ವ, ಸೃಷ್ಟಿ, ರೋಷನಿ, ಸೂರಜ ಎಂದ ಹೆಸರಿಟ್ಟರು. ಇವಳ ತವರಿನವರು ಏನು ಸಹಾಯ ಮಾಡದ ಅಸಹಾಯಕ ಸ್ಥಿತಿಯಲ್ಲಿದ್ದರು. ಆದರೆ ಗಂಡನೆಂಬ ಕುಡುಕೇಶಿ ಹೆಂಡತಿ ಮಕ್ಕಳಿಗೆ ಆಹಾರ ಧಾನ್ಯ, ಎಣ್ಣೆ, ಬೆಣ್ಣೆ, ಬಟ್ಟೆ-ಬರೆಗಳ ಬಗ್ಗೆ ಕಿಂಚಿತ್ತು ಕಾಳಜಿಯಿರಲಿಲ್ಲ. ಕುಡಿದು ನಶೆಯಲ್ಲಿ ಸಾವಿತ್ರಿಯೊಡನೆ ಮಾತ್ರ ತಪ್ಪದೇ ಮಲಗುತ್ತಿದ್ದನು. ಮೊದಲಿನ ಎರಡು ಮಕ್ಕಳಾಗುವವತನಕ ಶ್ರೀಮಂತ ತನ್ನ ಕುಟುಂಬವನ್ನು ಸಾಧಾರಣವಾಗಿ ನೋಡಿಕೊಂಡಿದ್ದನು. ಈತನ ತಾಯಿ ಲಗಮವ್ವ ಮತ್ತು ಅಣ್ಣ-ತಮ್ಮ ಬೈದು ಬುದ್ದಿ ಹೇಳಿದರೂ ಆತ ತನ್ನ ಕುಡಿತ ಬಿಡಲೇ ಇಲ್ಲ. ಈತ ಹೆಚ್ಚಾಗಿ ಉಮರಾಣಿ ಪರಿಸರದಲ್ಲಿ ಇರದೇ ರಾಯಭಾಗ ತಾಲ್ಲೂಕಿನ ಹಾರುಗೇರಿಯಲ್ಲಿ ಇರುತ್ತಿದ್ದನು. ಕಬ್ಬಿನ ಕಟಾವು ಸಂದರ್ಭದಲ್ಲಿ ಮಾತ್ರ ಮೂರ್‍ನಾಲ್ಕು ತಿಂಗಳು ಬಂದು ಊರಲ್ಲಿ ಇರುತ್ತಿದ್ದನು.

**ಯಾರ ಜತೆಯಾದರೂ ಮಲಕೋ... ರೊಕ್ಕಾ ಕೊಡು...**

ಸುಮಾರು 8-10 ವರ್ಷಗಳಿಂದ ಶ್ರೀಮಂತನಿಗೆ ಕುಡಿತವೇ ಸರ್ವಸ್ವವಾಗಿತ್ತು. ದುಡಿದ ದುಡ್ಡನ್ನೆಲ್ಲಾ ಕುಡಿತಕ್ಕೆ ಖರ್ಚು ಮಾಡಿ ಕುಟುಂಬದ ಉಪ ಜೀವನದತ್ತ ಸಂಪೂರ್ಣ ನಿರ್ಲಕ್ಷ ಮಾಡಿದ್ದ ಐನಾತಿ ಶ್ರೀಮಂತನಿಗೆ ಕುಡಿಯಲು ಹಣ ಕಡಿಮೆಯಾದಾಗ 'ನೀನು ಯಾರ ಹತ್ತಿರ ಬೇಕೋ ಅವರಿಗೆ ಮಲಕೋ... ನನಗೆ ಏನು ಪರಕ್ ಆಗುವುದಿಲ್ಲಾ, ಒಟ್ಟಿನ ಮೇಲೆ ಕುಡಿಯಲು ದುಡ್ಡು ಕೊಡು' ಎಂದು ನಿರ್ಲಜ್ಜನಾಗಿ ಹೇಳುತ್ತಿದ್ದನು. ಸಾವಿತ್ರಿ ದುಡಿದ ದುಡ್ಡಲ್ಲಿ ಮನೆ-ಮಕ್ಕಳು ಎಂದೆಲ್ಲ ನೋಡಿಕೊಂಡು 'ಹಾಳಾಗಿ ಹೋಗು' ಎಂದು ಪುಡಿಗಾಸು ನೀಡುತ್ತಿದ್ದಳು. ಇಷ್ಟೇ ಆಗಿದ್ದರೂ ಏನಾಗುತ್ತಿತ್ತೂ ಏನೋ... ಕುಡುಕ ಶ್ರೀಮಂತ 'ನನಗೆ ನೀನು ಮೋಟಾರ್ ಸೈಕಲ್ ಕೊಡಿಸು' ಎಂದು ತಗಾದೆ ಆರಂಭಿಸಿದಾಗ ಆಕ್ರೋಶಗೊಂಡ ಹೆಂಡತಿ ಸಾವಿತ್ರಿ 'ಅಷ್ಟು ಹಣ ಎಲ್ಲಿಂದ ತರಲಿ' ಎಂದು ಪ್ರಶ್ನಿಸಿದಾಗ 'ನೀನು ಬೇಕಾದವರ ಜತೆ ಮಲಗಿ ಅವರನ್ನು ಸಮಾಧಾನಪಡಿಸಿ ದುಡ್ಡು ತಂದು ನನಗೆ ಮೋಟಾರ್ ಸೈಕಲ್ ಕೊಡಿಸು' ಎಂದು ಹೇಳಿ ಸಾವಿತ್ರಿಗೆ ಥಳಿಸುತ್ತಿದ್ದನು.

**ಅನೇಕ ಗಂಡಸರೊಡನೆ ಅಕ್ರಮ ಸಂಬಂಧ...**

ಇತ್ತೀಚಿಗೆ ಸಾವಿತ್ರಿಯು ಮೈಯಲ್ಲಿ ಏನೂ ಉಳಿದಿರಲಿಲ್ಲ. ಆಕೆಯ ಸೌಂದರ್ಯ ಹಾಳಾಗಿತ್ತು. ಪದರಲ್ಲಿ ನಾಲ್ಕು ಮಕ್ಕಳು. ಅವರಿಗೆ ಊಟ, ಉಪಚಾರ, ಶಿಕ್ಷಣ, ಬಟ್ಟೆ-ಬರೆ, ಆರೋಗ್ಯ ಎಲ್ಲವನ್ನೂ ಸಾವಿತ್ರಿಯೇ ನೋಡಬೇಕಾಗಿತ್ತು. ತಾನು ದುಡಿಯಲು ಹೋದರೆ ಮಾತ್ರ ಹೆಸರಿಗೆ ಮನೆ ನಡೆಯುತ್ತಿತ್ತು. ಅದರಲ್ಲಿ ಕುಡುಕ ಗಂಡನು ಹಣಕ್ಕಾಗಿ ದಿನವಿಡೀ ಜಗಳವಾಡಿ ಥಳಿಸುತ್ತ ಅವಾಚ್ಯ ಶಬ್ದಗಳಿಂದ 'ಏಸ ಭೋಸಡಿ ನನಗೇನು ಹೇಳುವುದಿಲ್ಲ. ನಿನಗೆ ಯಾರು ಬೇಕೋ ಬಿಂದಾಸ್ ಆಗಿ ಅವರಿಗೆ ಸೆರಗು ಹಾಸಿ ಮನೆ ನಡೆಸು, ಮತ್ತು ನನಗೆ ಸಾರಾಯಿ ಕುಡಿಯಲು ಹಣ ಕೊಡು' ಎಂದು ಹೇಳುತ್ತಿದ್ದನು. ಅನಿವಾರ್ಯವಾಗಿ ಸಾವಿತ್ರಿ ಮನೆ ನಡೆಸಲು ಅಕ್ಕ-ಪಕ್ಕದ ಗಂಡಸರೊಡನೆ ಅನೈತಿಕ ಸಂಬಂಧ ಮುಂದುವರೆಸಿದಳು. ಸಾವಿತ್ರಿಗೆ ಅನೈತಿಕ ಸಂಬಂಧ ಹೊಂದದೇ ವಿಧಿ ಇರಲಿಲ್ಲ. ಈ ಸಂಬಂಧದಲ್ಲಿ ಬಂದ ಪುಡಿಗಾಸಿನಲ್ಲಿ ಮನೆ ನಡೆಸುತ್ತ ಮಕ್ಕಳ ಖರ್ಚುವೆಚ್ಚ ನೋಡಿಕೊಂಡಿದ್ದಳು. ಇಂತಹ ಪಾಪದ ಹಣದಲ್ಲಿ ಕುಡುಕನು ಪಾಲುದಾರನಾಗುತ್ತಿದ್ದನು. ಒಟ್ಟಿನಲ್ಲಿ ಹೇಳಬೇಕೆಂದರೆ ಸಾವಿತ್ರಿಗೆ ಬದುಕು ಅನಿವಾರ್ಯವಿತ್ತು. ನಾನು ಏನಾದರೂ ಮಾಡಿಕೊಂಡು ಸತ್ತರೆ ತನ್ನ ಮಕ್ಕಳು ಪರದೇಶಿಗಳಾಗುತ್ತಾರೆ ಎಂದುಕೊಂಡು ಆದದ್ದಾಗಲಿ ಎಂದುಕೊಂಡು ಆಕೆ ತನ್ನ ಅನೈತಿಕ ಸಂಬಂಧದ ವ್ಯವಹಾರ ಮುಂದುವರೆಸಿದಳು.

**ಗಂಡನನ್ನು ಕೊಲೆ ಮಾಡಲು ನಿರ್ಧಾರ...**

ಇತ್ತೀಚಿಗೆ ಶ್ರೀಮಂತ ಇಟ್ನಾಳೆ ಕಬ್ಬು ಕಡಿಯಲು ರಾಜು ಪಾಟೀಲ ಗ್ಯಾಂಗ್‌ನಲ್ಲಿದ್ದನು. ತನಗೆ ಆದಷ್ಟು ಬೇಗನೆ ಸೈಕಲ್ ಮೋಟಾರ್ ಕೊಡಿಸಬೇಕೆಂದು ಹೆಂಡತಿಗೆ ದನ ಬಡಿದಂತೆ ಬಡಿಯತೊಡಗಿದನು. 'ನನ್ನ ಗಂಡ ಬದುಕಿದ್ದು ಸತ್ತಂತೆ' ಅವನಿಗೊಂದು ದಾರಿ ತೋರಿಸಬೇಕು. ಈತ ಸತ್ತು ಹೋದರೆ ನನ್ನ ಮಕ್ಕಳೊಂದಿಗೆ ಆರಾಮ ಇರುತ್ತೇನೆಂದು ನಿರ್ಧರಿಸಿ ಅವಕಾಶಕ್ಕಾಗಿ ಕಾಯ್ದು ಕುಳಿತಿದ್ದಳು. ವಿಧಿಯಿಲ್ಲದಿದ್ದರೂ ಆಕೆ ಬೇರೆ ಗಂಡಸರ ಜತೆಗೆ ಮಲಗಿಕೊಂಡು ದುಡ್ಡು ತರಲೇಬೇಕಾಗಿತ್ತು.

**ಕಲ್ಲಿನಿಂದ ತಲೆ ಜಜ್ಜಿ ಕೊಂದಳು...**

ಅಂದು ರವಿವಾರ ದಿನಾಂಕ 08-12-2024ರಂದು ಕುಡುಕ ಶ್ರೀಮಂತ ಸಾಯಂಕಾಲ ತಾಯಿ ಲಗಮವ್ವಳನ್ನು ಕಾಡಿ-ಬೇಡಿ ಸಾರಾಯಿ ಕುಡಿಯಲು 50 ರೂ.ಗಳನ್ನು ತೆಗೆದುಕೊಂಡು ಹೋಗಿದ್ದನು. ಅಂದು ರಾತ್ರಿ ಸಾವಿತ್ರಿ ಹಾಗೂ ಮಕ್ಕಳು ಊಟ ಮಾಡಿ ಮಲಗಿದ್ದರು. ರಾತ್ರಿ 9 ಗಂಟೆಯ ಸುಮಾರಿಗೆ ಕಂಠ ಪೂರ್ತಿ ಕುಡಿದು ತನ್ನ ತಂಗಿಯ ಗಂಡ ದುಂಡಪ್ಪ ಕುರಬರ ಎಂಬಾತನ ಜತೆಗೆ ಚಿಕನ್ ತಂದಿದ್ದನು. ಅದನ್ನು ಅಡುಗೆ ಮಾಡಿ ಶ್ರೀಮಂತ ಮತ್ತು ದುಂಡಪ್ಪನಿಗೆ ಉಣಬಡಿಸಿದಳು. ಇದೇ ಸಂದರ್ಭದಲ್ಲಿ 'ಹಡಸು ನನಗ ಮೋಟಾರ್ ಸೈಕಲ್ ಕೊಡಸಾಕ ತಯಾರಿಲ್ಲ' ಎಂದು ಅವಾಚ್ಯವಾಗಿ ಬೈಯ್ದು ಸಾವಿತ್ರಿಗೆ ಎಲ್ಲೆಂದರಲ್ಲಿ ಥಳಿಸಿದನು. ಇವರ ಸದ್ದು ಕೇಳಿ ನೆರೆಮನೆಯ ಸಂಜು ಇಟ್ನಾಳೆ ಧಾವಿಸಿ ಬಂದು ದುಂಡಪ್ಪನ ಜತೆ ಸೇರಿ ಜಗಳ ಬಿಡಿಸಿದನು. ಆಗ ಸಮಯ 12 ಗಂಟೆ ರಾತ್ರಿಯಾಗಿತ್ತು.



ಘಟನಾ ಸ್ಥಳವನ್ನು ಪಂಚನಾಮೆ ಮಾಡುತ್ತಿರುವ ಸಿಪಿಐ ವಿಶ್ವನಾಥ ಚೌಗಲಾ, ಪಂಚರು

ಇತ್ತ ರಾತ್ರಿ ಕಂಠ ಪೂರ್ತಿ ಕುಡಿದು ಹೊಟ್ಟೆ ತುಂಬಾ ತುಂಡು ತಿಂದು ಗಡದ್ದಾಗಿ ಶ್ರೀಮಂತ ಗೊರಕೆ ಹೊಡೆಯುತ್ತಿದ್ದನು. ಇದೇ ಸಂದರ್ಭ ಎಂದು ನಿರ್ಧರಿಸಿದ ಸಾವಿತ್ರಿ ಅಂಗಳದಲ್ಲಿದ್ದ ಕಲ್ಲಿನಿಂದ ಮಲಗಿದ್ದ ಗಂಡನಿಗೆ ಜಜ್ಜಿದಳು. ಎರಡು-ಮೂರು ಹೊಡೆತಗಳಿಂದ ತಲೆಯೊಡೆದು ರಕ್ತ ಚಿಮ್ಮಿತ್ತು. ಮಲಗಿದ್ದಲ್ಲೇ ವಿಲ... ವಿಲನೇ ಒದ್ದಾಡಿ ಪ್ರಾಣ ಬಿಟ್ಟ ಐನಾತಿ ಕುಡುಕ ಗಂಡ. ಆಗ ಸಮಯ ರಾತ್ರಿ 2 ಗಂಟೆ ಆಗಿತ್ತು.

**ಶವವನ್ನು 2 ತುಂಡಾಗಿ ಕತ್ತರಿಸಿದಳು...**

ಗಂಡ ಸತ್ತದ್ದನ್ನು ಖಚಿತಪಡಿಸಿಕೊಂಡ ರಾಕ್ಷಸಿ ಯಂತಹ ಹೆಣ್ಣು ಸಾವಿತ್ರಿ. ಗಂಡ ತನಗೊಬ್ಬಳಿಗೆ ಎತ್ತಲಾರ... ತಾನು ಮಾಡಿದ ಕೊಲೆ ಯಾರಿಗೂ ಗೊತ್ತಾಗದಂತೆ ಸಾಗಿಸಬೇಕೆಂದು ತೀರ್ಮಾನಿಸಿದಳು. ಮನೆಯಲ್ಲಿ ಮಾಂಸ ಕತ್ತರಿಸುವ ಸತ್ತೂರಿ (ಕಬ್ಬಿಣದ ಹರಿತವಾದ ಆಯುಧ) ಇತ್ತು. ಅದೇ ಸತ್ತೂರಿಯಿಂದ ಸತ್ತು ಬಿದ್ದಿದ್ದ ತನ್ನ ಗಂಡನ ಸೊಂಟ ಕತ್ತರಿಸಲು ಪ್ರಯತ್ನಿಸಿದಳು. ಆದರೆ ಬೆನ್ನು ಮೂಳೆ ಕತ್ತರಿಸದಾದಾಗ ಕಬ್ಬು ಕಡಿಯುವ ಕೊಯ್ತಾದಿಂದ ಬೆನ್ನೆಲುಬು ಕತ್ತರಿಸಿ ಎರಡು ತುಂಡುಗಳನ್ನು ಮಾಡಿ ನೀರಿನ ಪೀಪ್‌ನಲ್ಲಿ ಒಂದೊಂದೇ ತುಂಡನ್ನು ಹಾಕಿ ಅದೇ ದಿನ ರಾತ್ರಿ ಸಮೀಪದ ಅವರ ಸಂಬಂಧಿಕರ ಕಬ್ಬಿನ ಗದ್ದೆಯಲ್ಲಿ ಎಸೆದು ಎರಡು ತುಂಡುಗಳನ್ನು ಜೋಡಿಸಿ ರಾತ್ರಿ, ಮನೆಗೆ ಬಂದಳು. ಬಂದವಳೇ ರಕ್ತಸಿಕ್ತ ಬಟ್ಟೆ ಕಳಚಿ ಒಲೆಯಲ್ಲಿ ಹಾಕಿ ಸುಟ್ಟು ಬೂದಿಯನ್ನು ತಿಪ್ಪೆಗೆ ಎಸೆದು ಬಂದಳು. ನಂತರ ಇಡೀ ಮನೆಯನ್ನು ತೊಳೆದು ಸ್ವಚ್ಛಗೊಳಿಸಿದಳು. ಕೊಲೆಗೆ ಬಳಸಿದ ದೊಡ್ಡ ಕಲ್ಲನ್ನು ತೊಳೆದು ಶೆಡ್‌ನಲ್ಲಿಟ್ಟಳು. ಗಂಡನ ಮೊಬೈಲ್ ಕೂಡಾ ಸ್ವಿಚ್ ಆಫ್ ಮಾಡಿ ಮನೆಯಲ್ಲಿಟ್ಟಳು. ತಾನು ತಲೆಯ ಮೇಲೆ ಸ್ನಾನ ಮಾಡಿ ಸ್ವಚ್ಛವಾಗಿ ಏನೂ ಆಗಿಲ್ಲವೆನ್ನುವಂತೆ ಮಲಗಿಬಿಟ್ಟಳು. ತನ್ನ ಸ್ಥಿತಿಗೆ ಗಂಡ ಶ್ರೀಮಂತನೇ ಕಾರಣ ಆತ ಇದ್ದರೆಷ್ಟು ಸತ್ತರೆಷ್ಟು...? ಎಂದು ತನಗೆ ತಾನೇ ಪ್ರಶ್ನೆ ಮಾಡುತ್ತ ಕುಳಿತಳು.



ತಂದೆ ಮಸಣಕ್ಕೆ ತಾಯಿ ಜೈಲಿಗೆ ಇನ್ನು ನಮ್ಮ ಗತಿ ಎನ್ನುವಂತಿರುವ ಮಕ್ಕಳು

**ಕಬ್ಬಿನ ಗದ್ದೆಯಲ್ಲಿ ಶ್ರೀಮಂತ ಶವ...**

ಕೊಲೆ ನಡೆದು ಎರಡು-ಮೂರು ದಿನಗಳಾಗಿತ್ತು. ಶ್ರೀಮಂತನ ಶವ ಊದಿಕೊಳ್ಳಲಾರಂಭಿಸಿತು. ಆದರಿಂದ ದುರ್ನಾತ ಕೂಡಾ ಬರುತ್ತಿತ್ತು. ಯಾರಾದರೂ ಶ್ರೀಮಂತ ಎಲ್ಲಿ? ಎಂದು ಕೇಳಿದರೆ ಕಬ್ಬು ಕಡಿಯಲು ಹೋಗಿದ್ದಾನೆ ಎಂಬ ಉತ್ತರ ಸಾವಿತ್ರಿ ಬಾಯಲ್ಲಿ ಸಿದ್ಧವಾಗಿತ್ತು. ದಿನಾಂಕ 10-12-2024ರಂದು ಮುಂಜಾನೆ 11.30 ಗಂಟೆಯ ಸಮಯ ಶ್ರೀಮಂತ ಇಟ್ನಾಳೆಯ ಶವ ಬಿಸಾಕಿದ್ದ ಕಬ್ಬಿನ ಗದ್ದೆಯಲ್ಲಿ ಡ್ರಿಪ್ ಪೈಪ್ ತೆಗೆಯಲು ಬಂದ ರಾಕೇಶ ಸಿದ್ದಪ್ಪ ಇಟ್ನಾಳೆ, ಮಲ್ಲಪ್ಪ ರಾಮಪ್ಪ ಚೌಗಲೆ ಎಂಬಿಬ್ಬರು ಇದೇ ಸಂದರ್ಭದಲ್ಲಿ ಶ್ರೀಮಂತನ ಶವ ಕಂಡು ಕಕ್ಕಾಬಿಕ್ಕಿ ಆದರು. ಶ್ರೀಮಂತನನ್ನು ಕೊಲೆ ಮಾಡಿದ ನಂತರ ಟೊಂಕದ ಹತ್ತಿರ ಪೂರ್ತಿ ಕತ್ತರಿಸಿ ಬೀಸಾಕಿದ್ದು ನೋಡಿ ಗಾಬರಿಗೊಂಡರು. ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿ ಊರವರು ಗುಂಪಾಗಿ ಕಬ್ಬಿನ ಗದ್ದೆಗೆ ಬಂದರು. ಇತ್ತ ಶ್ರೀಮಂತನ ತಾಯಿ ಲಗಮವ್ವಳಿಗೂ ಸುದ್ದಿ ಮುಟ್ಟಿತ್ತು. ಆಕೆ ಲಭೋ... ಲಭೋ ಎಂದು ಬಾಯಿ ಬಡಿದುಕೊಂಡು ಘಟನಾ ಸ್ಥಳಕ್ಕೆ ಬಂದು ರೋಧಿಸಿದಳು. ಸುದ್ದಿ ತಿಳಿದ ಹಂತಕಿ ಸಾವಿತ್ರಿ ತನ್ನ ಮಕ್ಕಳೊಂದಿಗೆ ಧಾವಿಸಿ ಮೊಸಳೆ ಕಣ್ಣೀರು ಸುರಿಸಿ ನಾಟಕ ಮಾಡುತ್ತಿದ್ದಳು.



ಮಗ ಶ್ರೀಮಂತ ಇಟ್ನಾಳೆ ಶವವನ್ನು ಪಿಎಸ್‌ಐ ಬಸಗೌಡರಿಗೆ ತೋರಿಸುತ್ತಿರುವ ಲಗಮವ್ವ

**ಪೊಲೀಸರಿಗೆ ದೂರು...**

ಮಗ ಶ್ರೀಮಂತನ ಕೊಲೆ ಕಂಡು ಹೌಹಾರಿದ್ದ ತಾಯಿ ಚಿಕ್ಕೋಡಿ ಪೊಲೀಸ್ ಠಾಣೆಗೆ ಧಾವಿಸಿ ಪಿಎಸ್‌ಐ ಬಸಗೌಡ ನೇರ್ಲಿ ಅವರನ್ನು ಕಂಡು ಮಗನ ಕೊಲೆಯನ್ನು ಯಾರೋ ಮಾಡಿದ್ದಾರೆಂದು ಗೊತ್ತಿಲ್ಲ ಎಂದು ಹೇಳಿ ದೂರು ನೀಡಿದಳು. ತಕ್ಷಣ ಪಿಎಸ್‌ಐ ಬಸಗೌಡ ಅವರು ಸಿಪಿಐ ವಿಶ್ವನಾಥ ಚೌಗಲಾ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರಿಗೆ ವಿಷಯ ತಿಳಿಸಿ ಅವರಿಂದ ನಿರ್ದೇಶನ ಪಡೆದು ದೂರನ್ನು ದಾಖಲಿಸಿಕೊಂಡು ಮುಂದಿನ ಕಾರ್ಯಾಚರಣೆಗೆ ತಮ್ಮ ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳ ಉಮರಾಣಿಗೆ ತೆರಳಿದರು. ಇವರ ಬೆನ್ನ ಸಿಪಿಐ ಚೌಗಲಾ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಕೂಡಾ ಧಾವಿಸಿದ್ದರು. ಕೊಲೆಯಾಗಿ ಬಿದ್ದಿದ್ದ ಶ್ರೀಮಂತನ ತುಂಡಾಗಿದ್ದ ಶವ ವೀಕ್ಷಿಸಿದರು. ಕುಟುಂಬದವರಿಂದ ಎಲ್ಲ ಮೂಲಗಳಿಂದ ಮಾಹಿತಿ ಈ ಸಂದರ್ಭದಲ್ಲಿ ತನಿಖಾಧಿಕಾರಿ ವಿಶ್ವನಾಥ ಚೌಗಲಾ ಕಲೆ ಹಾಕಿದ್ದರು. ಪಿಎಸ್ ಐ ಬಸಗೌಡ ನೇರ್ಲಿ ಅವರ ಸಹಾಯದಿಂದ ಶವದ ಪಂಚನಾಮೆ ಮಾಡುವಲ್ಲಿ ತನಿಖಾಧಿಕಾರಿ ಚೌಗಲಾ ನಿರತರಾದರು. ಕೊಲೆಯ ಪ್ರಕರಣ ತುಂಬಾ ನಿಗೂಢವಾಗಿದೆ. ಆದಷ್ಟು ಬೇಗನೆ ಹಂತಕರನ್ನು ಪತ್ತೆ ಮಾಡಲು ಡಿವೈಎಸ್ಪಿ ಗೌಡರ ನಿರ್ದೇಶನಗಳನ್ನು ನೀಡಿದರು.

☞12

# ಮುರುಡೇಶ್ವರ ಸಮುದ್ರದ ಅಲೆಗಳ ಅಬ್ಬರಕ್ಕೆ ಸಿಲುಗಿ ನಾಲ್ವರು ವಿದ್ಯಾರ್ಥಿನಿಯರ ಸಾವು

5 ☞

ಶಾರದಮ್ಮ, ನರೇಶ್, ಸುನಿಲ್, ವಿಶ್ವನಾಥ್ ಹಾಗೂ ಡಿ ಗ್ರೂಪ್ ಸಿಬ್ಬಂದಿ ಲಕ್ಷ್ಮಮ್ಮರವರನ್ನು ಸೇವೆಯಿಂದ ವಜಾ ಮಾಡಿ ಆದೇಶ ಹೊರಡಿಸಿದ್ದಾರೆ. ನಾಲ್ಕು ಮಕ್ಕಳು ಮುರುಡೇಶ್ವರ ಬಳಿ ಸಮುದ್ರದ ನೀರು ಪಾಲಾದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತೀವ್ರ ನೋವು ವ್ಯಕ್ತಪಡಿಸಿದ್ದಾರೆ. ಘಟನೆಯಲ್ಲಿ ಮಡಿದ ನಾಲ್ಕು ವಿದ್ಯಾರ್ಥಿನಿಯರ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ತಲಾ 5 ಲಕ್ಷ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಿ ಹಣದ ಚೆಕ್‌ನ್ನು ಜಿಲ್ಲಾಧಿಕಾರಿಗಳು ಮೃತರ ಮನೆಗಳಿಗೆ ತಲುಪಿಸುವಂತೆ ತಿಳಿಸಿದ್ದಾರೆ. ಅದರಂತೆ ಮಕ್ಕಳ ಅಂತ್ಯಸಂಸ್ಕಾರಗಳು ನಡೆದ ನಂತರ ಜಿಲ್ಲಾಧಿಕಾರಿ ಅಕ್ರಂ ಪಾಷ ಮತ್ತು ಎಸ್ಪಿ ಬಿ. ನಿಖಿಲ್‌ರವರು ಮೃತರ ಮನೆಗಳಿಗೆ ಹೋಗಿ ಸರ್ಕಾರದಿಂದ ಮಂಜೂ


ಕಾರವಾರ ಜಿಲ್ಲಾಧಿಕಾರಿ, ಎಸ್ಪಿ ಮತ್ತು ಶಾಸಕ ಸಮೃದ್ಧಿ ಮಂಜುನಾಥ್‌ರವರು ಚರ್ಚಿಸುತ್ತಿರುವುದು

ರಾಗಿದ್ದ 5 ಲಕ್ಷದ ಚೆಕ್‌ನ್ನು ವಿತರಿಸಿ ಸಾಂತ್ವನ ಹೇಳಿದ್ದಾರೆ. ಮೃತ ವಿದ್ಯಾರ್ಥಿನಿಯರ ನಿಧನಕ್ಕೆ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎಸ್. ಸುರೇಶ್, ಕೋಲಾರ ಶಾಸಕ ಕೊತ್ತೂರು ಮಂಜುನಾಥ್, ಸಂಸದ ಎಂ. ಮಲ್ಲೇಶ್ ಬಾಬು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅಜಯ್ ಕುಮಾರ್ ಮುಂತಾದವರು ತೀವ್ರವಾದ ಸಂತಾಪವನ್ನು ವ್ಯಕ್ತಪಡಿಸಿರುವುದಲ್ಲದೆ ಮಕ್ಕಳನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿಯನ್ನು ದೇವರು ಕರುಣಿಸಲೆಂದು ಪ್ರಾರ್ಥಿಸಿದ್ದಾರೆ. ಶಿಕ್ಷಕರು ಮಾಡಿದ ತಪ್ಪಿನಿಂದ ನಾಳೆ ಪೋಷಕರಿಗೆ ಊರುಗೋಲಾಗಬೇಕಿದ್ದ ನಾಲ್ಕು ಪುಟ್ಟ ಮಕ್ಕಳು ಜೀವವನ್ನು ಕಳೆದುಕೊಂಡಿದ್ದಾರೆ. ಹೆತ್ತು, ಹೊತ್ತು, ತುತ್ತಿಟ್ಟು ಮಕ್ಕಳನ್ನು ಎದೆಯ ಮಟ್ಟಕ್ಕೆ ಬೆಳೆಸಿದ ಪೋಷಕರಿಗೆ ಈ ರೀತಿ ಮಕ್ಕಳನ್ನು ಕಳೆದುಕೊಳ್ಳುವ ದುರ್ಗತಿ ಬಂದಿದೆ. ಇವರ ನೋವಿಗೆ ನ್ಯಾಯ ಕೊಡುವವರು ಯಾರು? ಪೋಷಕರು ತಮ್ಮ ಮಕ್ಕಳನ್ನು ಭವಿಷ್ಯ ರೂಪಿಸಲು ಬಿಸಿಲಿಗೆ ಮೈಯೊಡ್ಡಿ ಒಣಗಿ, ಮಳೆಯಲ್ಲಿ ನೆನೆದು, ಚಳಿಗೆ ನಡುಗಿ ಹಗಲಿರುಳು ದುಡಿದು ಸಂಪಾದನೆ ಮಾಡುತ್ತಿರುವವರು ಇಂತಹ ಘಟನೆಗಳಿಂದ ಹೊರ ಬಂದು ಚೇತರಿಸಿಕೊಳ್ಳಲು ತುಂಬಾ ಕಾಲಾವಕಾಶ ಹಾಗೂ ಗಟ್ಟಿಯಾದ ಹೃದಯ ಬೇಕಾಗುತ್ತದೆ. ಮಕ್ಕಳನ್ನು ಕಳೆದುಕೊಂಡಿರುವ ತಂದೆ, ತಾಯಿ ಮತ್ತು ಪೋಷಕರು ಪ್ರಾಂಶುಪಾಲೆ ಶಶಿಕಲಾರವರಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಶಿಕ್ಷಕರ ನಿರ್ಲಕ್ಷ್ಯಕ್ಕೆ ಇನ್ನು ಬಾಳಿ ಬದುಕಬೇಕಾಗಿದ್ದ ವಿದ್ಯಾರ್ಥಿನಿಯರ ಸಾವು ಮಾತ್ರ ನಿಜಕ್ಕೂ ದುರಂತವೇ ಸರಿ. ಮುರುಡೇಶ್ವರದಲ್ಲಿ ನಡೆದ ಸಹಪಾಠಿಗಳ ಸಾವಿನ ಸುದ್ದಿಯನ್ನು ತಿಳಿದುಕೊಂಡ ವಸತಿ ಶಾಲೆಯಲ್ಲಿದ್ದ ವಿದ್ಯಾರ್ಥಿಗಳು ಭಯಗೊಂಡು ಶಾಲೆ ಬಿಟ್ಟು ಮನೆ ಸೇರಿಕೊಂಡಿದ್ದರು. ಇದರಿಂದ ತಾತ್ಕಾಲಿಕವಾಗಿ ಎರಡು ದಿನಗಳ ಕಾಲ ರಜೆಯನ್ನು ಘೋಷಿಸಲಾಗಿತ್ತು. ಇದೀಗ ಡಿಸೆಂಬರ್ 16 ಸೋಮವಾರದಿಂದ ಶಾಲೆಯನ್ನು ಪ್ರಾರಂಭ ಮಾಡಿದ್ದು, ವಿದ್ಯಾರ್ಥಿಗಳು ಒಬ್ಬೊಬ್ಬರೇ ಬಂದು ಸೇರಿಕೊಳ್ಳುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಮುಳಬಾಗಿಲಿನ ವಿದ್ಯಾರ್ಥಿನಿಯರು ಸಮುದ್ರದಲ್ಲಿ ಮುಳುಗಿ ಸಾವು ನೋವು ಸಂಭವಿಸಿರುವ ವಿಷಯ ತಿಳಿದ ಕೂಡಲೇ ಕೋಲಾರದಿಂದ ಕಾರವಾರಕ್ಕೆ ವರ್ಗಾವಣೆಯಾಗಿ ಹೋಗಿದ್ದ ಎಸ್ಪಿ ನಾರಾಯಣ್‌ರವರು ಕಾರ್ಯಪ್ರವೃತ್ತರಾಗಿ ಕರ್ತವ್ಯದ ಜೊತೆಗೆ ತಾವು ಸೇವೆ ಸಲ್ಲಿಸಿದ್ದ ಕೋಲಾರದ ಮೇಲಿನ ಪ್ರೀತಿ ಮತ್ತು ಅಭಿಮಾನವನ್ನು ಕೂಡಿಸಿಕೊಂಡು ಸಮುದ್ರದಲ್ಲಿ ಬಿದ್ದ ಮಕ್ಕಳ ರಕ್ಷಣೆಗೆ ಮತ್ತು ಆಸ್ಪತ್ರೆಗೆ ದಾಖಲಾಗಿದ್ದ ಮಕ್ಕಳಿಗೆ ಚಿಕಿತ್ಸೆ ಹಾಗೂ 39 ಮಕ್ಕಳ ಉಪಚಾರ ಕಾರ್ಯದಲ್ಲಿ ತಾವು ಸ್ವತಃ ತೊಡಗಿಸಿಕೊಂಡರು. ಮಕ್ಕಳೆಲ್ಲರೂ ಕೋಲಾರದ ಕಡೆ ತೆರಳುವವರೆಗೆ ಎಲ್ಲಾ ಉಸ್ತುವಾರಿಯನ್ನು ನೋಡಿಕೊಂಡ ಎಸ್ಪಿ ನಾರಾಯಣ್ ಅವರ ಹೃದಯ ತುಂಬಿದ ಪ್ರೀತಿಗೆ ಕೋಲಾರ ಜಿಲ್ಲೆಯ ಜನತೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.



ಮೃತ ಮಕ್ಕಳಿಗೆ ನಮನ ಸಲ್ಲಿಸುತ್ತಿರುವ ಜಿಲ್ಲಾಧಿಕಾರಿ ಅಕ್ರಂ ಪಾಷ ಹಾಗೂ ಎಸ್ಪಿ ನಿಖಿಲ್

### ಪ್ರಾಂಶುಪಾಲರೊಂದಿಗೆ ಅತಿಥಿ ಶಿಕ್ಷಕರ ಹೊಂದಾಣಿಕೆ ಕೊರತೆ

ಸರ್ಕಾರ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ವಸತಿ ಶಾಲೆಗಳನ್ನು ಆರಂಭಿಸಿ ಅದರ ಮೂಲಕ ಮಕ್ಕಳಿಗೆ ಉಚಿತ ವಸತಿ ನೀಡುವುದರ ಜೊತೆಗೆ ಎಲ್ಲಾ ಬಗೆಯ ಸೌಕರ್ಯಗಳನ್ನು ನೀಡಲಾಗುತ್ತದೆ. ಆದರೆ ವಸತಿ ಶಾಲೆಗಳಲ್ಲಿ ಸಿಬ್ಬಂದಿಯ ನಡುವೆ ಹೊಂದಾಣಿಕೆ ಇಲ್ಲದಿರುವುದು ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಕಾರಣ ಸರ್ಕಾರ ಖಾಯಂ ಸಿಬ್ಬಂದಿಯನ್ನು ನೇಮಕ ಮಾಡದೇ ಹೊರ ಗುತ್ತಿಗೆ ಆಧಾರದ ಮೇಲೆ ಅತಿಥಿ ಶಿಕ್ಷಕರು ಮತ್ತು ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳುತ್ತಿದ್ದು, ಇವರುಗಳು ಶಾಲೆಯ ಪ್ರಾಂಶುಪಾಲರೊಂದಿಗೆ ಸರಿಯಾಗಿ ಸ್ಪಂದಿಸುವುದಿಲ್ಲ ಎಂಬ ಆರೋಪಗಳು ಕೇಳಿ ಬಂದಿರುವುದು ನಿಜ. ಯಾಕೆಂದರೆ ಹೊರ ಗುತ್ತಿಗೆ ಆಧಾರದ ಮೇಲೆ ಅತಿಥಿ ಶಿಕ್ಷಕರಾಗಿ ಬರುವ ಶಿಕ್ಷಕರಿಗೆ ಶಾಲೆಯಿಂದ ಸಂಬಳವಾಗಲಿ ಅಥವಾ ಯಾವುದೇ ಮೂಲ ಸೌಕರ್ಯವಾಗಲಿ ಸಿಗುವುದಿಲ್ಲ. ಇವರಿಗೆ ಗುತ್ತಿಗೆ ತೆಗೆದುಕೊಂಡಿರುವವರು ಸಂಬಳವನ್ನು ಕೊಡುತ್ತಾರೆ. ಇವರು ಕೆಲಸ ಸಮಯಕ್ಕೆ ಸರಿಯಾಗಿ ಶಾಲೆಗೆ ಬಂದು, ಹೇಳುವ ತರಗತಿಗೆ ಹೋಗಿ ಪಾಠ ಮಾಡಿ ಸಂಜೆ ಸರಿಯಾದ ಸಮಯಕ್ಕೆ ಮನೆಗೆ ಹೋಗುತ್ತಾರೆ. ಇವರಿಗೆ ಹೆಚ್ಚಿನ ಸಮಯ ಪಾಠ ಮಾಡಲು ಅನುಮತಿ ಇರುವುದಿಲ್ಲ.


ಮಕ್ಕಳ ಶವಗಳನ್ನು ಪೋಷಕರಿಗೆ ಒಪ್ಪಿಸಿ ಸಾಂತ್ವನ ಹೇಳಿದ ತಹಶೀಲ್ದಾರ್

ಶಾಲೆಗೆ ಅತಿಥಿಗಳಾಗಿ ಬರುವ ಶಿಕ್ಷಕರು ಖಾಯಂ ನೌಕರರ ರೀತಿ ಪ್ರಾಂಶುಪಾಲರ ಮತ್ತು ಕಛೇರಿ ಸಿಬ್ಬಂದಿಯೊಂದಿಗೆ ಹೊಂದಾಣಿಕೆಯಿಂದ ಕೆಲಸ ಮಾಡುವುದಿಲ್ಲ. ಇದರಿಂದ ವಸತಿ ಶಾಲೆಗಳಲ್ಲಿ ಅವಘಡಗಳು ನಡೆದಿವೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಮಾಲೂರು ತಾಲ್ಲೂಕಿಗೆ ಸೇರಿದ ಯಲವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಂದ ಅತಿಥಿ ಶಿಕ್ಷಕರು ಮಲದ ಗುಂಡಿ ಸ್ವಚ್ಛ ಮಾಡಿಸುವ ಮೂಲಕ ಅಮಾನವೀಯವಾಗಿ ನಡೆದುಕೊಂಡಿದ್ದರು. ಇದರ ನಡುವೆ ಡ್ರಾಯಿಂಗ್ ಮಾಸ್ಟರ್ ತನ್ನ ಮೊಬೈಲ್‌ಗಳಲ್ಲಿ 5 ಸಾವಿರ ವಿದ್ಯಾರ್ಥಿನಿಯರ ನಗ್ನ ಫೋಟೋ ಮತ್ತು ವಿಡಿಯೋಗಳನ್ನು ಇಟ್ಟುಕೊಂಡಿದ್ದ ಹಿನ್ನೆಲೆಯಲ್ಲಿ ಆತನ ವಿರುದ್ಧ ಪೋಕ್ಸೋ ಕೇಸು ದಾಖಲಾಗಿದ್ದು, ಪ್ರಾಂಶುಪಾಲರು ಮತ್ತು ಶಿಕ್ಷಕರನ್ನು ಅಮಾನತ್ತು ಮಾಡಲಾಗಿತ್ತು. ಬಂಗಾರಪೇಟೆ ತಾಲ್ಲೂಕು ದೊಡ್ಡ ಪೊನ್ನಾಂಡಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಇಬ್ಬರು ಶಿಕ್ಷಕರು ಜಗಳ ಮಾಡಿಕೊಂಡು, ಕುಡಿಯುವ ನೀರಿಗೆ ವಿಷ ಬೆರೆಸಿದ್ದರು. ಈ ನೀರು ಕುಡಿದ ಮೂವರು ವಿದ್ಯಾರ್ಥಿಗಳು ತೀವ್ರ ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ ನಂತರ ಚೇತರಿಕೆ ಕಂಡಿದ್ದರುಪ. ವೇಮುಗಲ್ ಹೋಬಳಿಯ ಅಮ್ಮ ನಲ್ಲೂರು ಗ್ರಾಮದ ಅಂಬೇಡ್ಕರ್ ವಸತಿ ನಿಲಯದಲ್ಲಿ ಬೆಳಗಿನ ತಿಂಡಿ ತಿಂದಿದ್ದ 18 ವಿದ್ಯಾರ್ಥಿಗಳು ವಾಂತಿ ಮಾಡಿಕೊಂಡು ಅಸ್ವಸ್ಥರಾಗಿದ್ದರು. ಮುಳಬಾಗಿಲು ಕೊತ್ತೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲೆ ಮತ್ತು ಅತಿಥಿ ಶಿಕ್ಷಕರು ಪ್ರವಾಸದಲ್ಲಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳದೇ ಇದ್ದ ಕಾರಣ ನಾಲ್ಕು ಮಕ್ಕಳು ಸಮುದ್ರದಲ್ಲಿ ಮುಳುಗಿ ಸಾಯಲು ಅತಿಥಿ ಶಿಕ್ಷಕರ ಮತ್ತು ಪ್ರಾಂಶುಪಾಲೆಯ ನಡುವೆ ಹೊಂದಾಣಿಕೆ ಕೊರತೆಯಿಂದ ಇಂತಹ ಅವಘಡಗಳು ನಡೆದು ಹೋಗುತ್ತವೆ. ಇಂತಹ ಘಟನೆಗಳು ಮರುಕಳಿಸದಂತೆ ಇಲಾಖೆಯ ಅಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಳ್ಳಬೇಕಾಗಿದೆ. ☯

---

11 ☞

ಸಿಪಿಐ ವಿಶ್ವನಾಥ ಚೌಗಲಾ ಅವರು ಶ್ರೀಮಂತನು ನಿಗೂಢವಾಗಿ ಕೊಲೆಯಾಗಿದ್ದು, ಅದರ ಕುರಿತು ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಚರ್ಚಿಸಿ ಮಹತ್ವದ ನಿರ್ದೇಶನಗಳನ್ನು ಪಡೆದುಕೊಂಡು ಮುಂದಿನ ಕಾರ್ಯಾಚರಣೆಗೆ ಸಿದ್ಧತೆ ಮಾಡಿಕೊಂಡರು. ಶ್ರೀಮಂತನ ಶವವನ್ನು ಮರಣೋತ್ತರ ಪರೀಕ್ಷೆ ಮಾಡಿಸಿ ವಾರಸುದಾರರಿಗೆ ಒಪ್ಪಿಸಿದರು.

### ಸಿಪಿಐ ಚೌಗಲಾ ಚಾಣಾಕ್ಷ ನಡೆ...

ನಿಗೂಢವಾಗಿ ಕೊಲೆಗೀಡಾಗಿದ್ದ ಶ್ರೀಮಂತನ ಬಗ್ಗೆ ಎಲ್ಲಾ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಅಂಗೈಯಲ್ಲಿ ಇರಿಸಿಕೊಂಡಿದ್ದರು. ಕೊಲೆಯ ಪಂಚನಾಮೆ ಸಂದರ್ಭದಲ್ಲಿ ಶ್ರೀಮಂತನ ಹೆಂಡತಿ ಸಾವಿತ್ರಿಯ ಚಲನವಲನ ಅನುಮಾನಸ್ಪದವಾಗಿ ಕಂಡಿತ್ತು. ಆಕೆ ಸುರಿಸುವುದು ಮೊಸಳೆ ಕಣ್ಣೀರು ಎಂದು ಅರಿತುಕೊಂಡಿದ್ದರು. ಸಾವಿತ್ರಿಯ ಹೇಳಿಕೆಗಳು ಕ್ಷಣ... ಕ್ಷಣಕ್ಕೂ ಬದಲಾಗುತ್ತಿದ್ದವು. ಈ ಕುರಿತು ಪಿಎಸ್‌ಐ ಬಸಗೌಡ ನೇರ್ಲಿ ಅವರು ತಮ್ಮ ಸಂದೇಹವನ್ನು ವ್ಯಕ್ತಪಡಿಸಿದ್ದರು. ಶ್ರೀಮಂತ ಕುಡುಕ ಹೌದು. ಆತ ಯಾರೊಂದಿಗೂ ಶತ್ರುತ್ವ ಹೊಂದಿರಲಿಲ್ಲ.


ಕುಡಿದು ಕಿರಿಕ್ ಮಾಡುತ್ತಿದ್ದ ಶ್ರೀಮಂತ ಇಟ್ನಾಳೆ ಶವ ಹೀಗೆ ಬಿದ್ದಿತ್ತು

ಆದರೆ ಆತನ ಹೆಂಡತಿ ಸಾವಿತ್ರಿಯ ನಡತೆ ಮತ್ತು ಅವಳು ಅನೈತಿಕ ಸಂಬಂಧ ಬೇರೆ ಗಂಡಸರೊಂದಿಗೆ ಹೊಂದಿರುವ ಮಾಹಿತಿ ಖಾತ್ರಿಪಡಿಸಿಕೊಂಡು ಸಿಪಿಐ ವಿಶ್ವನಾಥ ಚೌಗಲಾ ಅವರು ಸಾವಿತ್ರಿಗೆ ಠಾಣೆಗೆ ಬರಲು ಸೂಚಿಸಿದ್ದರು. ಆದರೆ ಅವಳು ಪೊಲೀಸರಿಗೆ ಪ್ರಕರಣ ದಿಕ್ಕು ತಪ್ಪಿಸುವ ಕಾಗಕ್ಕ-ಗುಬ್ಬಕ್ಕನ ಕಥೆ ಹೇಳತೊಡಗಿದ್ದಳು.

### ಸಾಹೇಬ್ರ, ಗಂಡನನ್ನು ಕೊಂದೆನ್ರಿ...

ದಿನಾಂಕ 13-12-2024ರದು ಸಂಶಯದ ಆಧಾರದ ಮೇಲೆ ಸಾವಿತ್ರಿ ಇಟ್ನಾಳೆ ಇವಳನ್ನು ಪಿಎಸ್‌ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳು ವಶಕ್ಕೆ ತೆಗೆದುಕೊಂಡು ಸಿಪಿಐ ವಿಶ್ವನಾಥ ಚೌಗಲಾ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಅತ್ಯಂತ ಚಾಣಾಕ್ಷತನದಿಂದ ದಾಳವನ್ನು ಉದುರಿಸಿದಾಗ ಸಾವಿತ್ರಿ ನಿಜ ಹೇಳದೇ ಅನಿವಾರ್ಯವಾಗಿತ್ತು. ಕೊನೆಗೆ ಕೈ ಮುಗಿದು ಕಣ್ಣೀರು ತಂದು 'ಸಾಹೇಬರs ನಾನ ನನ್ನ ಗಂಡನ ಕೊಲೆ ಮಾಡಿ ಆತನ ಶವವನ್ನು ಎರಡು ತುಂಡು ಮಾಡಿ ಕಬ್ಬಿನ ಗದ್ದೆಗೆ ಬೀಸಾಕಿದ್ದೇನೆ. ನಾನು ಏನೂ ಶಿಕ್ಷೆ ಕೊಟ್ಟರೂ ಅನುಭವಿಸ್ತಿನಿ' ಎಂದು ತನ್ನ ತಪ್ಪು ಒಪ್ಪಿಕೊಂಡು ತನ್ನ ಮತ್ತು ಶ್ರೀಮಂತನ ಕುರಿತಾಗಿ ಎಲ್ಲವನ್ನೂ ಗಿಳಿಪಾಠದಂತೆ ಒಪ್ಪಿಸಿದಳು. ಇಲ್ಲಿ ಸಿಪಿಐ ವಿಶ್ವನಾಥ ಚೌಗಲಾ, ಪಿಎಸ್‌ಐ ಬಸಗೌಡ ನೇರ್ಲಿ ಅವರ ಚಾಣಾಕ್ಷ ನಡೆ ಮೆಚ್ಚಲೇಬೇಕು. ಶ್ರೀಮಂತನ ಶವ ಸಿಕ್ಕ ದಿನ ಹೆಚ್ಚುವರಿ ಎಸ್ಪಿ ರಾಮನಗೌಡ ಘಟನಾ ಸ್ಥಳಕ್ಕೆ ಭೇಟಿ ನೀಡಿ ಅವರು ಕೂಡಾ ತನಿಖಾಧಿಕಾರಿ ಚೌಗಲಾ ಅವರಿಗೆ ನಿರ್ದೇಶನ ನೀಡಿದ್ದರು.

### ಹಂತಕಿ ಸಾವಿತ್ರಿ ಬಂಧನ...

ಕುಡುಕ ಗಂಡನ ಕಾಟ ಸಹಿಸಿಕೊಳ್ಳಲಾರದೇ ಕೊಲೆ ಮಾಡಿದ್ದ ಹಂತಕಿ ಸಾವಿತ್ರಿಯನ್ನು ಬಂಧಿಸಿ ಆಕೆ ಕೊಲೆ ಮಾಡಿದ ಸ್ಥಳ, ಶವ ಕತ್ತರಿಸಿದ ಆಯುಧ ಮತ್ತು ಶವ ಬಿಸಾಕಿದ ಸ್ಥಳ ಎಲ್ಲವನ್ನೂ ಪಂಚರ ಸಮಕ್ಷಮ ಪಂಚನಾಮೆ ಸಂದರ್ಭದಲ್ಲಿ ತೋರಿಸಿದ್ದಾಳೆ. ಸಾವಿತ್ರಿಯನ್ನು ಬಂಧಿಸಿ ನ್ಯಾಯಾಧೀಶರ ಆದೇಶದಂತೆ ಜೈಲಿಗಟ್ಟಲಾಗಿದೆ. ಇದೀಗ ಜೈಲಿನಲ್ಲಿ ಕಂಬಿ ಎಣಿಸುತ್ತ ತಂಗಳು ಮುರಿಯುತ್ತಿದ್ದಾಳೆ. ತನಿಖಾಧಿಕಾರಿ ವಿಶ್ವನಾಥ ಚೌಗಲಾ ಅವರಿಗೆ ಪಿಎಸ್‌ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳಾದ ಕಾಶಿನಾಥ ಕಾಂಬಳೆ, ಶಿವಾನಂದ ಬಡಿಗೇರ, ಪರಮೇಶ್ವರ ಗುಡೋಡಗಿ, ಗಜಾನನ ಕಾಂಬಳೆ, ರಾಯಪ್ಪ ಕರಿಗಾರ, ಸಿದ್ದಣ್ಣ ಗಲಗಲಿ, ಮಂತುನಾಥ ಸತ್ತಿಗೇರಿ ಅವರುಗಳು ತನಿಖಾ ಕಾಲಕ್ಕೆ ನೆರವಾಗಿದ್ದಾರೆ. ☯

# ಮೈಸೂರಿನಲ್ಲಿ ಮನೆಯೇ ವೇಶ್ಯಾವಾಟಿಕೆ ಅಡ್ಡೆ!



**ಮೈಸೂರು**

✍ಬಿ.ಎಂ. ಲವಕುಮಾರ್

ಮೈಸೂರಿನಲ್ಲಿ ತಲೆಕೆಡಿಸಿಕೊಂಡು ಪೊಲೀಸರು ಮಾಂಸದ ಮನೆಯ ಬಾಗಿಲನ್ನು ಮುಚ್ಚಿಸಿದರೂ ಕೂಡ ಬೇರೆ ಬೇರೆ ಮಾರ್ಗವನ್ನು ಅನುಸರಿಸುತ್ತಿರುವ ಕೆಲವು ತಲೆಹಿಡುಕರು ತಮ್ಮ ಮನೆಗಳನ್ನೇ ಮಾಂಸದ ಅಡ್ಡೆ



ಮಾಡಿಕೊಂಡು ಕಬಡ್ಡಿ ಆಡಿಸಿ ಹಣವನ್ನು ಪೀಕಿಸುತ್ತಿರುವುದು ಕಂಡು ಬರುತ್ತಿದೆ. ಅದರಲ್ಲೂ ಹೆಂಗಸರೇ ಒಂದಷ್ಟು ಹೆಣ್ಣು ಮಕ್ಕಳನ್ನಿಟ್ಟುಕೊಂಡು ದಂಧೆಗೆ ಇಳಿದಿರುವುದು ಗೊತ್ತಾಗುತ್ತಿದೆ. ಈಗಾಗಲೇ ಇಂತಹ ಚಟುವಟಿಕೆಗಳು ಗುಪ್ತವಾಗಿ ನಡೆಯುತ್ತಿದ್ದರೂ ಯಾರಿಗೂ ಗೊತ್ತೇ ಆಗುತ್ತಿಲ್ಲ. ಆದರೆ ಸುತ್ತಮುತ್ತಲಿನ ಜನಕ್ಕೆ ಮನೆಗೆ ಬಂದು ಹೋಗುವ ಹುಡ್ಗೀರು, ಅವರ ಕಿಲಕಿಲ ನಗು, ಹಾಗೆಯೇ ಕಾರು, ಬೈಕ್‌ನಲ್ಲಿ ಬಂದು ಹೋಗುವ ಗಂಡಸರ ಮೇಲೆ ಸಂಶಯ ಬಂದು ಆ ವಿಚಾರ ಪೊಲೀಸರ ತನಕ ತಲುಪಿದಾಗ ಮಾತ್ರ ದಾಳಿಗಳಾಗುತ್ತಿವೆ.

ಹಾಗೆ ನೋಡಿದರೆ ಮೈಸೂರಿನಲ್ಲಿ ವೇಶ್ಯಾವಾಟಿಕೆ ದಂಧೆ ಇಂದು ನಿನ್ನೆಯದಲ್ಲ. ಅದನ್ನು ಹತ್ತಿಕ್ಕುವುದು ಕೂಡ ಪೊಲೀಸರಿಗೆ ಸಾಧ್ಯವಾಗುತ್ತಿಲ್ಲ. ಪರಿಣಾಮವಾಗಿಯೇ ರಸ್ತೆಗಳಲ್ಲಿ ನಿಂತು ವೇಶ್ಯೆಯರು ಗಿರಾಕಿಗಳನ್ನು ಕರೆಯುತ್ತಾರೆ. ಹುಡುಗಿಯರಿಂದ ಆರಂಭವಾಗಿ ಮುದುಕಿಯರ ತನಕ ದಂಧೆಯಲ್ಲಿ ತೊಡಗಿಸಿಕೊಂಡ ವಿವಿಧ ವಯಸ್ಸಿನ ಹೆಣ್ಣು ಮಕ್ಕಳು ಕಾಣಸಿಗುತ್ತಾರೆ. ರಸ್ತೆಯಲ್ಲಿ ನಿಂತು ಗಿರಾಕಿಗಳನ್ನು ಸೆಳೆದು, ಯಾವುದೋ ಶೆಡ್‌ನಲ್ಲಿ, ಕೊಳಕು ಲಾಡ್ಜ್‌ಗೆ ಕರೆದೊಯ್ದು ಕಬಡ್ಡಿ ಆಡಿದರೆ, ಇನ್ನು ಕೆಲವರು ಮನೆಗಳನ್ನು ಬಾಡಿಗೆಗೆ, ಭೋಗ್ಯಕ್ಕೆ ಪಡೆದು ಅಲ್ಲಿಯೇ ಕಬಡ್ಡಿ ಆಟಕ್ಕೆ ವ್ಯವಸ್ಥೆ ಮಾಡಿ ಕೊಡುತ್ತಿದ್ದಾರೆ. ಇದು ಯಾರಿಗೂ ಗೊತ್ತೇ ಆಗದಂತೆ ನಡೆಯುತ್ತದೆಯಾದರೂ ಇತ್ತೀಚೆಗೆ ಈ ಪ್ರಕರಣ ಹೆಚ್ಚಾಗಿರುವ ಕಾರಣದಿಂದ ಮೇಲಿಂದ ಮೇಲೆ ಪೊಲೀಸರು ಮಾಂಸದ ಮನೆಯ ಬಾಗಿಲನ್ನು ತಟ್ಟಿ ತಲೆಹಿಡುಕರನ್ನು ಜೈಲಿಗೆ ಅಟ್ಟುತ್ತಿದ್ದರೂ ಅವರು ಜಾಮೀನಿನ ಮೇಲೆ ಹೊರ ಬರುತ್ತಿದ್ದು ಮತ್ತೊಂದು ಬಡಾವಣೆಯನ್ನು ಹುಡುಕಿಕೊಂಡು ಮತ್ತೆ ಅದೇ ಮಾಂಸದ ದಂಧೆ ನಡೆಸುತ್ತಿರುವುದು ಮಾಮೂಲಿಯಾಗಿದೆ.



ಮೈಸೂರಿನ ಹೊರವಲಯದಲ್ಲಿ ಹೊಸ ಬಡಾವಣೆಗಳು ತಲೆ ಎತ್ತುತ್ತಿದ್ದು, ಕೆಲವು ಬಡಾವಣೆಗಳಲ್ಲಿ ಅಲ್ಲೊಂದು ಇಲ್ಲೊಂದು ಎಂಬಂತೆ ಮನೆಗಳಾಗುತ್ತಿವೆ. ಈ ಮನೆಗಳಲ್ಲಿ ವಾಸ ಮಾಡಲು ಇಷ್ಟ ಪಡದ ಕೆಲವು ಮಾಲೀಕರು ಅದನ್ನು ಭೋಗ್ಯಕ್ಕೋ, ಬಾಡಿಗೆಗೆ ನೀಡುತ್ತಾರೆ. ಇಂತಹ ಮನೆಗಳನ್ನೇ ಟಾರ್ಗೆಟ್ ಮಾಡಿ ಪಡೆದುಕೊಳ್ಳುವ ಕೆಲವು ತಲೆಹಿಡುಕರು ಬಳಿಕ ಅಲ್ಲಿ ಮಾಂಸದ ದಂಧೆಯನ್ನು ನಡೆಸಲು ಆರಂಭಿಸುತ್ತಾರೆ. ಇಂತಹ ಸ್ಥಳದಲ್ಲಿ ಮಾಂಸದ ದಂಧೆಯನ್ನು ಯಾವುದೇ ಅಡ್ಡಿ ಆತಂಕವಿಲ್ಲದೆ ನಡೆಸಬಹುದು ಎಂಬುದು ತಲೆಹಿಡುಕರಿಗೆ ಚೆನ್ನಾಗಿಯೇ ಗೊತ್ತಿದೆ.

ಕೆಲವರು ತಲೆ ಮಾಸಿದ ಹೆಂಗಸರನ್ನಿಟ್ಟುಕೊಂಡು ಆನ್‌ಲೈನ್ ಮೂಲಕ ಗಿರಾಕಿಗಳನ್ನು ಪರಿಚಯಿಸಿಕೊಂಡು ಅವರನ್ನು ತಮ್ಮ ಮನೆಗೆ ಕರೆಯಿಸಿಕೊಂಡು ಕಬಡ್ಡಿ ಆಡಿಸಿ ಹಣ ಪೀಕಿಸಿಕೊಳ್ಳುತ್ತಾರೆ. ಮತ್ತೆ ಕೆಲವು ಹೆಂಗಸರು ತಾವೇ ಆನ್‌ಲೈನ್‌ನಲ್ಲಿ ವ್ಯವಹಾರ ಮಾಡಿ ಗಿರಾಕಿಯನ್ನು ಮನೆಗೆ ಕರೆಯಿಸಿಕೊಳ್ಳುತ್ತಾರೆ. ಪೊಲೀಸರು ವೇಶ್ಯಾವಾಟಿಕೆ ದಂಧೆಯನ್ನು ಹತ್ತಿಕ್ಕುವ ಸಲುವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೂ ದಂಧೆ ನಡೆಸುವವರು ಅದರಿಂದ ತಪ್ಪಿಸಿಕೊಳ್ಳುವ ತಂತ್ರ ಹುಡುಕಿಕೊಂಡು ದಂಧೆಯನ್ನು ನಿರಾತಂಕವಾಗಿ ನಡೆಸಿಕೊಂಡು ಬರುತ್ತಲೇ ಇದ್ದಾರೆ.



ಮೈಸೂರಿನ ಹೊರವಲಯಗಳಲ್ಲಿ ಅದರಲ್ಲೂ ಪ್ರತಿಷ್ಠಿತ ಬಡಾವಣೆ ಏಷ್ಯಾದಲ್ಲಿಯೇ ಎರಡನೇ ಅತಿದೊಡ್ಡ ಬಡಾವಣೆ ಎಂದು ಕರೆಯಿಸಿಕೊಳ್ಳುತ್ತಿರುವ ವಿಜಯನಗರದ ಸುತ್ತಮುತ್ತ ಇಂತಹ ಪ್ರಕರಣಗಳು ಜಾಸ್ತಿಯಾಗಿವೆ. ಶ್ರೀಮಂತರೇ ಹೆಚ್ಚಿರುವ ಪ್ರದೇಶದಲ್ಲಿ ಎಲ್ಲರೂ ತಮ್ಮ ಪಾಡಿಗೆ ತಾವು ಎಂಬಂತೆ ಇರುತ್ತಾರೆ. ಅದರಲ್ಲೂ 4ನೇ ಹಂತದಲ್ಲಿ ಇನ್ನಷ್ಟೆ ಮನೆಗಳಾಗಬೇಕಿದ್ದು, ಇಲ್ಲಿ ವಿರಳ ಮನೆಗಳಿವೆ. ಅಲ್ಲೊಂದು ಇಲ್ಲೊಂದು ಎಂಬಂತೆ ಮನೆಗಳಿರುವುದರಿಂದ ಯಾರೂ ಕೂಡ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಹೀಗಾಗಿ ಇಲ್ಲಿ ಮನೆಗಳನ್ನು ಪಡೆದುಕೊಂಡು ದಂಧೆ ನಡೆಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ.

ಈ ವ್ಯಾಪ್ತಿಯಲ್ಲಿ ಸಿಸಿಬಿ ಪೊಲೀಸರು ಹಲವಾರು ಪ್ರಕರಣಗಳನ್ನು ಪತ್ತೆಹಚ್ಚಿದ್ದು, ಇಲ್ಲಿ ಮನೆಯಲ್ಲಿಯೇ ದಂಧೆ ನಡೆಸುವುದು ಒಂದೆಡೆಯಾದರೆ ಮತ್ತೊಂದೆಡೆ ಬಾಡಿ ಮಸಾಜ್ ನೆಪದಲ್ಲಿ ವೇಶ್ಯಾವಾಟಿಕೆ ನಡೆಸಲಾಗುತ್ತಿತ್ತು ಎಂಬುದು ಅಷ್ಟೇ ಸತ್ಯ. ಮತ್ತೊಂದೆಡೆ ಆಯುರ್ವೇದಿಕ್ ಬಾಡಿ ಮಸಾಜ್ ಎಂಬ ಬೋರ್ಡ್ ತಗುಲಿಹಾಕಿ ಅದರ ಹಿಂದೆ ನಡೆಯುತ್ತಿದ್ದ ಕರ್ಮಕಾಂಡವನ್ನು ಕೂಡ ಪೊಲೀಸರು ಬಯಲು ಮಾಡಿದ್ದನ್ನು ಸ್ಮರಿಸಿಕೊಳ್ಳಬಹುದು. ವೇಶ್ಯಾವಾಟಿಕೆ ದಂಧೆಯಲ್ಲಿ ಮಹಿಳೆಯರೇ ಭಾಗಿದಾರರಾಗಿದ್ದು, ಗಿರಾಕಿಗಳನ್ನು ಕರೆಯಿಸಿಕೊಂಡು ಅವರಿಗೆ ಹುಡುಗಿಯರನ್ನು ವ್ಯವಸ್ಥೆ ಮಾಡಿ ಕೊಡುತ್ತಿರುವುದು ಬೆಳಕಿಗೆ ಬಂದಿದೆ. ಇಲ್ಲಿಗೆ ಬರುವ ಹೆಂಗಸರು, ಹುಡುಗಿಯರು ಕೂಡ ಪಾರ್ಟ್‌ಟೈಂನವರಾಗಿದ್ದು, ಗಿರಾಕಿಗಳು ಬಂದಾಗ ಅವರು ಬಂದು ಒಂದಷ್ಟು ಹಣವನ್ನು ಪಡೆದುಕೊಂಡು ಹೋಗುವವರಾಗಿದ್ದಾರೆ.



ದಂಧೆ ನಡೆಸುವುದರಲ್ಲಿ, ತಲೆಹಿಡಿಯುವುದರಲ್ಲಿ ಹಲವು ಹೆಂಗಸರ ಹೆಸರುಗಳು ಪೊಲೀಸರ ಫೈಲ್ ನಲ್ಲಿವೆ. ಇವರು ಆಗಾಗ್ಗೆ ಹೆಸರು ಚೇಂಜ್ ಮಾಡಿಕೊಂಡು ನಗರದ ಹೊರವಲಯದಲ್ಲಿ ಮನೆ ಪಡೆಯುವುದರಲ್ಲಿ ನಿಸ್ಸೀಮರಾಗಿದ್ದಾರೆ. ಇವರನ್ನು ಬಿಡಿಸಿಕೊಂಡು ಬರಲು ಜನ ಕೂಡ ಇದ್ದಾರೆ. ಅಷ್ಟೇ ಅಲ್ಲದೆ ಇವರಿಗೆ ಖಾಯಂ ಗ್ರಾಹಕರು ಇರುವುದರಿಂದ ಇವರು ಎಲ್ಲಿಯೇ ದಂಧೆ ನಡೆಸಿದರೂ ಅಲ್ಲಿಗೆ ಬರಲು ಗಿರಾಕಿಗಳು ರೆಡಿಯಿದ್ದಾರೆ. ಹಾಗೆಯೇ ಹೆಂಗಸರು ಬರಲು ತಯಾರಿದ್ದಾರೆ. ಹೀಗಾಗಿಯೇ ಮೇಲ್ನೋಟಕ್ಕೆ ಪತಿವ್ರತೆಯರಂತೆ ಪೋಸ್ ನೀಡಿಯೇ ಒಳಗೊಳಗೆ ವೇಶ್ಯಾವಾಟಿಕೆ ನಡೆಸಿ ಹಣ ಸಂಪಾದಿಸುತ್ತಿದ್ದಾರೆ.

ವಿಜಯನಗರ ಬಡಾವಣೆಗೆ ಒಳ್ಳೆಯ ಹೆಸರಿದೆ. ಆದರೆ ಈ ವ್ಯಾಪ್ತಿಯಲ್ಲಿ ಮೇಲಿಂದ ಮೇಲೆ ವೇಶ್ಯಾವಾಟಿಕೆ ದಂಧೆ ಪ್ರಕರಣಗಳು ಬೆಳಕಿಗೆ ಬರುತ್ತಿರುವುದು ಮಾತ್ರ ಬೇಸರದ ಸಂಗತಿಯಾಗಿದೆ. ದಂಧೆ ನಡೆಸುವವರು ಕೂಡ ಇಂತಹ ಬಡಾವಣೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿ ಶ್ರೀಮಂತರೇ ಹೆಚ್ಚಾಗಿದ್ದು, ಹಲವರಿಗೆ ಇಲ್ಲಿ ಮನೆಯಿದೆಯಾದರೂ ಅವರೆಲ್ಲರೂ ಹೊರಗಡೆಯಿದ್ದಾರೆ. ಯಾವತ್ತಾದರೂ ಬಂದು ಹೋಗುತ್ತಾರೆ. ಹೀಗಾಗಿ ಮಾಲೀಕರಿಗೆ ಯಾಮಾರಿಸಿ ಮನೆ ಪಡೆದು ಅದನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದಾರೆ. ಏಕೆಂದರೆ ಈ ಬಡಾವಣೆಯ ವಾಸಿಗಳು ಅಕ್ಕಪಕ್ಕದವರೊಂದಿಗೆ ಹೆಚ್ಚಾಗಿ ಬೆರೆಯುವುದಿಲ್ಲ. ಸದಾ ತಾವಾಯಿತು ತಮ್ಮ ಕೆಲಸವಾಯಿತು ಎಂಬಂತಿರುತ್ತಾರೆ. ಅವರನ್ನು ಯಾಮಾರಿಸುವುದು ಕೂಡ ಸುಲಭವೇ...

ಇದೀಗ ಪತ್ತೆಯಾಗಿರುವ ಪ್ರಕರಣದ ಕಿಂಗ್ ಪಿನ್ ಉಮಾ... ಈಕೆ ವಿಜಯನಗರದ ಬಸವನಗುಡಿ ವೃತ್ತದ ಬಳಿ ಮನೆಯೊಂದನ್ನು ಮಾಡಿ ಅಲ್ಲಿ ದಂಧೆ ನಡೆಸುತ್ತಿದ್ದಳು. ಈ ಮನೆಯಿದ್ದ ಪ್ರದೇಶದಲ್ಲಿ ಶಾಲೆಯಿತ್ತು. ಅಲ್ಲಿಂದ ಸುಮಾರು ಮುನ್ನೂರು ಮೀಟರ್ ದೂರದಲ್ಲಿ ಪೊಲೀಸ್ ಠಾಣೆಯಿತ್ತು. ಹೀಗಿದ್ದರೂ ಅಲ್ಲಿ ಆಕೆ ರಾಜಾರೋಷವಾಗಿ ದಂಧೆ ನಡೆಸುತ್ತಿದ್ದಳು. ಈಕೆ ವೇಶ್ಯಾವಾಟಿಕೆಗಾಗಿಯೇ ಮೈಸೂರು ಸೇರಿದಂತೆ ಸುತ್ತಮುತ್ತಲಿನ ಮಹಿಳೆಯರನ್ನು ಕರೆಯಿಸಿಕೊಳ್ಳುತ್ತಿದ್ದಳು. ಹಾಗೆಯೇ ಗ್ರಾಹಕರನ್ನು ಕರೆಯಿಸಿಕೊಳ್ಳುತ್ತಿದ್ದಳು.

ಈ ಬಗ್ಗೆ ಒಡನಾಡಿ ಸಂಸ್ಥೆಗೆ ಮಾಹಿತಿ ಬಂದ ಹಿನ್ನಲೆಯಲ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದು ಅದರಂತೆ ವಿಜಯನಗರ ಎಸಿಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ಸರಸ್ವತಿಪುರಂ ಠಾಣೆ ಎಸ್‌ಐ ಲತಾ, ಹೆಬ್ಬಾಳು ಠಾಣೆಯ ಪ್ರವೀಣ್. ಒಡನಾಡಿಯ ಸ್ಟ್ಯಾನ್ಲಿ ಮತ್ತು ಪ್ರದೀಪ್ ಮೊದಲಾದವರು ಸೇರಿ ಡಿಸೆಂಬರ್ 15ರಂದು ಭಾನುವಾರ ಉಮಾ ನಡೆಸುತ್ತಿದ್ದ ಬಸವನಗುಡಿಯ ಮನೆಯ ಮೇಲೆ ದಾಳಿ ಮಾಡಿದ್ದರು. ಈ ಸಂದರ್ಭ ಮನೆಯಲ್ಲಿ ಹಾಸನ, ಮೈಸೂರು ಮತ್ತು ಕೆ.ಆರ್.ನಗರದ ಐವರು ಮಹಿಳೆಯರಿದ್ದು, ಅವರನ್ನು ರಕ್ಷಿಸಿದರೆ, ಗ್ರಾಹಕನಾಗಿ ಬಂದಿದ್ದ ವ್ಯಕ್ತಿ ಮತ್ತು ದಂಧೆಯ ಕಿಂಗ್ ಪಿನ್ ಉಮಾಳನ್ನು ಬಂಧಿಸಲಾಗಿದೆ.

ಇನ್ನು ದಾಳಿ ನಡೆಸಿ ಪರಿಶೀಲಿಸಿದ ವೇಳೆ ಮನೆಯನ್ನು ವೇಶ್ಯಾವಾಟಿಕೆಗೆ ತಕ್ಕಂತೆ ರೂಪುಗೊಳಿಸಿದ್ದರು. ಗ್ರಾಹಕರು ಬಳಸಿದ್ದ ಕಾಂಡೋಮ್‌ನ್ನು ಅವರು ಮನೆಯ ಪ್ರವೇಶ ದ್ವಾರದಲ್ಲಿದ್ದ ತುಳಸಿ ಗಿಡದ ಅಡಿಯಲ್ಲಿ ಮುಚ್ಚಿಟ್ಟಿದ್ದು ಕಂಡು ಬಂದಿತ್ತು. ನಿಜ ಹೇಳಬೇಕೆಂದರೆ ಈ ಮನೆ ಜನವಿರಳ ಪ್ರದೇಶದಲ್ಲಿರದೆ, ಜನನಿಬಿಡ ಪ್ರದೇಶದಲ್ಲಿತ್ತು. ಇಂತಹ ಪ್ರದೇಶದಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದರೂ ಪೊಲಿಸರಿಗಾಗಲೇ ಜನರಿಗಾಗಲೀ ಯಾವುದೇ ಸಂಶಯ ಬಾರದಂತೆ ಇಲ್ಲಿವರೆಗೆ ಉಮಾ ದಂಧೆ ನಡೆಸಿಕೊಂಡು ಬಂದಿದ್ದು ವಿಶೇಷವೇ...

ಇನ್ನಾದರೂ ಪ್ರತಿಷ್ಠಿತ ಬಡಾವಣೆಗಳಲ್ಲಿ ವಾಸ ಮಾಡುವವರು ತಮ್ಮ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರತ್ತ ಗಮನಹರಿಸುವುದು ಒಳಿತು. ನಿಮ್ಮ ಸುತ್ತಮುತ್ತಲೇ ಇಂತಹ ದಂಧೆಗಳು ನಡೆಯುತ್ತಿದ್ದರೂ ಅಚ್ಚರಿಯಿಲ್ಲ, ಇಂಥವರಿಂದ ಇಡೀ ಬಡಾವಣೆಯ ವಾತಾವರಣವನ್ನು ಹಾಳಾಗುವ ಸಾಧ್ಯತೆಯಿದ್ದು, ಸಂಶಯ ಬಂದಲ್ಲಿ ಪೊಲೀಸರಿಗೆ ದೂರು ನೀಡುವುದು ಒಳ್ಳೆಯದು.

**ಮೈಸೂರಿನ ಮನೆಯೊಂದರಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆ ದಂಧೆಯನ್ನು ಒಡನಾಡಿ ಸಂಸ್ಥೆಯ ಸಹಕಾರದಿಂದ ಪತ್ತೆಹಚ್ಚಿರುವ ಪೊಲೀಸರು ವೇಶ್ಯಾವಾಟಿಕೆ ನಡೆಸುತ್ತಿದ್ದ ಮಹಿಳೆ ಸೇರಿ ಗ್ರಾಹಕನೊಬ್ಬನನ್ನು ವಶಕ್ಕೆ ಪಡೆದಿದ್ದಾರೆ. ಉಳಿದಂತೆ ವೇಶ್ಯಾವಾಟಿಕೆಗೆ ಬಳಕೆಯಾಗುತ್ತಿದ್ದ ಮಹಿಳೆಯರನ್ನು ರಕ್ಷಣೆ ಮಾಡಿದ್ದಾರೆ. ಈ ದಂಧೆ ಪ್ರತಿಷ್ಠಿತ ಬಡಾವಣೆಯಲ್ಲಿ ನಡೆಯುತ್ತಿದ್ದು ಇದುವರೆಗೂ ಯಾರ ಗಮನಕ್ಕೆ ಬಾರದಂತೆ ದಂಧೆ ನಡೆಸುತ್ತಿದ್ದದ್ದೇ ವಿಶೇಷ.**

# ಕಚಗುಳಿ

# ಆಡು ಆಟ ಆಡು

ಗ್ರೀನ್‌ಲ್ಯಾಂಡ್ ಲೇಡಿಸ್ ಹಾಸ್ಟೆಲ್!

ನಗರದ ಮುಖ್ಯ ಬಡಾವಣೆಯಲ್ಲಿರುವ ಈ ಹಾಸ್ಟೆಲ್‌ನಲ್ಲಿ ಕಾಲೇಜಿನ ಯುವತಿಯರು ಸೇರಿದ್ದಾರೆ. ಇದು ತುಂಬಾ ಹೈಟೆಕ್ ಹಾಸ್ಟೆಲ್. ಶ್ರೀಮಂತರ ಮನೆ ಮಕ್ಕಳು ಮಾತ್ರ ಇಲ್ಲಿರಲು ಸಾಧ್ಯ ?

ಅಂದು ಭಾನುವಾರ. ಬೆಳಗಿನ ಹತ್ತು ಗಂಟೆ. ಶ್ರೀಮಂತಿಕೆಯ ವೈಭವ ಮತ್ತು ಎಲ್ಲಾ ಅನುಕೂಲಗಳಿರುವ ಈ ಹಾಸ್ಟೆಲ್‌ನಲ್ಲಿ ಎಲ್ಲಾ ಅನುಕೂಲಗಳಿವೆ. ಪ್ರತಿ ಭಾನುವಾರ ಬೆಳಿಗ್ಗೆ ತಿಂಡಿ ತಿಂಡ ಮೇಲೆ ರಾತ್ರಿ ಏಳು ಗಂಟೆಯತನಕ, ಈ ಹಾಸ್ಟೆಲ್ ಹುಡುಗಿಯರು ಸಿಟಿ ತಿರುಗುತ್ತಾರೆ ಮತ್ತು ಸಿನಿಮಾ ನೋಡಿ, ಕೆಲವರು ಪಬ್ ಬಾರ್‌ಗಳಿಗೆ ಹೋಗಿ ಬರುತ್ತಾರೆ.

ಶ್ರೀಮಾಲ ಮತ್ತು ಕಾವ್ಯ ರೂಮೇಟ್ಸ್. ಒಂದೇ ಕಾಲೇಜಿನವರು. ಅವರಿಬ್ಬರು ತುಂಬಾ... ತುಂಬಾ ಕ್ಲೋಸ್ ಆಗಿದ್ದಾರೆ.

ಶ್ರೀಮಾಲ ಬಡಕುಟುಂಬದವಳು. ಆದರೆ ಕಾಲೇಜ್ ಲೈಫ್‌ಅನ್ನು ಎಂಜಾಯ್ ಮಾಡಲು ಈ ಹಾಸ್ಟೆಲ್‌ಗೆ ಸೇರಿದ್ದಾಳೆ. ದುಬಾರಿ ಹಾಸ್ಟೆಲ್ ಫೀಜ್ ಕಟ್ಟಲು ಹಣ ಎಲ್ಲಿಂದ ಬರುತ್ತೆ ?

ಶ್ರೀಮಾಲ ಸ್ಟನ್ನಿಂಗ್ ಬ್ಯುಟಿಡಾಲ್. ಎಂತಹವರನ್ನೇ ಆಗಲಿ ಬೆರಗುಗೊಳಿಸುವಂತಹ ಬಲು ಚಿತ್ತಾಕರ್ಷಕ ರೂಪವತಿ. ಅವಳು ಕಾಲೇಜ್ ಬಾಯ್ ಫ್ರೆಂಡ್‌ಗಳ ಜೊತೆ ಸಲಿಗೆಯಿಂದ ಇರುತ್ತಾಳೆ ಮತ್ತು ತನ್ನ ಮೋಹಕ ನಗು, ಆ ಚೆಲ್ಲಾಟಗಳಿಂದ ಪಡ್ಡೆ ಯುವಕರನ್ನು ಮರುಳು ಮಾಡಿ ಅವರಿಂದ ಹಣ ಪೀಕುತ್ತಾಳೆ. ಅವಳಿಗೆ ಲಕ್ಷಗಳ ಹಣದ ಮೇಲೆ ಆಸೆ ಇದೆ. ಆದರೆ ಲಕ್ಷಗಳನ್ನು ಯಾರು ಕೊಡುತ್ತಾರೆ? ಏನಾದರೂ ಮಾಡಿ ಆಟ ಆಡಿ ತುಂಬಾ ದುಡ್ಡು ಮಾಡಬೇಕು ಎಂಬ ಆಸೆ ಇದೆ. ಅವಕಾಶಕ್ಕಾಗಿ ಕಾಯುತ್ತಿದ್ದಾಳೆ.

ರೂಮೇಟ್... ಕ್ಲಾಸ್‌ಮೇಟ್ ಅಂದರೆ ಗೆಳತಿ ಕಾವ್ಯ ! ಶ್ರೀಮಂತ ಕುಟುಂಬದವಳು. ಶ್ರೀಮಾಲ ಬಾಯ್ ಫ್ರೆಂಡ್‌ಗಳ ಆಟದ ಬಗ್ಗೆ ಗೊತ್ತಿರಲಿಲ್ಲ. ಪ್ರತಿವಾರ ಕಾವ್ಯಳ ತಂದೆ ಕಾರಲ್ಲಿ ಮಗಳನ್ನು ನೋಡಲು ಬರುತ್ತಾರೆ. ಅವಳ ಜೊತೆ ಸಿಟಿ ರೌಂಡ್ ತಿರುಗಾಡಿ, ಅವಳಿಗೆ ಏನು ಬೇಕೋ ಎಲ್ಲಾ ಕೊಡಿಸಿದ ನಂತರ ಹಾಸ್ಟೆಲ್‌ಗೆ ತಲುಪಿಸಿ ನಂತರ ಊರಿಗೆ ಹೋಗುತ್ತಾರೆ.

ಅವರು ಮಗಳನ್ನು ನೋಡಲು ಬಂದಾಗಲೆಲ್ಲಾ ಶ್ರೀಮಾಲ ನಗು ನಗುತ್ತಾ ಅವರ ಜೊತೆ ಮಾತಾಡುತ್ತಾಳೆ.

ಭದ್ರಗಿರಿಗೌಡ. ಪ್ರಾಯ ನಲವತ್ತೈದು. ಕಟ್ಟುಮಸ್ತಾದ ಶರೀರದವರು. ಆರೋಗ್ಯದ ಕಳೆ ಇದೆ. ಅವರು ಮಗಳನ್ನು ನೋಡಲು ಬಂದಾಗಲೆಲ್ಲಾ ಟ್ರಿಮ್ ಆಗಿ ಡ್ರೆಸ್ ಮಾಡಿಕೊಂಡಿರುತ್ತಾರೆ. ಆ ಭಾನುವಾರ ಹಾಸ್ಟೆಲ್‌ಗೆ ಬಂದಾಗ ಹೊರಗೆ ಬಂದವಳು ಶ್ರೀಮಾಲ!

ಪೋಷಕರು ಬಂದರೆ ವಿಸಿಟರ್ಸ್ ರೂಮಲ್ಲಿ ಕುಳಿತಿರಬೇಕು. ಶ್ರೀಮಾಲ ಬಂದು ಅವರ ಪಕ್ಕದಲ್ಲಿ ಕುಳಿತು ''ಅಂಕಲ್... ಕಾವ್ಯ ಈಗ ತಾನೇ ಸ್ನಾನ ಮಾಡಿ ರೆಡಿಯಾಗುತ್ತಿದ್ದಾಳೆ. ಇನ್ನು ಹತ್ತು ನಿಮಿಷಗಳಲ್ಲಿ ಬರುತ್ತಾಳೆ'' ಎಂದು ತುಂಬಾ ಮುದ್ದು, ಮುದ್ದಾಗಿ ಹೇಳಿದಳು.

ಮೀನಿನ ಆಕಾರದ ಹೊಳೆಯುವ ಕಣ್ಣುಗಳ ಕಾಂತಿ. ಬಲು ಮುದ್ದಾದ ಮುಖಧಲ್ಲಿ ವಿಶಿಷ್ಟಪಕಳೆಗಳ ರೀತಿ ಇರುವ ತುಟಿಗಳು ಕನಿರಸದಿಂದ ಮಿಂಚುತ್ತಿವೆ.

ಎತ್ತರವಾದ ಹೆಣ್ಣು ಶ್ರೀಮಾಲ. ಎದೆ ಸೌಂದರ್ಯವೇ ಮುಖ್ಯ ಆಕರ್ಷಣೆ. ಹಾಲಿನ ಕೆನೆಯ ಬಣ್ಣದ ಕಾಂತಿ.

ಅವಳನ್ನು ತುಂಬಾ ಹತ್ತಿರದಿಂದ ನೋಡುತ್ತಿದ್ದರಿಂದ ಭದ್ರಗಿರಿಗೌಡನ ಮೈ ಬಿಸಿಯಾಗಿದೆ ಮತ್ತು ಮನ ಚಂಚಲಗೊಳ್ಳುತ್ತಿದೆ. ಅವಳು ಮುದ್ದು, ಮುದ್ದಾಗಿ ನಗುತ್ತಾ, ತುಟಿಗಳನ್ನು ಕೊಂಕಿಸುತ್ತಾಳೆ.

ಇವರ ಮೈ ಬಿಸಿಯಾಗಿದೆ. ಗೌಡನಿಗೆ ಹೆಂಡತಿ ಇರಲಿಲ್ಲ. ಈ ಲೋಕ ತೊರೆದು ಎರಡು ವರ್ಷಗಳಾಗಿವೆ. ಶ್ರೀಮಾಲ ಇವರಿಗೆ ತುಂಬಾ ಹತ್ತಿರವಾಗಿ ಮೈಗೆ ಮೈ ತಗುಲಿಸುವಷ್ಟು ಸಮೀಪದಲ್ಲಿ ಕುಳಿತು ಮಾತಾಡುತ್ತಿದ್ದಾಳೆ.

ಗೌಡ ಚಂಚಲಗೊಳ್ಳುತ್ತಿದ್ದಾರೆ.

ಆದರೆ ಕಂಟ್ರೋಲ್ ಕಳೆದುಕೊಂಡಿಲ್ಲ. ಇವಳು ಮಗಳ ಗೆಳತಿ ಎಂಬ ಕಾರಣದಿಂದ ಸಹಿಸಿಕೊಂಡಿದ್ದಾರೆ.

''ಶ್ರೀಮಾಲ... ಮಾಲ...''

ಅವಳು ನಗುತ್ತಾ ''ಹೇಳಿ ಅಂಕಲ್.''

''ಇವತ್ತು ನೀನು ನಮ್ಮ ಜೊತೆ ಸಂಡೆ ಸಿಟಿ ರೌಂಡ್‌ಗೆ ಬರಬೇಕು. ನಿನಗೆ ಏನು ಬೇಕಾದರೂ ಕೊಡಿಸುತ್ತೇನೆ.''

ಅವಳು ಮೋಹಕವಾಗಿ ನಗುತ್ತಾ ''ನಾನು ಏನನ್ನೇ ಕೇಳಿದರೂ ಕೊಡಿಸುತ್ತೀರ'' ಎಂದು ಕೇಳುತ್ತಾ ಕಣ್ಣು ಮಿಟುಗಿಸಿ ನಗಾಡಿದಳು.

ಮೈ ಝುಂ ಎಂದಿತು. ವಾಟ್ ಎ ಪ್ಲಸರ್!

ಅವರು ತುಂಬಾ ಮೆಲ್ಲಗೆ ''ಕಾವ್ಯ ಇರುವಾಗ ಅವಳು ಏನು ತೆಗೆದುಕೊಳ್ಳುತ್ತಾಳೋ ಅದನ್ನ ಮಾತ್ರ ತಗೋ.''

ಹೂಂ... ಆಮೇಲೆ...'

''ನೀನು ಕೇಳಿದ್ದನ್ನೆಲ್ಲಾ ನೀನೊಬ್ಬಳೇ ಬಂದಾಗ ಕೊಡಿಸುತ್ತೇನೆ.''

ಅವಳು ಮಾದಕವಾಗಿ ನಕ್ಕಳು. ''ಅಂದರೆ ನನ್ನನ್ನು ನೀವು ಪರ್ಸನಲ್ ಆಗಿ ಮೀಟ್ ಮಾಡ್ತೀರ?''

''ನೀನು ಒಪ್ಪಿಕೊಂಡರೆ ಮಾತ್ರ.''

''ಆಗಲಿ ನಾನು ಆಲೋಚನೆ ಮಾಡಿ ಹೇಳ್ತೀನಿ.''

ಈ ಗೌಡರು ಬಲೆಗೆ ಬಿದ್ದಿದ್ದಾರೆ ಎಂದು ಅರ್ಥವಾಗಿದೆ. ಹೇಳಿದ ಕೂಡಲೇ ಒಪ್ಪಬಾರದು. ಸ್ವಲ್ಪ ಸತಾಯಿಸಬೇಕು ಎಂದು ಈ ರೀತಿ  ಹೇಳಿದ್ದಾಳೆ. ಕಾವ್ಯ ಅಲ್ಲಿಗೆ ಬಂದಳು. ಅವರಿಬ್ಬರು ದೂರಾಗಿದ್ದಾರೆ. ಕಾರಲ್ಲಿ ಕಾವ್ಯಳ ಜೊತೆ ಶ್ರೀಮಾಲ ಸಹ ಬಂದಳು. ಕಾವ್ಯಳಿಗೆ ಗೊತ್ತಾಗದಂತೆ ಆಗಾಗ ಈ ಗೌಡರ ಕಡೆ ನೋಡಿ ಕಿರುನಗೆ ಬೀರುತ್ತಾಳೆ.

ಎಂ.ಜಿ. ರೋಡಲ್ಲಿ ತಿರುಗಾಡಿದರು. ಪರ್ಚೇಸಿಂಗ್ ಮಾಡಿದರು. ಸ್ಟಾರ್ ಹೋಟೆಲ್‌ನಲ್ಲಿ ನಾರ್ತ್ ಇಂಡಿಯನ್ ಊಟ ಮಾಡಿದರು. ಪಾರ್ಸಲ್ ತೆಗೆದುಕೊಂಡರು. ಕಾವ್ಯಳಿಗೆ ಇದು ಇಷ್ಟ ಆಗಿರಲಿಲ್ಲ. ತಂದೆ ಜೊತೆ ಇನ್ನು ಮುಂದೆ ಶ್ರೀಮಾಲಳನ್ನು ಕರೆದುಕೊಂಡು ಹೋಗಬಾರದು ಎಂದು ತೀರ್ಮಾನ ಮಾಡಿದಳು.

●●●

ಶ್ರೀಮಾಲ ಕಾಲೇಜಿನ ಕಾರಿಡಾರ್‌ನಲ್ಲಿ ಬಾಯ್ ಫ್ರೆಂಡ್ ಜೊತೆ ಮಾತಾಡುತ್ತಿರುವಾಗ ಫೋನ್ ಕಾಲ್ ಬಂದಿತು.  ಯಾವುದೋ ಅನ್‌ನೋನ್ ನಂಬರ್.

ಅಟೆಂಡ್ ಮಾಡಿ ಮಾತಾಡಿದಳು.

''ಶ್ರೀಮಾಲ... ನಾನು... ಗೊತ್ತಾಯಿತಾ?'

''ನೀವು ಅಂದ್ರೆ ಯಾರು?''

''ಭದ್ರಗಿರಿಗೌಡ...''

ಅವಳು ರೋಮಾಂಚನಗೊಂಡಳು. ಈ ಚಿಲ್ಲರೆ ಬಾಯ್ ಫ್ರೆಂಡ್‌ನಿಂದ ದೂರ ಸರಿದು ''ಅಂಕಲ್... ನೀವು ಫೋನ್ ಮಾಡಿರೋದು ನನಗೆ ತುಂಬಾ ಸಂತೋಷ ಮತ್ತು ಆಶ್ಚರ್ಯ ಆಗಿದೆ'' ಎಂದು ಮಾದಕ ಧ್ವನಿಯಲ್ಲಿ ಹೇಳಿದಳು.

ಅವರು ''ಹೇಗಿದ್ದೀಯ ಶ್ರೀಮಾಲ.''

''ಪರವಾಗಿಲ್ಲ ಸಾರ್. ಆದರೆ ಯಾಕೋ ತುಂಬಾ ಬೋರ್ ಆಗುತ್ತದೆ.''

''ನಿನ್ನ ಬೇಸರ ಹೋಗಲಾಡಿಸಲು ನಾನು ಇದ್ದೀನಲ್ಲ ಶ್ರೀಮಾಲ!

ಅವಳು ''ಪ್ರೀತಿಯಿಂದ ಮಾಲ ಅಂತ ಕೂಗಿ. ಶ್ರೀ ಬೇಡ.''

''ಆಗಲಿ ಮಾಲ.''

''ನನ್ನ ಫೋನ್ ನಂಬರ್ ಹೇಗೆ ಸಿಕ್ತು ?''

''ನನ್ನ ಮಗಳ ಮೊಬೈಲ್‌ನಿಂದ ಅವಳಿಗೆ ಗೊತ್ತಾಗದ ರೀತಿ ತಗೊಂಡೆ.

ಅವಳು ನಗುತ್ತಾ ''ಆಹಾ... ತುಂಬಾ ಕಿಲಾಡಿಗಳು ನೀವು'' ಎಂದಳು.

''ನೀವು ಎಲ್ಲಿದ್ದೀಯ ಮಾಲ?''

''ಕಾಲೇಜಿನಲ್ಲಿ ಅಂಕಲ್?''

''ನಾನು ಬೆಂಗಳೂರಿಗೆ ಬಂದಿದ್ದೀನಿ.''

''ಓ... ಗುಡ್... ಗುಡ್.''

''ಮೀಟ್ ಮಾಡಲು ಆಗುತ್ತಾ ?''

''ನಿಮ್ಮ ಮಗಳು ನೋಡಿದರೆ ನಮ್ಮಿಬ್ಬರ ಬಗ್ಗೆ ತಪ್ಪು ತಿಳಿಯುತ್ತಾಳೆ.''

''ಅವಳಿಗೆ ತಿಳಿಯೋದು ಬೇಡ.''

''ಓಕೆ ಬರ್ತೀನಿ ಅಂಕಲ್.''

ಅವರಿಬ್ಬರು ಎಲ್ಲಿಗೆ ಬರಬೇಕು, ಸಂಜೆತನಕ ಪ್ರೋಗ್ರಾಂ ಏನು ಎಂಬುದರ ಬಗ್ಗೆ ಮಾತಾಡಿಕೊಂಡರು. ಸಿಟಿ ರೌಂಡ್ ತಿರುಗುತ್ತಲೇ ಅವರು ಶಾಪಿಂಗ್ ಮಾಡಿದರು.

ಕಿಲಾಡಿ ಚೆಲುವೆ ಮಾಲ. ಬಲು ಮುದ್ದು, ಮುದ್ದಾಗಿ, ಮಾದಕವಾಗಿ ನಗುತ್ತಾ ತನಗೆ ಏನೇನು ಬೇಕು ಎಲ್ಲರನ್ನೂ ತೆಗೆಸಿಕೊಂಡಳು. ಅವರಿಗೆ ಖುಷಿ ಆಗಲಿ ಅಂತ ಮೈ ತಗುಲಿಸಿದಳು. ಆಕಸ್ಮಿಕ ಎಂಬಂತೆ ಅವರ ಕೈ ಮೇಲೆ ಕೈ ಹಾಕಿ ಒತ್ತಿದಳು. ಮುಖದ ಹತ್ತಿರ ಮುಖ ತಂದು, ಕಣ್ಣುಗಳನ್ನು ಪಿಳಿ ಪಿಳಿ ಆಡಿಸುತ್ತಾ ಮಾತಾಡಿದ್ದಳು. ಬಲು ಮೋಹಕವಾಗಿ ನಗುತ್ತಾ ಅವರನ್ನು ಉತ್ತೇಜಿಸಿದ್ದಳು.

ನಾಲ್ಕು ದಿನಗಳಾಯಿತು. ಭದ್ರಗಿರಿಗೌಡ ಫೋನ್ ಮಾಡಿದರು. ಅವಳು ಪ್ರಚೋದನೆ ಉಂಟು ಮಾಡುವ ರೀತಿ ನಗುತ್ತಾ ''ಅಂಕಲ್... ಬೆಂಗಳೂರಿಗೆ ಬಂದಿದ್ದೀರ ಅಲ್ವಾ? ನನ್ನನ್ನು ಮೀಟ್ ಮಾಡಬೇಕು ಅಂತ ಆಸೆ ಆಗುತ್ತಿದೆ ಅಲ್ವ ಗೌಡ್ರೆ. ಅದಕ್ಕೆ ಫೋನ್ ಮಾಡಿದ್ದೀರ ಅಲ್ವ ?''

ಅವರು ತಡಬಡಿಸುತ್ತಾ ''ಅದು... ಅದು...'' ಎಂದು ತಡವರಿಸಿದರು.

''ನನಗೆ ಅರ್ಥವಾಗಿದೆ ಬಿಡಿ.''

''ಗೆಲಾಕ್ಸಿ ಹತ್ತಿರ ಬರ್ತೀಯ?''

''ಆಟೋದಲ್ಲಿ ಬರಬೇಕು.''

''ಯಾಕೆ ಆಗೋಲ್ವ?''

''ನೀವೇ ಹತ್ತಿರದ ಸರ್ಕಲ್‌ಗೆ ಬಂದು ಪಿಕಪ್ ಮಾಡ್ತೀರ?''

''ಆಗಲಿ ಮಾಲ.''

ತುಂಬಾ ಬೆಲೆಬಾಳುವಂತ ವಸ್ತುಗಳನ್ನು ತೆಗೆದುಕೊಂಡಳು. ಅವರ ಕೈ ಹಿಡಿದು ಸವರುತ್ತಾ ''ಅಂಕಲ್... ನನಗೆ ಸ್ವಲ್ಪ ಹಣದ ಪ್ರಾಬಂಲ ಆಗಿದೆ'' ಎಂದಳು.

''ಸಂಕೋಚ ಬೇಡ ಕೇಳು.''

''ಇಪ್ಪತ್ತೈದು ಸಾವಿರ ಬೇಕು.''

''ಆಗಲಿ ಕೊಡ್ತೀನಿ.''

●●●

ಇದೇ ರೀತಿ, ಆಗಾಗ ಶ್ರೀಮಾಲ ಮತ್ತು ಗೌಡರು ಭೇಟಿ ಮಾಡುತ್ತಿದ್ದರು. ಸದಾಕಾಲ ಇದು ಗುಟ್ಟಾಗಿರಲು ಸಾಧ್ಯವೆ? ಕಾಲೇಜಿನ ಗೆಳತಿಯರಲ್ಲಿ ಯಾರೋ ಇವರಿಬ್ಬರನ್ನು ನೋಡಿ ಕಾವ್ಯಳಿಗೆ ಫೋನ್ ಮಾಡಿ ಹೇಳಿದ್ದರು.

ಕೆರಳಿಬಿಟ್ಟಳು ಕಾವ್ಯ ! ಶ್ರೀಮಾಲ ಹಾಸ್ಟೆಲ್‌ಗೆ ಬಂದ ಕೂಡಲೇ ಅವಳ ಜೊತೆ ಜಗಳ ಆಡಿದಳು ಮತ್ತು ಬಾಯಿಗೆ ಬಂದಂತೆ ಬೈದಳು. ಆದರೆ ಭದ್ರಗಿರಿಗೌಡ ಅವರು ತುಂಬಾ ಬುದ್ದಿವಂತಿಕೆಯಿಂದ ಮಗಳ ಪ್ರಶ್ನೆಗಳಿಗೆ ಉತ್ತರ ನೀಡಿ ಸಮಾಧಾನ ಮಾಡಿದ್ದರು ಮತ್ತು ಇನ್ನು ಮುಂದೆ ತುಂಬಾ ಎಚ್ಚರಿಕೆಯಿಂದ ಇರಲು ಅವಳಿಗೆ ಹೇಳಿದರು.

●●●

''ಅಂಕಲ್... ಗುಡ್ ನ್ಯೂಸ್.''

''ಹೇಳು ಶ್ರೀಮಾಲ.''

''ಅಂಕಲ್... ನಾಳೆ ನನ್ನ ಬರ್ತ್‌ಡೇ ಇದೆ. ನೀವೇ ಡಿಫರೆಂಟ್ ಆಗಿ ಮಾಡಬೇಕು.''

''ಯಾವ ರೀತಿ ಮಾಲ?''

''ನಾವಿಬ್ಬರೇ ಇರಬೇಕು ಮತ್ತು ನೀವು ನನ್ನ ಜೊತೆ ರಾತ್ರಿ ಪೂರ್ತಿ ಇರಬೇಕು.''

ಅವರು ಪುಳುಕಗೊಂಡರು.

''ಬರ್ತ್‌ಡೇ ಪಾರ್ಟಿಗೆ ನಾನು ಅರೇಂಜ್ ಮಾಡ್ತೀನಿ.''

''ನಮ್ಮ ಫಾರಂ ಹೌಸ್‌ನಲ್ಲಿ ಮಾಡೋಣ.''

''ಅಲ್ಲಿ ಯಾರೂ ಇರೋಲ್ವ?''

''ಇರೋಲ್ಲ ಮಾಲ.''

''ಹಾಗಾದರೆ ನಮ್ಮಿಬ್ಬರ ಪ್ರೈವೇಸಿಗೆ ತುಂಬಾ ಅನುಕೂಲ ಆಗುತ್ತೆ.''

ಅವರ ಮೈ ಬಿಸಿಯಾಗುತ್ತಿದೆ.

''ಒಂದು ರಿಕ್ವೆಸ್ಟ್ ಅಂಕಲ್.''

''ಹೇಳು ಮಾಲ.''

''ಹಳ್ಳಿಯಲ್ಲಿರುವ ನನ್ನ ತಾತನಿಗೆ ಹಾರ್ಟ್ ಪ್ರಾಬ್ಲಂ ಇದೆ. ಆಪರೇಷನ್ ಮಾಡಿಸಬೇಕು. ಮೂರು ಲಕ್ಷ ರೂಪಾಯಿ ಕ್ಯಾಶ್ ಬೇಕು. ಬರ್ತ್‌ಡೇ ಗಿಫ್ಟ್ ಅಂತ ಕೊಡಲು ಸಾಧ್ಯ ?ವೆ?''

''ಖಂಡಿತಾ ಕೊಡ್ತೀನಿ. ಆದರೆ...''

''ಆದರೇನು ಅಂಕಲ್.''

''ನೀನು ನನಗೇನು ಕೊಡ್ತೀಯ?''

''ಬರ್ತ್‌ಡೇ ಮುಗಿದ ಮೇಲೆ ರಾತ್ರಿ ಪೂರ್ತಿ ನಿಮ್ಮ ಜೊತೆ ಇರ್ತೀನಿ. ನನ್ನ ಹತ್ತಿರ ಇರೋದನ್ನೆಲ್ಲಾ ಕೊಡ್ತೀನಿ.''

ಅವರು ರೋಮಾಂಚನಗೊಳ್ಳುತ್ತಾ ''ತುಂಬಾ ಗ್ಲಾಮರಸ್ ಆಗಿ ರೆಡಿಯಾಗಿ ಬರಬೇಕು'' ಎಂದು ನಗಾಡಿದರು.

''ನಿಮ್ಮ ಕಣ್ಣುಗಳಿಗೆ ಹಬ್ಬ ಮಾಡ್ತೀನಿ.''

●●●

ಲಕ್ಷಗಳ ಲೆಕ್ಕದಲ್ಲಿ ಹಣ ವಸೂಲಿ ಮಾಡುತ್ತಾ ಎಂಟು ಸಲ ಸೇರಿ ಸುಖ ಅನುಭವಿಸಿದ್ದರು.

ಫೋನ್ ಕಾಲ್ ಬಂದಿತು. ಭದ್ರಗಿರಿಗೌಡ ''ಹೇಳು ಮೈ ಡಿಯರ್ ಮಾಲ'' ಎಂದರು.

''ನಿಮಗೊಂದು ಗುಡ್‌ನ್ಯೂಸ್. ನೀವು ಮತ್ತೊಂದು ಮಗುವಿನ ತಂದೆ ಆಗುತ್ತಿದ್ದೀರ. ನಾನು ಈಗ ಪ್ರೆಗ್ನೆಂಟ್ ಆಗಿದ್ದೀನಿ.''

ಅವರಿಂದ ಪ್ರತಿಕ್ರಿಯೆ ಬರಲಿಲ್ಲ.

''ಯಾಕೆ ಮಾತಾಡುತ್ತಿಲ್ಲ. ನಾವಿಬ್ಬರು ಬೇಗ ಮದುವೆ ಆಗಬೇಕು.''

''ಮದುವೆನಾ... ಇಂಪಾಸಿಬಲ್.''

''ನನ್ನ ಸೌಂದರ್ಯ ಅನುಭವಿಸಿದ್ದೀರ. ಈಗ ಈ ರೀತಿ ಮಾತಾಡಬಾರದು.''

ಗೌಡರು ಗಂಭೀರವಾಗಿ ''ಪ್ರತಿ ಸಲ ನಿನ್ನನ್ನು ಸೇರುವಾಗ ಲಕ್ಷಣಗಳ ಲೆಕ್ಕದಲ್ಲಿ ಹಣ ಕೊಟ್ಟಿದ್ದೀನಿ'' ಎಂದರು.

''ಹಾಗಾದರೆ ಮದುವೆ ಆಗೋಲ್ವ?''

''ಖಂಡಿತಾ ಆಗೋಲ್ಲ.''

''ಹಾಗಾದರೆ ನೀವು ಐವತ್ತು ಲಕ್ಷ ರೂಪಾಯಿ ಪರಿಹಾರ ಕೊಡಬೇಕು.''

''ಕೊಡದಿದ್ದರೆ ಏನು ಮಾಡ್ತೀಯ?''

''ನಮ್ಮಿಬ್ಬರ ಸಂಬಂಧ ಬಹಿರಂಗ ಆಗುತ್ತೆ. ನನ್ನ ಬಸುರಿಗೆ ನೀವೇ ಕಾರಣ ಅಂತ ಮೆಡಿಕಲ್ ವೇ ಪ್ರಕಾರ ಕೋರ್ಟಲ್ಲಿ ಪ್ರೂವ್ ಮಾಡ್ತೀನಿ.''

''ಧಾರಾಳವಾಗಿ ಟ್ರೈ ಮಾಡು. ನಾನೂ ಸಹ ಮೆಡಿಕಲ್ ವೇನಲ್ಲಿ ಉತ್ತರ ಕೊಡ್ತೀನಿ.''

''ನೀವು ಏನು ಹೇಳುತ್ತಿದ್ದೀರ?''

''ನನ್ನ ಮಗಳು ಹುಟ್ಟಿದ ಮೇಲೆ ನಾನು ಆಪರೇಷನ್ ಮಾಡಿಸಿಕೊಂಡೆ. ಇದನ್ನು ನಾನು ಕೋರ್ಟಲ್ಲಿ ಪ್ರೂವ್ ಮಾಡ್ತೀನಿ. ನಿನಗೆ ತುಂಬಾ ಬಾಯ್ ಫ್ರೆಂಡ್ಸ್ ಇದ್ದಾರೆ. ಅವರಲ್ಲೇ ಯಾರೋ ಒಬ್ಬರು ಕಾರಣ ಆಗಿರಬೇಕು. ನಿಜವಾಗಿ ಬಸುರಿ ಆಗಿದ್ದರೆ ಅಭಾರ್ಷನ್ ಮಾಡಿಸಿಕೊಂಡು ಸೈಲೆಂಟ್ ಆಗಿ ಇದ್ದುಬಿಡು. ಇಲ್ಲದಿದ್ದರೆ ಎಲ್ಲರ ಎದುರಿಗೆ ನಿನ್ನ ಶೀಲದ ವಿಚಾರದಲ್ಲಿ ಪ್ರಶ್ನೆಯಾಗಿ ನಿಲ್ಲುತ್ತದೆ'' ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದರು.

ಶ್ರೀಮಾಲಾಳಿಗೆ ಶಾಕ್ ಆಗಿದೆ ಮತ್ತು ತುಂಬಾ ನಿರಾಸೆ ಆಗಿದೆ.




# ದಿನಕರ್ ತೂಗುದೀಪ ನಿರ್ದೇಶನದ 'ರಾಯಲ್'

ಆರು ವರ್ಷಗಳ ಬ್ರೇಕ್ ಬಳಿಕ ನಿರ್ದೇಶಕ ದಿನಕರ್‌ತೂಗುದೀಪ ಅವರು ರಾಯಲ್ ಚಿತ್ರದ ಮೂಲಕ ಸ್ಯಾಂಡಲ್‌ವುಡ್ ವಾಪಸ್ಸಾಗುತ್ತಿದ್ದು, ಚಿತ್ರವು 2025ರ ಜನವರಿ 24 ರಂದು ತೆರೆಗೆ ಬರಲು ಸಜ್ಜಾಗಿದೆ. ಜಯಣ್ಣ ಫಿಲಂಸ್ ರಾಯಲ್ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಚಿತ್ರಕ್ಕೆ ಚರಣ್‌ರಾಜ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಈಗಾಗೇ ಚಿತ್ರದ 'ಲಾ ಓ ಮೇರಿ ಲೈಲಾ' ಹಾಡು ವೈರಲ್ ಆಗಿದ್ದು, ಪ್ರೇಕ್ಷಕರ ಗಮನ ಸೆಳೆದಿದೆ.

ಯೂತ್‌ಫುಲ್ ಕಮರ್ಷಿಯಲ್ ಎಂಟರ್ಟೈನರ್ ಚಿತ್ರ ಇದಾಗಿದ್ದು, ಭಾವನಾತ್ಮಕತೆ, ಹಾಸ್ಯ ಮತ್ತು ಆ್ಯಕ್ಷನ್‌ಗಳ ಮಿಶ್ರಣ ಹಾಗೂ ಸಂದೇಶವನ್ನು ಒಳಗೊಂಡಿದೆ. ಚಿತ್ರದ ನಾಯಕನಾಗಿ ವಿರಾಟ್ ಅಭಿನಯಿಸಿದ್ದು, ವಿರಾಟ್‌ಗೆ ಜೋಡಿಯಾಗಿ ಸಂಜನಾ ಆನಂದ್ ಕಾಣಿಸಿಕೊಂಡಿದ್ದಾರೆ. ಇನ್ನುಳಿದಂತೆ ರಘು ಮುಖರ್ಜಿ, ಛಾಯಾ ಸಿಂಗ್, ಅಚ್ಯುತ್‌ಕುಮಾರ್, ರಂಗಾಯಣ ರಘು, ಪ್ರಮೋದ್ ಶೆಟ್ಟಿ ಅಭಿಲಾಷ್, ಮತ್ತು ಗೌರವ್ ಶೆಟ್ಟಿ ಮುಂತಾದ ತಾರಾಬಳಗ ಚಿತ್ರಕ್ಕಿದೆ. ಚಿತ್ರದ ಛಾಯಾಗ್ರಹಣವನ್ನು ಸಂಕೇತ್ ಮೈಸೂರು ನಿರ್ವಹಿಸಿದ್ದಾರೆ.

ಕಿಸ್ ಚಿತ್ರದಲ್ಲಿ ನಟಿಸಿದ್ದ ವಿರಾಟ್ ಅವರಿಗೆ ರಾಯಲ್ ಎರಡನೇ ಚಿತ್ರವಾಗಿದೆ. ಇನ್ನು ತೆಲುಗು ಸಿನಿಮಾಗಳಲ್ಲಿ ಬಿಝಿಯಾಗಿದ್ದ ಸಂಜನಾ ಅವರು ವಿಂಡೋಸೀಟ್ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ವಾಪಸ್ಸಾಗಿದ್ದು, ರಾಯಲ್ ಚಿತ್ರದಲ್ಲಿ ನಟಿಸಿದ್ದಾರೆ.

# ರಣಬೀರ್-ಯಶ್ 'ರಾಮಾಯಣ' ಚಿತ್ರಕ್ಕೆ ಹನುಮಂತ ಸಿಕ್ಕಿಬಿಟ್ಟ!



ರಾಕಿಂಗ್ ಸ್ಟಾರ್ ಯಶ್ ಈಗಾಗಲೇ ಬಾಲಿವುಡ್ ಪ್ರೇಕ್ಷಕರಿಗೆ ಪರಿಚಿತರಾಗಿಬಿಟ್ಟಿದ್ದಾರೆ. ಇದೀಗ 'ರಾಮಾಯಣ' ಚಿತ್ರದಲ್ಲಿ ರಾವಣನಾಗಿ ಬಾಲಿವುಡ್ ಅಂಗಳಕ್ಕೆ ಅಧಿಕೃತವಾಗಿ ಕಾಲಿಡುತ್ತಿದ್ದಾರೆ. ಎರಡು ಭಾಗಗಳಾಗಿ ಚಿತ್ರ ತೆರೆಗೆ ಬರಲಿದೆ. ಘಟಾನುಘಟಿ ಕಲಾವಿದರು ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಶ್ರೀರಾಮನಾಗಿ ರಣಬೀರ್ ಕಪೂರ್ ಹಾಗೂ ಸೀತಾಮಾತೆಯಲ್ಲಿ ಸಾಯಿಪಲ್ಲವಿ ನಟಿಸುತ್ತಿದ್ದಾರೆ. ಈಗಾಗಲೇ ಮೊದಲ ಭಾಗದ ಬಹುತೇಕ ಚಿತ್ರೀಕರಣ ಪೂರ್ಣವಾಗಿದೆ. ಶೀಘ್ರದಲ್ಲೇ ಎರಡನೇ ಭಾಗ ಸೆರೆ ಹಿಡಿಯಲು ಚಿತ್ರತಂಡ ಮುಂದಾಗಿದೆ. ಪಾರ್ಟ್-1ನಲ್ಲಿ ರಾವಣನ ಪಾತ್ರ ಚಿಕ್ಕದಾಗಿ ಇರುತ್ತದೆ. ಎರಡನೇ ಭಾಗದಲ್ಲಿ ಯಶ್ ಆರ್ಭಟ ಜೋರಾಗಿ ಇರುತ್ತದೆ ಎನ್ನಲಾಗ್ತಿದೆ.

ನಿತೇಶ್ ತಿವಾರಿ ರಾಮಾಯಣ ಕಾವ್ಯವನ್ನು ತೆರೆಗೆ ತರುವ ಪ್ರಯತ್ನ ಮಾಡುತ್ತಾರೆ. ಈಗಾಗಲೇ ಸಾಕಷ್ಟು ಬಾರಿ ರಾಮಾಯಣ ಕಾವ್ಯವನ್ನು ಕಟ್ಟಿಕೊಟ್ಟಿದ್ದರೂ ಮತ್ತೊಮ್ಮೆ ಹೊಸ ರೂಪದಲ್ಲಿ ಕಥೆ ಪ್ರೇಕ್ಷಕರ ಮುಂದೆ ಬರಲಿದೆ. ಇವತ್ತಿನ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಸಿನಿಮಾ ರೂಪ ತಳೆಯುತ್ತಿದೆ.



'ರಾಮಾಯಣ' ಚಿತ್ರದಲ್ಲಿ ಹನುಮಂತನಾಗಿ ಸನ್ನಿ ಡಿಯೋಲ್ ನಟಿಸುತ್ತಾರೆ ಎನ್ನುವ ಮಾತುಗಳು ಕೇಳಿಬರ್ತಿದೆ. ಇದೀಗ ಸ್ವತಃ ಸನ್ನಿ ಈ ವಿಚಾರವನ್ನು ಖಚಿತಪಡಿಸಿದ್ದಾರೆ. ಮೊದಲ ಭಾಗದ ಚಿತ್ರೀಕರಣ ಮುಗಿಸಿರುವುದಾಗಿ ಹೇಳಿದ್ದಾರೆ. ಸಂದರ್ಶನವೊಂದರಲ್ಲಿ ಸನ್ನಿ ಡಿಯೋಲ್ ರಾಮಾಯಣ ಚಿತ್ರದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ್ದಾರೆ. ಹೊಸ ರೀತಿಯಲ್ಲಿ ಸಿನಿಮಾ ತೆರೆಗೆ ಬರ್ತಿದೆ ಎಂದು ವಿವರಿಸಿದ್ದಾರೆ.

ರಾಮಾಯಣ ಬಹಳ ದೀರ್ಘವಾದ ಪ್ರಾಜೆಕ್ಟ್, ಕಾರಣ ಅವರು 'ಅವತಾರ್' ಹಾಗೂ 'ಪ್ಲಾನೆಟ್ ಆಫ್ ಏಪ್ಸ್' ರೀತಿಯಲ್ಲಿ ಚಿತ್ರವನ್ನು ಕಟ್ಟಿಕೊಡುತ್ತಿದ್ದಾರೆ. ಆ ತಂತ್ರಜ್ಞರೆಲ್ಲಾ ಈ ಚಿತ್ರಕ್ಕೆ ಕೆಲಸ ಮಾಡುತ್ತಿದ್ದಾರೆ. ನಿರ್ದೇಶಕರಿಗೆ ಸಿನಿಮಾ ಹೇಗಿರಬೇಕು, ಪಾತ್ರಗಳು ಹೇಗಿರಬೇಕು ಎಂಬ ಸ್ಪಷ್ಟನೆ ಇದೆ ಎಂದು ಸನ್ನಿ ಡಿಯೋಲ್ ಹೇಳಿದ್ದಾರೆ.

ಇತ್ತೀಚೆಗೆ ಕೆಲ ಪೌರಾಣಿಕ ಹಾಗೂ ಐತಿಹಾಸಿಕ ಸಿನಿಮಾಗಳಲ್ಲಿ ಪಾತ್ರಗಳನ್ನು ವಿಭಿನ್ನವಾಗಿ ಚಿತ್ರಿಸುವ ಪ್ರಯತ್ನ ನಡೆದಿತ್ತು. ಮುಖ್ಯವಾಗಿ ಓಂ ರಾವುತ್ ನಿರ್ದೇಶನದ 'ಆದಿ ಪುರುಷ್' ಸಿನಿಮಾ ಬಹಳ ಟೀಕೆಗೆ ಗುರಿಯಾಗಿತ್ತು. ಸನ್ನಿ ಡಿಯೋಲ್ ಪರೋಕ್ಷವಾಗಿ ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ರಾಮಾಯಣ ಚಿತ್ರದಲ್ಲಿ ಸ್ಪೆಷಲ್ ಎಫೆಕ್ಟ್ಸ್ ಇರುತ್ತದೆ. ಆದರೆ ಅದು ಬಹಳ ನೈಜವಾಗಿರುತ್ತದೆ. ನಿಜಕ್ಕೂ ಹೇಳ್ತೀನಿ ಈ ಸಿನಿಮಾ ಅದ್ಭುತವಾಗಿ ಇರಲಿದ್ದು ಎಲ್ಲರೂ ಇಷ್ಟಪಡುತ್ತಾರೆ ಎಂದು ಸನ್ನಿ ಡಿಯೋಲ್ ಹೇಳಿದ್ದಾರೆ. ತಾವು ಹನುಮಂತನ ಪಾತ್ರ ಮಾಡಿರುವ ಬಗ್ಗೆ ಸನ್ನಿ ಡಿಯೋಲ್ ಮಾತನಾಡಿಲ್ಲ, ಆದರೆ ಅದೇ ಪಾತ್ರದಲ್ಲಿ ಅವರು ನಟಿಸಿದ್ದಾರೆ ಎನ್ನಲಾಗ್ತಿದೆ. ಶೀಘ್ರದಲ್ಲೇ ಈ ಬಗ್ಗೆ ಅಧಿಕೃತ ಮಾಹಿತಿ ಸಿಗಲಿದೆ. ಇನ್ನು ರಾವಣನಾಗಿ ನಟಿಸುವುದರ ಜೊತೆಗೆ ಯಶ್ ಚಿತ್ರಕ್ಕೆ ಹಣ ಹೂಡಿದ್ದಾರೆ. ಈ ಮೂಲಕ ಬಾಲಿವುಡ್‌ನಲ್ಲಿ ದೊಡ್ಡದಾಗಿ ಯಶ್ ಅಡಿ ಇಟ್ಟಿದ್ದಾರೆ.

'ರಾಮಾಯಣ' ಚಿತ್ರದಲ್ಲಿ ಯಾರೆಲ್ಲಾ ನಟಿಸುತ್ತಿದ್ದಾರೆ ಎನ್ನುವ ಬಗ್ಗೆ ಬಹಳ ಚರ್ಚೆ ನಡೀತಿದೆ. ಕೈಕೇಯಿ ಆಗಿ ಲಾರಾ ದತ್ತ, ಮಂಥರೆ ಆಗಿ ಶೀಬಾ ಚಡ್ಡಾ, ಲಕ್ಷ್ಮಣನಾಗಿ ರವಿ ದುಬೆ, ಕೌಸಲ್ಯೆ ಆಗಿ ಇಂದ್ರ ಕೃಷ್ಣನ್, ದಶರಥನಾಗಿ ಅರುಣ್ ಗೋವಿಲ್, ಇಂದ್ರದೇವನಾಗಿ ಕುನಾಲ್ ಕಪೂರ್, ಶೂರ್ಪನಖಿಯಾಗಿ ರಕುಲ್ ಪ್ರೀತ್ಸಿಂಗ್ ನಟಿಸುತ್ತಿದ್ದಾರೆ ಎನ್ನಲಾಗ್ತಿದೆ.

2026ರ ದೀಪಾವಳಿ ಸಂಭ್ರಮದಲ್ಲಿ 'ರಾಮಾಯಣ' ಪಾರ್ಟ್-1 ತೆರೆಗೆ ಬರಲಿದೆ. ಬಳಿಕ 2027ರ ದೀಪಾವಳಿಗೆ ಪಾರ್ಟ್-2 ಬಿಡುಗಡೆ ಆಗಲಿದೆ. ಇನ್ನು ರಣಬೀರ್ ಕಪೂರ್ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಮಾತನಾಡಿದ್ದರು. ಫಸ್ಟ್ ಪಾರ್ಟ್ ಚಿತ್ರೀಕರಣ ಮುಗಿಸಿದ್ದೀನಿ, ಆದಷ್ಟು ಬೇಗ ಎರಡನೇ ಭಾಗದ ಚಿತ್ರೀಕರಣ ಶುರುವಾಗುತ್ತದೆ ಎಂದಿದ್ದರು. ರಾವಣನಾಗಿ ಯಶ್ ನಟಿಸಿರುವುದರಿಂದ ಸ್ಯಾಂಡಲ್‌ವುಡ್‌ನಲ್ಲಿ ಕೂಡ 'ರಾಮಾಯಣ' ಸಿನಿಮಾ ಕುತೂಹಲ ಮೂಡಿಸಿದೆ.

# ಪಾರು ಸೀರಿಯಲ್ ನಟಿಯ ಮುಗ್ಧತೆ ಹಿಂದೆ ಕರಾಳ ಮುಖ!





ಬಿಗ್‌ಬಾಸ್ ಖ್ಯಾತಿಯ ಮೋಕ್ಷಿತಾ ಪೈ ಬಾಲಕಿಯೊಬ್ಬಳನ್ನು ಅಪಹರಣ ಮಾಡಿ ಜೈಲಿಗೆ ಹೋಗಿರುವ ಆರೋಪ ಎದುರಿಸುತ್ತಿದ್ದಾರೆ. ಏನಿದು ವಿಷಯ? ಸದ್ಯ ಬಿಸ್‌ಬಾಸ್‌ನಲ್ಲಿ ತಮ್ಮ ಮುಗ್ಧ ಮುಖದಿಂದ, ಅಷ್ಟೇ ಸಾಫ್ಟ್ ಆಗಿ ಇರುವಲ್ಲಿ ನಟಿ ಮೋಕ್ಷಿತಾ ಪೈ ಎಲ್ಲರ ಮನಸ್ಸನ್ನು ಗೆಲ್ಲುತ್ತಿದ್ದಾರೆ. ಬಿಗ್‌ಬಾಸ್‌ಗೂ ಮುನ್ನ ಪಾರು ಸೀರಿಯಲ್‌ನ ನಟನೆಯಿಂದ ಮನೆ ಮಾತಾಗಿದ್ದವರು ಈಕೆ. ಐದು ವರ್ಷಗಳಿಂದ ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ ಜನಪ್ರಿಯ ಧಾರಾವಾಹಿ ಪಾರು ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು. ಅರಸನ ಕೋಟೆಯ ಮನೆ ಕೆಲಸದಾಳುವಾಗಿರುವ ಪಾರು ಅದೇ ಮನೆಗೆ ಸೊಸೆಯಾಗಿ ಬಂದ ನಂತರ ನಡೆದಿರುವ ಘಟನೆಗಳ ಸುತ್ತಲೂ ಈ ಧಾರಾವಾಹಿಯ ಕಥೆ ಹೆಣೆಯಲ್ಪಟ್ಟಿದೆ. ಈ ಧಾರಾವಾಹಿಯಲ್ಲಿ ಪಾರುವಿನದ್ದು ತ್ಯಾಗಮಯ ಪಾತ್ರ. ಅದು ಎಷ್ಟರಮಟ್ಟಿಗೆ ಎಂದರೆ ಮೈದುನನ ಪತ್ನಿಗಾಗಿ ತನ್ನ ಮಗುವನ್ನೇ ತ್ಯಾಗ ಮಾಡಿದ್ದಾಳೆ. ಮೈದುನನ ಪತ್ನಿ ಜನನಿ ತನ್ನ ಮಗುವನ್ನು ಕಳೆದುಕೊಂಡಾಗ ಅದು ಆಕೆಗೆ ಗೊತ್ತಾಗಬಾರದು ಎಂದು ಪಾರು ತನ್ನ ಮಗುವನ್ನೇ ಆಕೆಗೆ ಕೊಟ್ಟಿದ್ದಾಳೆ. ಇದು ಜನನಿಗೆ ತಿಳಿದಿರಲಿಲ್ಲ, ಕೊನೆಗೂ ಅಂತ್ಯದಲ್ಲಿ ಎಲ್ಲವೂ ತಿಳಿದು ಸೀರಿಯಲ್ ಸುಖಾಂತ್ಯವಾಗಿದೆ. ಇಂಥ ತ್ಯಾಗಮಯ ಪಾತ್ರ ಮಾಡಿದವರು ಮೋಕ್ಷಿತಾ.

ಆದರೆ ಇದೀಗ ನಟಿಯ ಭಯಾನಕ ಕೃತ್ಯವೊಂದು ಬೆಳಕಿಗೆ ಬಂದಿದೆ. ಈಕೆ ಮಕ್ಕಳ ಕಳ್ಳಿ ಎನ್ನುವ ವಿಷಯ ಬಹಿರಂಗಗೊಂಡಿದೆ! ಹತ್ತು ವರ್ಷಗಳ ಹಿಂದೆ ಅಂದರೆ 2014ರಲ್ಲಿ ಬಾಲಕಿಯೊಬ್ಬಳನ್ನು ಗೆಳೆಯನ ಜೊತೆಗೂಡಿ ಅಪಹರಣ ಮಾಡಿ 25 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು ಎನ್ನುವ ಆರೋಪ ಇವರ ಮೇಲಿದೆ. ಬಿ.ಕಾಂ ಮುಗಿಸಿದ ಬಳಿಕ ಟ್ಯೂಷನ್ ತೆಗೆದುಕೊಳ್ಳುತ್ತಿದ್ದ ಮೋಕ್ಷಿತಾ ಅವರಿಗೆ ಆಗ ಇಪ್ಪತ್ತು ವರ್ಷ ವಯಸ್ಸು. ತಮ್ಮ ಬಳಿ ಟ್ಯೂಷನ್‌ಗೆ ಬರುತ್ತಿದ್ದ ಬಾಲಕಿಯನ್ನೇ ಅಪಹರಣ ಮಾಡಿಸಿರುವ ಗಂಭೀರ ಆರೋಪದ ಮೇಲೆ ಜೈಲಿಗೆ ಕೂಡ ಹೋಗಿ ಬಂದಿದ್ದಾರೆ ಮೋಕ್ಷಿತಾ. ಎಂಬಿಎ ಪದವೀಧರನಾಗಿಯೂ ನಿರುದ್ಯೋಗಿ ಆಗಿದ್ದ ಅಲೆಮಾರಿ ಗೆಳೆಯನಿಗಾಗಿ ಈ ಖತರ್ನಾಕ್ ಪ್ಲ್ಯಾನ್ ಮಾಡಿರುವುದು ತನಿಖೆಯಿಂದ ಬಯಲಾಗಿತ್ತು. ನಾಗಭೂಷಣ್ ಎನ್ನುವ 26 ವರ್ಷದ ಗೆಳೆಯನ ಮಾತು ಕೇಳಿ ನಟಿ ಹೀಗೆಲ್ಲಾ ಮಾಡಿರುವುದು ಇದೀಗ ಬೆಳಕಿಗೆ ಬಂದಿದೆ!

ಅಂದಹಾಗೆ ಆಗ ಇವರು ಮೋಕ್ಷಿತಾ ಆಗಿರಲಿಲ್ಲ, ಬದಲಿಗೆ ಇವರ ನಿಜ ಹೆಸರು ಐಶ್ವರ್ಯ. ಈಕೆ ಗೆಳೆಯನ ಜೊತೆಗೂಡಿ ಪವಿತ್ರಾ ಎನ್ನುವ ಬಾಲಕಿಯನ್ನು ಕಿಡ್ನಾಪ್ ಮಾಡಿರುವುದಾಗಿ ತಿಳಿದು ಬಂದಿದೆ. ಇವರ ಬಳಿ ಟ್ಯೂಷನ್‌ಗೆ ಬರುತ್ತಿದ್ದ ಪವಿತ್ರಾಳ ತಂದೆ ಹೋಟೆಲ್ ಉದ್ಯಮಿಯಾಗಿರುವ ಕಾರಣ, ಸಾಕಷ್ಟು ಹಣ ಮಾಡಬಹುದು ಎಂದು ಸಂಚು ರೂಪಿಸಿದ್ದರು. ಅದರಂತೆ ಬಾಲಕಿ ಮನೆಗೆ ನಡೆದುಕೊಂಡು ಹೋಗುವ ಸಂದರ್ಭದಲ್ಲಿ ನಾಗಭೂಷಣ್ ಅವಳನ್ನು ಕಾರಿನೊಳಗೆ ಕಿಡ್ನ್ಯಾಪ್ ಮಾಡಿ ತನ್ನ ಮನೆಯಲ್ಲಿ ಇರಿಸಿಕೊಂಡಿದ್ದ ಎನ್ನಲಾಗಿದೆ. ಬಳಿಕ ಹಣಕ್ಕೆ ಬೇಡಿಕೆ ಇಡಲಾಗುತ್ತದೆ.

ಆದರೆ ಈ ವಿಷಯವನ್ನು ಪವಿತ್ರ ಅಪ್ಪ ಪೊಲೀಸರಿಗೆ ತಿಳಿಸುತ್ತಾರೆ. ಪೊಲೀಸರ ಸಲಹೆಯಂತೆ ಬಾಲಕಿ ತಂದೆ ಸುರೇಶ್ ಹಣ ಕೊಡಲು ಒಪ್ಪಿಗೆ ನೀಡಿ ಯಾವ ಸ್ಥಳಕ್ಕೆ ಬರಬೇಕು ಎಂದು ಕೇಳಿದಾಗ ಪೀಣ್ಯದಲ್ಲಿ ಸ್ಥಳ ಗೊತ್ತು ಮಾಡಲಾಗುತ್ತದೆ. ಬಳಿಕ ಸ್ಥಳವನ್ನು ಬದಲಾಯಿಸಲಾಗುತ್ತದೆ. ಆದರೆ ಅವರು ಏನೇ ತಿಪ್ಪರಲಾಗ ಹಾಕಿದರೂ, ಹೊಂಚು ಹಾಕುತ್ತಿದ್ದ ಮೂರು ಪೊಲೀಸ್ ತಂಡಗಳ ಕೈಗೆ ಆತ ಸಿಕ್ಕಿಬೀಳುತ್ತಾನೆ. ಕೊನೆಗೆ ಮೋಕ್ಷಿತಾ ಪೈ ಕೂಡ ಸಿಕ್ಕಿಬೀಳುತ್ತಾಳೆ. ಜೈಲಿಗೂ ಹೋಗಿ ಬಂದಿದ್ದಾರೆ. ಇಷ್ಟೆಲ್ಲಾ ಆರೋಪಗಳು ಸದ್ಯ ನಟಿಯ ಮೇಲೆ ಇದ್ದು, ಅದಕ್ಕೆ ಅವರು ಏನು ಸ್ಪಷ್ಟನೆ ಕೊಡುತ್ತಾರೆ ಎನ್ನುವುದನ್ನು ಬಿಗ್‌ಬಾಸ್‌ನಿಂದ ಹೊರಕ್ಕೆ ಬಂದ ಮೇಲೆ ನೋಡಬೇಕು. 2017ರಲ್ಲಿ ಐಶ್ವರ್ಯ ಮೇಲಿದ್ದ ಕೇಸ್ ವಿವಿಧ ಕಾರಣಗಳಿಂದ ಖುಲಾಸೆ ಆಗಿದೆ ಎಂದೂ ತಿಳಿದುಬಂದಿದೆ. ಅಂದಹಾಗೆ ಮೋಕ್ಷಿತಾ ಅವರಿಗೆ ತಮ್ಮನೊಬ್ಬನಿದ್ದಾನೆ. ಸದ್ಯ ಈ ತಮ್ಮನಿಗೆ ಮೋಕ್ಷಿತಾ ಅವರೇ ಅಮ್ಮನಂತೆ ನೋಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣ, ಆತ ಮಾನಸಿಕ ಅಸ್ವಸ್ಥ. ಆತನ ಆರೈಕೆ ಮಾಡುವ ಜವಾಬ್ದಾರಿ ಮೋಕ್ಷಿತಾ ಅವರ ಮೇಲಿದೆ. ಒಮ್ಮೆ ರಿಯಾಲಿಟಿ ಷೋ ಒಂದಕ್ಕೆ ತಮ್ಮ ತಮ್ಮನನ್ನು ಕರೆದುಕೊಂಡು ಬಂದಿದ್ದ ಪಾರು ಅವರು, ತನ್ನ ತಮ್ಮನನ್ನು ನಾನೇ ತಂದೆ ಹಾಗೂ ತಾಯಿಯ ಹಾಗೆ ನೋಡಿಕೊಳ್ಳುತ್ತಿದ್ದೇನೆ. ಅವನಿಗೂ ನಾನೆಂದರೆ ತುಂಬಾ ಇಷ್ಟ ಎಂದು ಭಾವುಕರಾಗಿದ್ದರು. ಇದರಿಂದ ಮೋಕ್ಷಿತಾ ಬಗ್ಗೆ ಕಂಬನಿ ಮಿಡಿದವರೇ ಹೆಚ್ಚು. ಆದರೆ ಈಗ?

# ಶಿವಣ್ಣನಿಗೆ ಆಕ್ಷನ್ ಕಟ್ ಹೇಳಲು ರೆಡಿಯಾದ ಪವನ್ ಒಡೆಯರ್



ಶಿವಣ್ಣ ಅಭಿನಯದ ಭೈರತಿ ರಣಗಲ್ ಅದ್ಭುತ ಯಶಸ್ಸು ಕಂಡಿದೆ. ಈಗ ಶಿವಣ್ಣ ನಿರ್ದೇಶಕ ಪವನ್ ಒಡೆಯರ್ ಅವರ ಹೊಸ ಸಿನಿಮಾವನ್ನು ಒಪ್ಪಿಕೊಂಡಿದ್ದಾರೆ. ಈಗಾಗಲೇ ಒಂದೆರಡು ಚಿತ್ರಗಳಿಗೆ ಕಮಿಟ್ ಆಗಿರುವ ಶಿವರಾಜ್‌ಕುಮಾರ್ ಸ್ಯಾಂಡಲ್‌ವುಡ್‌ನ ಯಶಸ್ವಿ ನಿರ್ದೇಶಕರಾದ ಪವನ್ ಒಡೆಯರ್ ಅವರ ಜೊತೆ ಕೈ ಜೋಡಿಸಲು ಹೊರಟಿದ್ದಾರೆ. ನಿರ್ದೇಶಕರ ಡಾರ್ಲಿಂಗ್ ಶಿವಣ್ಣನಿಗೆ ಪವನ್ ಆಕ್ಷನ್ ಕಟ್ ಹೇಳುತ್ತಿರುವ ಸಂತಸದಲ್ಲಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಕೇವಲ ನಿರ್ದೇಶಕರಾಗಿ ಮಾತ್ರವಲ್ಲದೇ ಪವನ್ ಒಡೆಯರ್ ನಿರ್ಮಾಪಕರಾಗಿಯೂ ಹೆಸರು ಮಾಡಿದ್ದಾರೆ. ಈ ಹಿಂದೆ ಜಾನಪದ ಕತೆಯುಳ್ಳ ಡೊಳ್ಳು ಚಿತ್ರವನ್ನು ನಿರ್ಮಾಣ ಮಾಡುವ ಮೂಲಕ ನಿರ್ಮಾಪಕರಾಗಿ ಸಿನಿಮಾ ರಂಗದಲ್ಲಿ ತನ್ನ ಅದೃಷ್ಟ ಪರೀಕ್ಷೆಗಿಳಿದಿದ್ದ ಅವರು, ಮೊದಲ ನಿರ್ಮಾಣದಲ್ಲಿಯೇ ರಾಷ್ಟ್ರ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಅವಸ್ತಿ ವರ್ಸಸ್ ಅವಸ್ತಿ ಎಂಬ ಬಾಲಿವುಡ್ ಚಿತ್ರವನ್ನೂ ನಿರ್ಮಿಸಿರುವ ಪವನ್ ಒಡೆಯರ್, ಸದ್ಯ ವೆಂಕ್ಯಾ ಎಬ್ಬುವ ಚಿತ್ರದ ನಿರ್ಮಾಣದಲ್ಲಿ ತೊಡಗಿಸಿದ್ದಾರೆ. ಈಗ ಪವನ್ ಒಡೆಯರ್, ತಮ್ಮ ಒಡೆಯರ್ ಮೂವೀಸ್ ಬ್ಯಾನರ್ ನಡಿ ನಾಲ್ಕನೇ ಚಿತ್ರವನ್ನು ನಿರ್ಮಿಸಲು ಹೊರಟಿದ್ದಾರೆ. ಅದು ಶಿವಣ್ಣನ ಜತೆ ಎನ್ನುವುದು ವಿಶೇಷ.

2025ರ ಆರಂಭದಲ್ಲಿ ಶಿವಣ್ಣ ಹಾಗೂ ಪವನ್ ಒಡೆಯರ್ ಕಾಂಬಿನೇಶನ್‌ನಲ್ಲಿ ಮೂಡಿಬರುತ್ತಿರುವ ಈ ಹೊಸ ಚಿತ್ರದ ಚಿತ್ರೀಕರಣ ಪ್ರಾರಂಭವಾಗಲಿದೆ. ಶಿವಣ್ಣ ಅಮೆರಿಕಾದಿಂದ ವಾಪಸ್ ಬಂದ ಮೇಲೆ ಯಾವ ಚಿತ್ರ ಮೊದಲು ಎನ್ನುವುದು ನಿರ್ಧಾರವಾಗಲಿದೆ. ಹ್ಯಾಟ್ರಿಕ್ ಹೀರೋ, ಕರುನಾಡ ಕಿಂಗ್ ಶಿವಣ್ಣ ಅವರಿಗೆ ಆಕ್ಷನ್ ಕಟ್ ಹೇಳುತ್ತಿರುವ ಖುಷಿಯ ವಿಷಯವನ್ನು ಮಾಧ್ಯಮದೊಂದಿಗೆ ಹಂಚಿಕೊಂಡ ನಿರ್ದೇಶಕ ಪವನ್ ಒಡೆಯರ್, ಪ್ರತಿಯೊಬ್ಬ ನಿರ್ದೇಶಕರಿಗೂ ಶಿವಣ್ಣನಂಥ ಲೆಜೆಂಡರಿ ಆಕ್ಟರ್ ಜತೆ ಚಿತ್ರ ಮಾಡಬೇಕೆಂಬ ಕನಸು ಇರುತ್ತದೆ. ನನ್ನ ಆ ಕನಸು ಈಗ ನನಸಾಗುತ್ತದೆ. ಥ್ರಿಲ್ಲರ್ ಜೊತೆಗೆ ಔಟ್ ಅಂಡ್ ಔಟ್ ಕಮರ್ಷಿಯಲ್ ಎಂಟರ್ ಟೈನರ್ ಕಾನ್ಸೆಪ್ಟ್ ಹೊಂದಿರುವ ಚಿತ್ರವನ್ನು ಪವನ್ ನಿರ್ದೇಶನ ಮಾಡುತ್ತಿದ್ದು, ಹೆಚ್ಚಿನ ಮಾಹಿತಿಯನ್ನು ಸದ್ಯಕ್ಕೆ ರಿವೀಲ್ ಮಾಡಲು ಆಗುತ್ತಿಲ್ಲ, ಆದರೆ ಈ ಹಿಂದಿನ ಸಿನಿಮಾಗಳಿಗಿಂತ ಈ ಚಿತ್ರದಲ್ಲಿ ಶಿವಣ್ಣ ತುಂಬಾ ವಿಭಿನ್ನವಾಗಿಯೇ ಕಾಣಲಿದ್ದಾರೆ ಎಂದು ಹೇಳಿದರು ಒಡೆಯರ್ ಮೂವೀಸ್ ಬ್ಯಾನರ್ ನಡಿ ಅಪೇಕ್ಷಾ ಪವನ್ ಒಡೆಯರ್ ಹಾಗೂ ಪವನ್ ಒಡೆಯರ್ ಜೋಡಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಅರ್ನಾ ಕ್ರಿಯೇಟಿವ್ ನಿರ್ಮಾಣದಲ್ಲಿ ಸಾಥ್ ಕೊಡಲಿದ್ದಾರೆ.



# 'ದಾಸರಹಳ್ಳಿ' ಮಾಸ್ ಹಂಗಾಮಾ

'ಬಿಗ್‌ಬಾಸ್ ಕನ್ನಡ ಸೀಸನ್-11'ರ ಸ್ಪರ್ಧಿಯಾಗಿದ್ದ ನಟ ಧರ್ಮ ಕೀರ್ತಿರಾಜ್, 'ದೊಡ್ಮನೆ'ಯಿಂದ ಹೊರಬಂದ ಬಳಿಕ ಎರಡು-ಮೂರು ಸಿನಿಮಾಗಳಲ್ಲಿ ಬಿಜಿಯಾಗಿದ್ದಾರೆ. ಅದರಲ್ಲಿ 'ದಾಸರಹಳ್ಳಿ' ಒಂದು. ಮಾಸ್ ಜಾನರ್‌ನ ಈ ಸಿನಿಮಾವನ್ನು ಎಂ.ಆರ್. ಶ್ರೀನಿವಾಸ್ ನಿರ್ದೇಶಿಸುತ್ತಿದ್ದಾರೆ. ಬೆಂಗಳೂರು ಜೀವನದ ಸುತ್ತ ಕಥೆ ಹೆಣೆಯಲಾಗಿದೆ. ಧರ್ಮಗೆ ನಟಿ ನೇಹಾ ಜೋಡಿಯಾಗಿದ್ದು, ಇತ್ತೀಚೆಗೆ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಲಾಯಿತು. ಮಾಸ್ ಹಾಗೂ ಆ್ಯಕ್ಷನ್ ಲುಕ್‌ನಲ್ಲಿ ಧರ್ಮ ಕೀರ್ತಿರಾಜ್ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ಎಂ.ಆರ್. ಶ್ರೀನಿವಾಸ್, 'ತಂದೆಯ ಪ್ರೋತ್ಸಾಹ, ಪ್ರೀತಿ ಇಲ್ಲದಿದ್ದರೆ, ಮಕ್ಕಳು ಹೇಗೆ ಸಮಾಜದಲ್ಲಿ ಹಾದಿ ತಪ್ಪುತ್ತಾರೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಸಾಮಾನ್ಯ ಹುಡುಗನೊಬ್ಬ ಇಡೀ ದಾಸರಹಳ್ಳಿಯನ್ನು ಹೇಗೆ ಮೆಟ್ರೋ ರೇಂಜಿಗೆ ತೆಗೆದುಕೊಂಡು ಹೋಗುತ್ತಾನೆ ಎಂಬುದನ್ನು ಅದ್ಭುತವಾಗಿ ತೋರಿಸಲಾಗಿದೆ' ಎಂದರು. ಧರ್ಮ, 'ಈ ಚಿತ್ರದಲ್ಲಿ ಅದ್ಭುತ ಸಂದೇಶವಿದೆ ಅತಿಯಾದ ಮದ್ಯ ಸೇವನೆಯಿಂದ ಹೇಗೆ ಬದುಕು ಹಾಳಾಗುತ್ತದೆ ಎಂಬುದು ತೋರಿಸಲಾಗಿದೆ. ಸಿನಿಮಾದಲ್ಲಿ ನಾಲ್ಕು ಕಥೆ ಬರುತ್ತವೆ' ಎಂದರು. ನಟಿ ನೇಹಾ, 'ಚಿತ್ರರಂಗಕ್ಕೆ ನಾನು ಹೊಸಬಳಾದರೂ ನನಗೆ ತುಂಬಾ ಪ್ರೋತ್ಸಾಹ ನೀಡಿದ್ದಾರೆ. ದಾಸರಹಳ್ಳಿ ಎಂದಾಕ್ಷಣ ಒಂದು ಕುತೂಹಲ ಹುಟ್ಟುತ್ತದೆ' ಎಂದರು. ಚಿತ್ರದಲ್ಲಿ ಥ್ರಿಲ್ಲರ್ ಮಂಜು, ಉಮೇಶ್ ರಾಜ್, ಕೌರವ ವೆಂಕಟೇಶ್, ಜಾಗ್ವಾರ್ ಸಣ್ಣಪ್ಪ, ಎಂ.ಎಂಸ್. ಉಮೇಶ್, ಹೊನ್ನವಳ್ಳಿ ಕೃಷ್ಣ ಸೇರಿ ತಾರಾಗಣದಲ್ಲಿದ್ದಾರೆ. 2025ರ ಫೆಬ್ರವರಿಗೆ ಚಿತ್ರ ತೆರೆಗೆ ಬರಲು ಸಿದ್ಧತೆ ನಡೆಸುತ್ತಿದೆ.

# ಸದ್ಯದಲ್ಲೇ ಥ್ರಿಲ್ಲರ್ ಅಧಿಪತ್ರ ಟ್ರೈಲರ್



ರಂಗಿತರಂಗ, ಕಾಂತಾರ ಚಿತ್ರಗಳ ನಂತರದ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಸೊಗಡಿನ ಚಲನಚಿತ್ರಗಳು ದೇಶಾದ್ಯಂತ ಸದ್ದು ಮಾಡುತ್ತಿವೆ, ಇಂಥ ಚಿತ್ರಗಳು ಹೆಚ್ಚು ಹೆಚ್ಚು ಪ್ರೇಕ್ಷಕರನ್ನು ಆಕರ್ಷಿಸುತ್ತಿವೆ. ಅದೇ ಹಾದಿಯಲ್ಲಿ ನಿರ್ಮಾಣವಾಗಿರುವ ಮತ್ತೊಂದು ಕರಾವಳಿ ಭಾಗದ ಆಚರಣೆ, ಸಂಸ್ಕೃತಿಯನ್ನು ಹೇಳುವ ಚಿತ್ರ ಅಧಿಪತ್ರ. ಚಯನ್ ಶೆಟ್ಟಿ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಥ್ರಿಲ್ಲರ್ ಕಥಾಹಂದರ ಇರುವ ಅಧಿಪತ್ರ ಚಿತ್ರದಲ್ಲಿ ಬಿಗ್‌ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ಅವರು ನಾಯಕನಾಗಿ ನಟಿಸಿದ್ದಾರೆ. ಈಗಾಗಲೇ ರಿಲೀಸಾಗಿರುವ ಚಿತ್ರದ ಟೀಸರ್ ಅತಿಹೆಚ್ಚಿನ ವೀಕ್ಷಕರಿಂದ ವೀಕ್ಷಣೆಯಾಗುವ ಮೂಲಕ ಚಿತ್ರರಸಿಕರಲ್ಲಿ ದೊಡ್ಡ ಮಟ್ಟದ ಕುತೂಹಲವನ್ನು ಹುಟ್ಟು ಹಾಕಿದೆ. ಈಗಾಗಲೇ ತನ್ನ ಮೇಕಿಂಗ್, ಕಂಟೆಂಟ್ ಹಾಗೂ ಕಾನ್ಸೆಪ್ಟ್ ಮೂಲಕವೇ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟಿಸಿರುವ ಈ ಚಿತ್ರದ ಆಡಿಯೋ ಹಕ್ಕನ್ನು ಕನ್ನಡದ ಪ್ರತಿಷ್ಠಿತ ಆಡಿಯೋ ಸಂಸ್ಥೆಯಾದ ಲಹರಿ ಆಡಿಯೋ ಖರೀದಿಸಿದೆ.

ಅಪ್ಪಟ ಕರಾವಳಿ ಪ್ರತಿಭೆಯಾದ ನಟ, ನಿರ್ದೇಶಕರೂ ಆದ ರೂಪೇಶ್ ಶೆಟ್ಟಿ ಅವರು ನಟಿಸಿರುವ, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿದ ಅಧಿಪತ್ರ, ಚಿತ್ರವು ತನ್ನ ವಿಶಿಷ್ಟ ಮೇಕಿಂಗ್‌ನಿಂದಲೇ ಕುತೂಹಲವನ್ನು ಹುಟ್ಟು ಹಾಕಿದ್ದು, ಸದ್ಯದಲ್ಲೇ ಚಿತ್ರದ ಟ್ರೈಲರ್ ಬಿಡುಗಡೆಯಾಗಲಿದೆ. ದಕ್ಷಿಣ ಕನ್ನಡ ಸುತ್ತ ಮುತ್ತಲ ಕರಾವಳಿ ಭಾಗದ ಸಂಸ್ಕೃತಿ, ಆಚರಣೆಗಳನ್ನು ಹೊತ್ತು ಬರುತ್ತಿರುವ ಅಧಿಪತ್ರ ಸಿನಿಮಾದ ಮೊದಲ ತುಣುಕಿನಲ್ಲಿ ಕರಾವಳಿ ಭಾಗದ ವಿಶೇಷ ಆಚರಣೆ ಆಟ ಕಳಂಜಾ, ಯಕ್ಷಗಾನ, ಹುಲಿ ಕುಣಿತದ ಜೊತೆಗೆ ಪ್ರೇಕ್ಷಕರನ್ನು ಸೀಟಿನ ತುದಿಗೆ ಕೂರಿಸುವ ಅದ್ಭುತವಾದ ಕಥಾಹಂದರವಿದೆ. ಈ ಚಿತ್ರದಲ್ಲಿ ಯುವನಟ ರೂಪೇಶ್ ಶೆಟ್ಟಿ ಅವರು ಖಾಕಿ ಖದರ್‌ನಲ್ಲಿ ಹೊರಹೊಮ್ಮಿದ್ದಾರೆ. ಕರಾವಳಿ ಭಾಗದ ಗಟ್ಟಿ ಕಥೆಯೊಂದನ್ನು ಹೊತ್ತು ತಂದಿರುವ ನಿರ್ದೇಶಕ ಚಯನ್ ಶೆಟ್ಟಿ ಅವರು ತಮ್ಮ ನಿರ್ದೇಶನದ ಪ್ರಥಮ ಚಿತ್ರದಲ್ಲೇ ಭರ್ಜರಿ ಗೆಲುವಿನ ಸೂಚನೆ ನೀಡಿದ್ದಾರೆ. 'ಕಾಂತಾರ' ಖ್ಯಾತಿಯ ಪ್ರಕಾಶ್ ತುಮಿನಾಡು, ಎಂ.ಕೆ. ಮಠ, ರಘು ಪಾಂಡೇಶ್ವರ್, ದೀಪಕ್ ರೈ, ಕಾರ್ತಿಕ್ ಭಟ್, ಅನಿಲ್ ಉಪ್ಪಾಲ್, ಪ್ರಶಾಂತ್ ಅವರುಗಳು ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದು, ಕಿರುತೆರೆಯ ಗಿಚ್ಚಿ ಗಿಲಿಗಿಲಿ ಖ್ಯಾತಿಯ ಜಾಹ್ನವಿ ಅವರು ಅಧಿಪತ್ರ ಚಿತ್ರದಲ್ಲಿ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ. ಕೆ.ಆರ್. ಸಿನಿ ಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ದಿವ್ಯಾ ನಾರಾಯಣ್, ಕುಲದೀಪ್ ರಾಘವ್ ಹಾಗೂ ಲಕ್ಷ್ಮೀಗೌಡ ಅವರುಗಳು ಸೇರಿ ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಉಳಿದಂತೆ ಕಾರ್ತಿಕ್ ಶೆಟ್ಟಿ ಹಾಗೂ ಸತೀಶ್ ಶೆಟ್ಟಿ ಅವರುಗಳು ಸಹ ನಿರ್ಮಾಪಕರಾಗಿ ಇವರ ಜೊತೆ ಕೈಜೋಡಿಸಿದ್ದಾರೆ. ಸದ್ಯ ಚಿತ್ರವೀಗ ಪೋಸ್ಟ್ ಪ್ರೊಡಕ್ಷನ್ ಮುಗಿಸಿಕೊಂಡು ಬಿಡುಗಡೆಯ ಸಿದ್ದತೆಯಲ್ಲಿದೆ.



# ಅವಕಾಶ ಸಿಕ್ಕರೆ ಮತ್ತೆ ಕನ್ನಡದಲ್ಲಿ ನಟಿಸುತ್ತೇನೆ

ಬಾಲಿವುಡ್ ನಟಿ ಸನ್ನಿ ಲಿಯೋನ್ ಕಳೆದ 15 ವರ್ಷಗಳಲ್ಲಿ ಕನ್ನಡ, ಹಿಂದಿ, ತೆಲುಗು, ಮಲಯಾಳಂ ಸೇರಿ 25ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ಪ್ರೇಮ್ ನಟನೆಯ 'ಡಿಕೆ' ಸಿನಿಮಾದ ಮೂಲಕ ಕನ್ನಡ ಚಿತ್ರರಂಗಕ್ಕೂ ಪರಿಚಯವಾಗಿದ್ದರು. ಈ ಚಿತ್ರದಲ್ಲಿ 'ಶೇಷಮ್ಮ' ಎಂಬ ಹಾಡಿಗೆ ಹೆಜ್ಜೆ ಹಾಕಿ ಗಮನ ಸೆಳೆದಿದ್ದರು. ನಂತರ ಇಂದ್ರಜಿತ್ ಲಂಕೇಶ್ ನಿರ್ದೇಶನದ ವಿ. ರವಿಚಂದ್ರನ್ ಅಭಿನಯದ 'ಲವ್ ಯೂ ಆಲಿಯಾ'ದಲ್ಲಿ ಕೂಡ ವಿಶೇಷ ಸಾಂಗ್‌ಗೆ ನೃತ್ಯ ಮಾಡಿದ್ದರು. ಆ ಬಳಿಕ ಮತ್ತೆ ಕನ್ನಡ ಚಿತ್ರರಂಗದಲ್ಲಿ ಕಾಣಿಸಿಕೊಂಡಿಲ್ಲ. ಈ ಬಗ್ಗೆ ಸನ್ನಿ ಲಿಯೋನ್, 'ಕನ್ನಡದಲ್ಲಿ ಒಳ್ಳೆಯ ಸಿನಿಮಾಗಳಿಗೆ ಅವಕಾಶ ಸಿಕ್ಕರೆ ಖಂಡಿತವಾಗಿಯೂ ಮತ್ತೊಮ್ಮೆ ಅಭಿನಯಿಸುತ್ತೇನೆ' ಎಂದು ಮನದ ಇಂಗಿತ ವ್ಯಕ್ತಪಡಿಸಿದ್ದಾರೆ. ಸದ್ಯ ಸನ್ನಿ ಲಿಯೋನ್ 'ರಂಗೀಲಾ', 'ಶೇರೊ', 'ಹೆಲೆನ್' ಚಿತ್ರದಲ್ಲಿ ನಟಿಸುತ್ತಿದ್ದಾರೆ.

Vol. 40 No. 28 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com